ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 39 | ಸೆಪ್ಟೆಂಬರ್ 20-26, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಕಾಮ್ರೇಡ್ ಗೌತಮ್ ದಾಸ್ ಲಾಲ್ ಸಲಾಂ



ಕೋಮುವಾದ ಮತ್ತು ಜಾತಿವಾದದ ಡಬ್ಬಲ್ ಎಂಜಿನ್



'ಆರ್ಥಿಕ ಸುಧಾರಣೆ'ಗಳ ಮೂರು ದಶಕಗಳು



ಸೂತಕದ ಮನೆಯಲ್ಲಿ ಹ್ಯಾಪಿ ಬರ್ತಡೇ

'ವಿಜ್ಞಾನ ಎಂಬ ಅಹಂಕಾರ' ಮತ್ತು ಅಜ್ಞಾನದ ಬಲೆ





ನೂತನ ಶಿಕ್ಷಣ ನೀತಿಯ ತರಾತುರಿ

ಆಶ್ವಾಸನೆಗಳನ್ನು ಈಡೇರಿಸಲಾರದ ಮಂದಿಯಿಂದ ಹಿಂಸಾಚಾರ-ಮಾಣಿಕ್ ಸರ್ಕಾರ್
ಇಂತಹ ತಂತ್ರಗಳಿಂದ ಪ್ರತಿಭಟನೆಗಳನ್ನು ಬಗ್ಗುಬಡೆಯಲು ಸಾಧ್ಯವಿಲ್ಲ-ಸೀತಾರಾಮ್ ಯೆಚುರಿ

ತ್ರಿಪುರಾದಲ್ಲಿ ಸಿಪಿಐ(ಎಂ) ಮತ್ತು ಇತರ ಪ್ರತಿಪಕ್ಷಗಳ ಮೇಲೆ ಅಭೂತಪೂರ್ವ ಅಮಾನುಷ ಹಿಂಸಾಚಾರವನ್ನು ಕೊನೆಗೊಳಿಸಲು ಕೇಂದ್ರ ಸರಕಾರ ತಕ್ಷಣವೇ ಮಧ್ಯಪ್ರವೇಶಿಸಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ನಾಲ್ಕು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಮಾಣಿಕ್ ಸರ್ಕಾರ್ ದಿಲ್ಲಿಯಲ್ಲಿ ನಡೆಸಿದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಲೋಕಸಭಾ ಸದಸ್ಯ ಮತ್ತು ರಾಜ್ಯದ ಬುಡಕಟ್ಟು ಜನಗಳ ಮುಖಂಡ ಜಿತೇಂದ್ರ ಚೌಧುರಿಯವರೂ ಇದ್ದರು.

"ಆಗಸ್ಟ್ 28ರಿಂದ ಬಿಜೆಪಿ ಮಂದಿ ಸಿಪಿಐ(ಎಂ)ನ ಕಚೇರಿಗಳ ಮೇಲೆ ಹರಿಯಬಿಟ್ಟಿರುವ ಅತ್ಯಂತ ದೂಷಣಾರ್ಹ ಹಿಂಸಾಚಾರ ರಾಜ್ಯಕ್ಕೆ ಮತ್ತು ಅದರ ಪ್ರಜಾಪ್ರಭುತ್ವ ಸಂಸ್ಕೃತಿಗೆ ಮತ್ತು ಜನತೆಗೆ ಪ್ರಚಂಡ ಹಾನಿ ಉಂಟು ಮಾಡಿದೆ" ಎಂದ ಯೆಚುರಿ, "ನಾವು ಯಾವುದೇ ಪಕ್ಷದ ವಿರುದ್ಧ ಹಿಂಸಾಚಾರದ ಸಂಸ್ಕೃತಿಯನ್ನು ಖಂಡಿಸುತ್ತೇವೆ" ಎಂದರು. "ಈ ಹಿಂಸಾಚಾರ ಉದ್ದೇಶಪೂರ್ವಕ, ಪೂರ್ವಯೋಜಿತ ಮತ್ತು ಭಾರತದ ಸಂವಿಧಾನದ ಪ್ರತಿಯೊಂದು ನೀತಿಗೂ ವಿರುದ್ಧವಾದದ್ದು" ಎಂದು ಅವರು ಮುಂದುವರೆದು ಹೇಳಿದರು.

ಹಿಂಸಾಚಾರ ಆರಂಭವಾದಂದಿನಿಂದ ಹೊರಬಂದಿರುವ ವೀಡಿಯೋ ರೆಕಾರ್ಡಿಂಗ್‌ಗಳಲ್ಲಿ ಕಾಣಬರುವ ಎಲ್ಲ ಗಲಭೆಕೋರರ ವಿರುದ್ಧ ಕಾನೂನುಕ್ರಮಗಳನ್ನು ಕೈಗೊಳ್ಳಬೇಕು ಎಂದು ಮೂವರೂ ಮುಖಂಡರು ಆಗ್ರಹಿಸಿದರು. ಈ ವೀಡಿಯೋಗಳು ಬಹಳ ದಿನಗಳಿಂದ ಸಾರ್ವಜನಿಕವಾಗಿ ಪ್ರಸಾರದಲ್ಲಿವೆ. ಆದರೂ ಗಲಭೆ, ಅಗ್ನಿಸ್ಪರ್ಶ ಮತ್ತಿತರ ಹಲ್ಲೆಗಳಲ್ಲಿ ನಿರತರಾಗಿರುವವರ ಮೇಲೆ ಯಾವುದೇ ಕಾನೂನುಕ್ರಮ ಕೈಗೊಂಡಿಲ್ಲ. ಬದಲಿಗೆ ಪೋಲೀಸರು ಸಿಪಿಐ(ಎಂ) ಸದಸ್ಯರು, ಬೆಂಬಲಿಗರು, ಮತ್ತು ಇತರ ಪ್ರತಿಪಕ್ಷಗಳ ಬೆಂಬಲಿಗರ ಮೇಲೆ ಕೇಸುಗಳನ್ನು ಹಾಕಿದ್ದಾರೆ. ಇವನ್ನೆಲ್ಲ ವಾಪಾಸು ಪಡೆಯಬೇಕು, ಹಿಂಸಾಚಾರದಲ್ಲಿ ಗಾಯ ಗೊಂಡವರಿಗೆ ಆಸ್ತಿಹಾನಿ ಅನುಭವಿಸಿದವರಿಗೆ ಪರಿಹಾರ ಕೊಡಬೇಕು ಎಂದು ಅವರು ಆಗ್ರಹಿಸಿದರು.



ಸರ್ವಾಧಿಕಾರಶಾಹಿಯ ಪ್ರಯೋಗಶಾಲೆ

"ತ್ರಿಪುರಾದಲ್ಲಿನ ಹಿಂಸಾಚಾರ ದೇಶದಲ್ಲಿ ಎಂದೂ ಕಂಡು ಕೇಳದ ರೀತಿಯದ್ದು. ತ್ರಿಪುರಾವನ್ನು ಒಂದು ಪ್ರಯೋಗಶಾಲೆಯಾಗಿಸುವುದು–ಏಕಪಕ್ಷ, ಸರ್ವಾಧಿಕಾರಶಾಹಿ ಮತ್ತು ಫ್ಯಾಸಿಸ್ಟ್ ತೆರನ ಪ್ರಭುತ್ವದ ಪ್ರಯೋಗಶಾಲೆ ಸೃಷ್ಟಿಸುವುದು ಆಳುವ ಪಕ್ಷದ ಉದ್ದೇಶ. ಇದನ್ನು ಮುಂದೆ ದೇಶದ ಇತರೆಡೆಗಳಲ್ಲಿ ಪುನರಾವರ್ತಿಸಲಾಗುವುದು. ಆದ್ದರಿಂದ ಈ ಹಿಂಸಾಚಾರ ಕೇವಲ ತ್ರಿಪುರಾದ ಸಮಸ್ಯೆಯಲ್ಲ. ಇದು ದೇಶಾದ್ಯಂತ ಶಾಂತಿ, ಪ್ರಜಾಪ್ರಭುತ್ವ , ಜಾತ್ಯತೀತತೆಯಲ್ಲಿ ನಂಬಿಕೆಯಿರುವ ಎಲ್ಲರ ಸಮಸ್ಯೆ" ಎಂದು ಮಾಣಿಕ್ ಸರ್ಕಾರ್ ಹೇಳಿದರು.

ಈ ಪತ್ರಿಕಾಗೋಷ್ಠಿಯಲ್ಲಿ ವ್ಯಾಪಕ ಹಿಂಸಾಚಾರದ ವೀಡಿಯೋ ಫೂಟೇಜ್‌ಗಳನ್ನು ಪತ್ರಕರ್ತರಿಗೆ ತೋರಿಸಲಾಯಿತು. ಇವುಗಳಲ್ಲಿ ಸಿಪಿಐ(ಎಂ) ಮುಖಂಡರ ವಿರುದ್ಧ ಬಿಜೆಪಿ ಬಾವುಟಗಳನ್ನು ಹಿಡಿದವರು ನಡೆಸಿರುವ ಹಿಂಸಾಚಾರದ ದೃಶ್ಯಗಳಿವೆ, ಒಬ್ಬ ಸುಪರಿಚಿತ ಬಿಜೆಪಿ ಮುಖಂಡ ಸಿಪಿಐ(ಎಂ) ಸದಸ್ಯರ ಮೇಲೆ ದೈಹಿಕ ಹಲ್ಲೆ ನಡೆಸಲು ಕರೆಕೊಡುವ ದೃಶ್ಯಗಳೂ ದಾಖಲಾಗಿವೆ.

ಸಪ್ಟಂಬರ್ 7 ಮತ್ತು 8ರ 48 ಗಂಟೆಗಳಲ್ಲೇ ಪ್ರತಿಪಕ್ಷಗಳ 44 ಕಚೇರಿಗಳ ಮೇಲೆ ಹಲ್ಲೆ ನಡೆಸಲಾಯಿತು., ಸುಟ್ಟು ಹಾಕಲಯಿತು ಅಥವ ಹಾಳುಗೆಡವಲಾಯಿತು. ಸಿಪಿಐ(ಎಂ) ಸಂಗ್ರಹಿಸಿರುವ ಮಾಹಿತಿಗಳ ಪ್ರಕಾರ ಈ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ನಡೆಸಿರುವ ರಾಜಕೀಯ ಹಿಂಸಾಚಾರದಲ್ಲಿ 21 ಸಿಪಿಐ(ಎಂ) ಕಾರ್ಯಕರ್ತರ ಕೊಲೆಯಾಗಿದೆ, 3174 ಮನೆಗಳನ್ನು ಧ್ವಂಸಮಾಡಲಾಗಿದೆ ಅಥವ ಲೂಟಿ ಮಾಡಲಾಗಿದೆ. ಇತ್ತೀಚಿನ ದಿನಗಳಲ್ಲಿ ಹಲವು ಮಾಧ್ಯಮ ವ್ಯಕ್ತಿಗಳು, ಟಿವಿ ಮತ್ತು ಪತ್ರಿಕಾ

ಪುಟ 14 ನೋಡಿ



ಕಾಂ. ಗೌತಮ್ ದಾಸ್ ನಿಧನ

ಸಿಪಿಐ(ಎಂ)ನ ತ್ರಿಪುರಾ ರಾಜ್ಯ ಕಾರ್ಯದರ್ಶಿ ಮತ್ತು ಕೇಂದ್ರ ಸಮಿತಿ ಸದಸ್ಯ ಕಾಂ. ಗೌತಮ್ ದಾಸ್ ಸಪ್ಟಂಬರ್ 16ರ ಮುಂಜಾನೆ ನಿಧನರಾಗಿದ್ದಾರೆ. ಕೊಲ್ಕತಾದ ಆಸ್ಪತ್ರೆಯೊಂದರಲ್ಲಿ ಅವರು ಕೊವಿಡ್‌ಗೆ ಶುಶ್ರೂಷೆ ಪಡೆಯುತ್ತಿದ್ದರು. ಅವರಿಗೆ 70 ವರ್ಷವಾಗಿತ್ತು. ಅವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಳವಾದ ಆಘಾತ ಮತ್ತು ದುಃಖ ವ್ಯಕ್ತಪಡಿಸಿದೆ.

ತಮ್ಮ ಶಾಲಾದಿನಗಳಿಂದಲೂ ತ್ರಿಪುರಾದ ವಿದ್ಯಾರ್ಥಿ ಆಂದೋಲನದ ಭಾಗವಾಗಿ ರಾಜಕೀಯದಲ್ಲಿ ಸಕ್ರಿಯರಾಗಿದ್ದ ಗೌತಮ್ ದಾಸ್‌ಕಾಲೇಜಿನಲ್ಲಿ ಓದುತ್ತಿದ್ದಾಗ ಪಕ್ಷದ ಪತ್ರಿಕೆ 'ದೇಶೇರ್ ಕಥಾ' ವಾರಪತ್ರಿಕೆಯಲ್ಲಿ ಕೆಲಸ ಮಾಡಲಾರಂಭಿಸಿದರು. ಮುಂದೆ 1979ರಲ್ಲಿ ಅದು ದಿನಪತ್ರಿಕೆಯಾದಾಗ ಅದರ ಸ್ಥಾಪಕ ಸಂಪಾದಕರಾದರು. ಈ ಹೊಣೆಗಾರಿಕೆಯನ್ನು ಅವರು 2015ರಲ್ಲಿ ಪಕ್ಷದ ಸಂಘಟನೆಯ ಜವಾಬ್ದಾರಿ ವಹಿಸಿಕೊಳ್ಳುವ ವರೆಗೂ ಅತ್ಯುತ್ಕ್ರಷ್ಟ ರೀತಿಯಲ್ಲಿ ನಿಭಾಯಿಸಿದರು. ದೇಶೇರ್ ಕಥಾವನ್ನು ಒಂದು ಪೂರ್ಣ ಪ್ರಮಾಣದ ಸುದ್ದಿಪತ್ರಿಕೆಯಾಗಿ ಬೆಳೆಸುವಲ್ಲಿ ಅವರದ್ದು ಪ್ರಮುಖ ಪಾತ್ರ. ಅವರು ಅಗರ್ತಲಾ ಪ್ರೆಸ್ ಕ್ಲಬ್‌ನ ಸ್ಥಾಪಕ ಸದಸ್ಯರಲ್ಲಿ ಒಬ್ಬರು. ತ್ರಿಪುರಾದ ಸಾಂಸ್ಕೃತಿಕ ಆಂದೋಲನದಲ್ಲೂ ಅವರು ಸಕ್ರಿಯರಾಗಿದ್ದರು, ತ್ರಿಪುರಾ ಸಂಸ್ಕೃತಿ ಸಮನ್ವಯ ಕೇಂದ್ರದ ಸ್ಥಾಪಕ ಕಾರ್ಯದರ್ಶಿಯಾಗಿದ್ದರು.

1968ರಲ್ಲಿ ಸಿಪಿಐ(ಎಂ) ಸೇರಿದ ಅವರು 1986ರಲ್ಲಿ ರಾಜ್ಯಸಮಿತಿಗೆ, 1994ರಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿಗೆ ಮತ್ತು 2018ರಲ್ಲಿ ರಾಜ್ಯ ಕಾರ್ಯದರ್ಶಿಯಾಗಿ ಚುನಾಯಿತರಾದರು. 2015ರಲ್ಲಿ ಸಿಪಿಐ(ಎಂ)ನ 21ನೇ ಮಹಾಧಿವೇಶನದಲ್ಲಿ ಕೇಂದ್ರ ಸಮಿತಿಗೆ ಆಯ್ಕೆಯಾದರು. ಕಳೆದ ಮೂರು ವರ್ಷಗಳಲ್ಲಿ ಅವರು ಪಕ್ಷವನ್ನು ಭಯೋತ್ಪಾದಕ ಆಳ್ವಿಕೆಯ ನಡುವೆ ಮುನ್ನಡೆಸಲು ಅವಿಶ್ರಾಂತವಾಗಿ ದುಡಿಯುತ್ತಿದ್ದರು.

ಅವರ ಕುಟುಂಬ ಮೂಲತಃ ಈಗ ಬಾಂಗ್ಲಾದೇಶದಲ್ಲಿರುವ ಚಿತ್ತಗಾಂಗ್‌ನದ್ದಾಗಿರುವುದರಿಂದ ಬಾಂಗ್ಲಾದೇಶದ ಬಗ್ಗೆ ಅವರಿಗೆ ವಿಶೇಷ ಒಲವು. ಇದು ಅಲ್ಲಿನ ರಾಜಕೀಯ ಪಕ್ಷಗಳೊಂದಿಗೆ ಸಿಪಿಐ(ಎಂ) ಪರವಾಗಿ ಸೌಹಾರ್ದ ಸಂಬಂಧಗಳನ್ನು ಇರಿಸಿಕೊಳ್ಳಲು ನೆರವಾಗಿತ್ತು.

ಅತ್ಯಂತ ಸರಳ ಜೀವನ ನಡೆಸಿರುವ ಅವರು ಪಕ್ಷದ ಧ್ಯೇಯೋದ್ದೇಶಗಳಿಗೆ ಉನ್ನತ ವಿಧೇಯತೆ ಮತ್ತು ಬದ್ಧತೆ ಹೊಂದಿದ್ದ ಒಬ್ಬ ಸಂಗಾತಿ. ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ತ್ರಿಪುರಾದಲ್ಲಿ ಸಿಪಿಐ(ಎಂ) ದುಷ್ಟ, ಹಿಂಸಾತ್ಮಕ ದಾಳಿಗಳನ್ನು ಧೀರತೆಯಿಂದ ಎದುರಿಸುತ್ತಿರುವ ಸಂದರ್ಭದಲ್ಲಿ ಅವರ ನಿರ್ಗಮನ ಒಂದು ದೊಡ್ಡ ನಷ್ಟ ಎಂದು ಹೇಳಿದೆ, ಅವರ ಪತ್ನಿ ತಪತಿ ಸೇನ್, ಮಗಳು ಸ್ವಗತ ದಾಸ್ ಮತ್ತು ಕುಟುಂಬದ ಇತರ ಸದಸ್ಯರಿಗೆ ಹಾರ್ದಿಕ ಸಂತಾಪವನ್ನು ವ್ಯಕ್ತಪಡಿಸಿದೆ.

ಹರ್ಯಾಣ ಬಿಜೆಪಿ ಸರಕಾರದ ವಿರುದ್ಧ ಕರ್ನಾಲ್‌ನಲ್ಲಿ ರೈತ ಚಳುವಳಿಗೆ ಮಹತ್ವದ ವಿಜಯ

ಆಗಸ್ಟ್ 28 ರಂದು ಹರ್ಯಾಣದ ಕರ್ನಾಲ್‌ನಲ್ಲಿ ರೈತರ ಮೇಲೆ ಅಮಾನುಷ ಲಾಠೀ ಪ್ರಹಾರ ಮಾಡಿ ಒಬ್ಬ ರೈತನ ಸಾವು ಹಾಗೂ 9 ರೈತರು ತೀವ್ರ ಗಾಯಗೊಳ್ಳಲು ಕಾರಣವಾದ ಘಟನೆಯನ್ನು ಪ್ರತಿಭಟಿಸಿ ಸಪ್ಟಂಬರ್ 7ರಿಂದ ನಡೆಯುತ್ತಿದ್ದ ಚಳುವಳಿಯ ಪ್ರಮುಖ ಆಗ್ರಹಗಳನ್ನು 5 ದಿನಗಳ ಮಿನಿ ಸಚಿವಾಲಯ ಮುತ್ತಿಗೆಯ ನಂತರ ಹರ್ಯಾಣ ಸರಕಾರ ಸ್ವೀಕರಿಸಿದೆ.

ಘಟನೆಯ ನ್ಯಾಯಾಂಗ ತನಿಖೆಯನ್ನು ಒಬ್ಬ ನಿವೃತ್ತ ಹೈಕೋರ್ಟ್ ನ್ಯಾಯಾಧೀಶರಿಂದ ನಡೆಸಲಾಗುವುದು, ಅದುವರೆಗೆ ರೈತರ ತಲೆ ಒಡೆಯಲೂ ಹಿಂದೆ–ಮುಂದೆ ನೋಡಬೇಡಿ ಎಂಬ ನಿರ್ದೇಶನ ನೀಡಿದ್ದ ಎಸ್‌ಡಿಎಂ ಆಯುಷ್ ಸಿನ್ಹಾರನ್ನು ರಜಾದ ಮೇಲೆ ಹೋಗಲು ಹೇಳಲಾಗುವುದು ಹಾಗೂ ಈ ಲಾಠೀ ಪ್ರಹಾರದಿಂದಾಗಿ ನಂತರ ಪ್ರಾಣ ಕಳಕೊಂಡ ಸುಶೀಲ್ ಕಾಜಲ್ ಕುಟುಂಬದ ಇಬ್ಬರಿಗೆ ನೌಕರಿ, ಸೂಕ್ತ ಪರಿಹಾರ ಮತ್ತು ಗಾಯಗೊಂಡ ರೈತರಿಗೂ ಪರಿಹಾರ ನೀಡಲು ಹರ್ಯಾಣ ಸರಕಾರ ಸಪ್ಟಂಬರ್ 11 ರಂದು ಒಪ್ಪಿದೆ ಎಂದು ರೈತ ಮುಖಂಡರು ಹೇಳಿದ್ದಾರೆ.

ಕರ್ನಾಲ್‌ನಲ್ಲಿ ಸಪ್ಟಂಬರ್ 7ರ ಬೃಹತ್ ಮಹಾಪಂಚಾಯತ್ ನಂತರವೂ ಸರಕಾರ ರೈತರ ಆಗ್ರಹಗಳನ್ನು ತಿರಸ್ಕರಿಸಿದಾಗ ಸುಮಾರು 20 ಸಾವಿರ ರೈತರು ಕರ್ನಾಲ್‌ನಲ್ಲಿರುವ ಮಿನಿ ಸಚಿವಾಲಯದತ್ತ ಹೋಗಿ ಮುತ್ತಿಗೆ ಹಾಕಿದರು, ತಮ್ಮ ಬೇಡಿಕೆಗಳನ್ನು ಒಪ್ಪುವ ವರೆಗೆ ಹಿಂದಿರುಗುವುದಿಲ್ಲ ಎಂದು ಕೂತರು. ಮೊದಲು ಆಗ್ರಹಗಳನ್ನು ಸಾರಾಗಟು ತಿರಸ್ಕರಿಸಿದ ಸರಕಾರ, ಐಎಎಸ್ ಅಧಿಕಾರಿ ಆಯುಷ್ ಸಿನ್ಹರ ಮೇಲೆ ಕ್ರಮ ಕೈಗೊಳ್ಳುವ ಬದಲು ಆತನಿಗೆ ಬಡ್ತಿ ಕೊಟ್ಟು ಬೇರೆಡೆಗೆ ವರ್ಗಾವಣೆ ಮಾಡಿತು. ಸುಶೀಲ್ ಕಾಜಲ್‌ರವರ ಸಾವು ಹೃದಯಾಘಾತದಿಂದ ಸಂಭವಿಸಿದೆ, ಅದಕ್ಕೂ ಈ ಘಟನೆಗೂ ಸಂಬಂಧವಿಲ್ಲ ಎಂದಿತು.

ಕೊನೆಗೂ ರೈತ ಮುಖಂಡರೊಂದಿಗೆ ಹಲವು ಸುತ್ತಿನ ಮಾತುಕತೆಗಳ ನಂತರ ಸರಕಾರ ರೈತರ ಪ್ರಮುಖ ಆಗ್ರಹಗಳಿಗೆ ತಲೆ ಬಾಗಿದೆ. ರೈತರು ತಮ್ಮ ಮುತ್ತಿಗೆಯನ್ನು ಹಿಂತೆಗೆದುಕೊಂಡಿದ್ದಾರೆ ಎಂದು ಅಖಿಲ ಭಾರತ ಕಿಸಾನ್ ಸಭಾದ ಉಪಾಧ್ಯಕ್ಷ ಹಾಗೂ ಹರ್ಯಾಣ ರೈತ ಮುಖಂಡರಾದ ಇಂದರ್ಜಿತ್ ಸಿಂಗ್ ಹೇಳಿದ್ದಾರೆ. ಇದೊಂದು ಐತಿಹಾಸಿಕ ಗೆಲುವು ಎಂದ ಅವರು ಈ 5 ದಿನಗಳ ಹೋರಾಟದಲ್ಲಿ ಭಾಗಿಯಾದ ಪ್ರತಿಭಟನಾಕಾರರನ್ನು ಅಭಿನಂದಿಸಿದ್ದಾರೆ.

ಈ ಬಗ್ಗೆ ಅಭಿನಂದನಾ ಹೇಳಿಕೆ ನೀಡಿರುವ ಕಿಸಾನ್ ಸಭಾದ ಹರ್ಯಾಣ ರಾಜ್ಯ ಸಮಿತಿ ಈ ಹೋರಾಟಕ್ಕೆ ಸಂಯುಕ್ತ ಕಿಸಾನ್ ಮೋರ್ಚಾದ ಕೇಂದ್ರ ಮುಖಂಡರಿಂದ ನೆರವು ಹಾಗೂ ಅವರ ಮತ್ತು ದೇಶದ ಎಲ್ಲೆಡೆಗಳಿಂದ ಹರಿದು ಬಂದ ಬೆಂಬಲಕ್ಕೆ ಕೃತಜ್ಞತೆ ಸಲ್ಲಿಸಿದೆ. ಈ ಸಫಲತೆಯಿಂದ ಕಳೆದ ಹತ್ತು ತಿಂಗಳಿಂದ ನಡೆಯುತ್ತಿರುವ ರೈತ ಹೋರಾಟ ಖಂಡಿತವಾಗಿಯೂ ಇನ್ನಷ್ಟು ಬಲಿಷ್ಟಗೊಳ್ಳುತ್ತದೆ ಎಂಬ ವಿಶ್ವಾಸವನ್ನು ಅದು ವ್ಯಕ್ತಪಡಿಸಿದೆ.

ಮಹಿಳಾ ಮೀಸಲಾತಿ ಮಸೂದೆಗೆ 25 ವರ್ಷಗಳು: ಈಗಲಾದರೂ ಪಾಸು ಮಾಡಲೇ ಬೇಕು–ಮಹಿಳಾ ಸಂಘಟನೆಗಳ ಆಗ್ರಹ

25 ವರ್ಷಗಳ ಹಿಂದೆ, ಸಪ್ಟಂಬರ್ 12, 1996ರಂದು ಸಂಸತ್ತಿನಲ್ಲಿ ಮಂಡಿಸಿದ 33ಶೇ. ಮಹಿಳಾ ಮೀಸಲಾತಿ ಮಸೂದೆಯನ್ನು ಸಂಸತ್ತಿನ ಮುಂದಿನ ಅಧಿವೇಶನದಲ್ಲೇ ಪಾಸು ಮಾಡಬೇಕು ಎಂದು ದೇಶದ ಪ್ರಮುಖ ಮಹಿಳಾ ಸಂಘಟನೆಗಳು ಆಗ್ರಹಿಸಿವೆ.

25 ವರ್ಷಗಳಾದರೂ ಇನ್ನೂ ಈ ಮಸೂದೆಯನ್ನು ಪಾಸು ಮಾಡದೇ ಇರುವುದರ ವಿರುದ್ದ ಸಪ್ಟಂಬರ್ 12 ರಂದು ದೇಶಾದ್ಯಂತ ಮಹಿಳಾ ಸಂಘಟನೆಗಳಿಂದ ಪ್ರತಿಭಟನಾ ಮತಪ್ರದರ್ಶನಗಳು ನಡೆದವು.

ಈ 25 ವರ್ಷಗಳ ನೀತಿಬಾಹಿರ ವಿಳಂಬಕ್ಕೆ ಆಳುವ ರಾಜಕೀಯ ಪಕ್ಷಗಳ ಪಿತೂರಿಗಳೇ ಕಾರಣ. ಇಂದು ಬಿಜೆಪಿ ಲೋಕಸಭೆಯಲ್ಲಿ ನಿಚ್ಚಳ ಬಹುಮತ ಪಡೆದಿದೆ. ಕಾಂಗ್ರೆಸ್ ಪ್ರಮುಖ ಪ್ರತಿಪಕ್ಷವಾಗಿದೆ. ಇವೆರಡೂ ಈ ಮಸೂದೆಯನ್ನು ಬೆಂಬಲಿಸುವುದಾಗಿ ಹೇಳಿರುವ ಪಕ್ಷಗಳು. ಆದ್ದರಿಂದ ಇದನ್ನು ಪಾಸು ಮಾಡಲು ಯಾವುದೇ ತೊಂದರೆಯಿರಬಾರದು.

ಪುಟ 14 ನೋಡಿ



ರಾಜ್ಯ ಮಹಿಳಾ ಆಯೋಗ ಅಧ್ಯಕ್ಷರ ಭೇಟಿಗೆ ಅವಕಾಶ ನೀಡದ ಪೊಲೀಸರು: ಪ್ರತಿಭಟನಾಕಾರರ ಆಕ್ರೋಶ

ಮಹಿಳೆ ನಗ್ನಗೊಳಿಸಿ ಅಮಾನವೀಯವಾಗಿ ನಡೆದುಕೊಂಡಿರುವ ಘಟನೆ ಖಂಡಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಯಿತು.

ಘಟನೆಯ ಕುರಿತು ತಿಪ್ಪೆಸಾರಿಸುವ ಕೆಲಸಕ್ಕೆ ಮುಂದಾದ ಜಿಲ್ಲಾಧಿಕಾರಿ, ಮಹಿಳಾ ಆಯೋಗದ ಅಧ್ಯಕ್ಷೆಯ ವಿರುದ್ಧ ಜಿಲ್ಲಾಧಿಕಾರಿ ಕಚೇರಿಗೆ ನುಗ್ಗಿ ಮಹಿಳಾ ಸಮುದಾಯ ಆಕ್ರೋಶವನ್ನು ಹೊರಹಾಕಿದ್ದಾರೆ.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಉಪಾಧ್ಯಕ್ಷೆ ನೀಲಾ ಕೆ. ಮಾತನಾಡಿ "ಮಹಿಳೆ ನಗ್ನ ಮಾಡಿ ಹಲ್ಲೆ ಮಾಡಿದ ಘಟನೆಗೆ ಸಂಬಂಧಿಸಿದಂತೆ ಸಂಘಟನೆಯಿಂದ ಪ್ರತಿಭಟನೆ ಮಾಡಲಾಗುತ್ತಿದ್ದರೂ ಮಹಿಳಾ ಆಯೋಗದ ಅಧ್ಯಕ್ಷೆಯನ್ನು ಭೇಟಿ ಮಾಡಲು ಬಿಡದೇ ಪೊಲೀಸರು ತಮ್ಮನ್ನು ಕಡೆಗಣಿಸಿದ್ದಾರೆ" ಎಂದು ಆರೋಪಿಸಿದರು.

ಕರ್ನಾಟಕ ರಾಜ್ಯದಲ್ಲಿ ಹೆಣ್ಣುಮಕ್ಕಳಿಗೆ ಸುರಕ್ಷತೆಯಿಲ್ಲ ಎನ್ನುವ ಭಾವನೆ ಕಾಡುತ್ತಿದೆ. ಒಂದು ಕಡೆ ರಾಜ್ಯ ಗೃಹ ಸಚಿವ ಅರಗ ಜ್ಞಾನೇಂದ್ರವರು ಯುವತಿ ಸಂಜೆ ಸಮಯದಲ್ಲಿ ಏಕೆ ಹೊರಗೆ ಹೋಗಬೇಕೆಂದು ಪ್ರಶ್ನಿಸಿ ರಾಜ್ಯದ ಮಾನವನ್ನೇ ಹರಾಜು ಹಾಕಿದ್ದಾರೆ ಎಂದು ಲೇವಡಿ ಮಾಡಿದರು.

ಮಹಿಳೆಯನ್ನು ಥಳಿಸಿ ಅಮಾನವೀಯವಾಗಿ ನಡೆದುಕೊಳ್ಳಲಾಗಿದೆ. ಇಂಥ ಘಟನೆಯನ್ನು ಖಂಡಿಸಿ ನಾವು ಪ್ರತಿಭಟನೆ ಮಾಡಿದರೆ ನಮ್ಮನ್ನು ಗಣನೆಗೆ ತೆಗೆದುಕೊಳ್ಳದೇ ಬಾಗಿಲಿನ ಆಚೆ ನಿಲ್ಲಿಸಲಾಗಿದೆ. ಅವರು ತೆರಳಿದ ನಂತರ ನಮ್ಮನ್ನು ಒಳ ಬಿಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಇದು ಹೇಯ ಕೃತ್ಯ. ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಬೇಕು. ಇದರ ಹಿಂದಿರುವ ಜಾಲದ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಸಂತ್ರಸ್ತ ಮಹಿಳೆಗೆ ರೂ. 5 ಲಕ್ಷ ಪರಿಹಾರ ನೀಡಿ, ಸರ್ಕಾರಿ ನೌಕರಿ, ವಾಸಕ್ಕೆ ಮನೆ, ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎಂದರು.

ಸಂತ್ರಸ್ತೆಯನ್ನು ಮಾನಸಿಕ ಅಸ್ವಸ್ಥೆ ಎಂದು ಹೇಳುತ್ತೀರಿ. ಚಾರಿತ್ರ್ಯಹರಣ ಮಾಡುತ್ತೀರಿ. ಜೀವನ ಭದ್ರತೆ ಕಲ್ಪಿಸಿ, ಮಹಿಳೆಯನ್ನು ಅಂಥ ಕೃತ್ಯದಿಂದ ಬಿಡಿಸಬೇಕು ಎಂದು ಈ ವೇಳೆ ಜಿಲ್ಲಾಧಿಕಾರಿ ಕಚೇರಿ ಒಳಗೆ ನುಗ್ಗಿದ ಕಾರ್ಯಕರ್ತೆಯರು ಪೊಲೀಸರ ವಿರುದ್ಧ ಆಕ್ರೋಶವ್ಯಕ್ತಪಡಿಸಿದರು.

ಪ್ರತಿಭಟನಾ ಸ್ಥಳಕ್ಕೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು ಕರೆಸುವಂತೆ ಪ್ರತಿಭಟನಾಕಾರರು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನಮಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ ಎಂದು ಹರಿಹಾಯ್ದರು. ಪೊಲೀಸರು ಮಹಿಳಾ ಆಯೋಗದ ಅಧ್ಯಕ್ಷರನ್ನು ಕರೆಸಿದ ನಂತರ ಅವರಿಗೆ ಘಟನೆ ವಿವರವನ್ನು ತಿಳಿಸಿ ಸೂಕ್ತಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಜಿಲ್ಲಾಧಿಕಾರಿ ಕಚೇರಿಯೊಳಗೆ ಪ್ರತಿಭಟನೆ ನಡೆಸಿದ ಕಾರ್ಯಕರ್ತರು ರಾಜ್ಯ ಬಿಜೆಪಿ ಸರಕಾರ ಹಾಗೂ ಜಿಲ್ಲಾಧಿಕಾರಿ ಡಾ. ರಾಗಪ್ರೀಯಾ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರತಿಭಟನೆ ಕಾವು ಹೆಚ್ಚಾಗುತ್ತಿದ್ದಂತೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು, ಜಿಲ್ಲಾಧಿಕಾರಿ ಡಾ. ರಾಗಪ್ರೀಯಾ, ಜಿಲ್ಲಾ ಎಸ್.ಪಿ. ಡಾ. ಸಿ.ಬಿ. ವೇದಮೂರ್ತಿ ಸ್ಥಳಕ್ಕೆ ಧಾವಿಸಿ ಪ್ರತಿಭಟನಕಾರರ ಮನವೊಲಿಸಿದರು.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು ಅವರು ಘಟನೆಯನ್ನು ಖಂಡಿಸುತ್ತೇನೆ. ಈಗಾಗಲೇ ಕಠಿಣ ಶಿಕ್ಷೆಯನ್ನು ವಿಧಿಸುವಂತೆ ಎಸ್‌ಪಿಯವರಿಗೆ ತಿಳಿಸಿದ್ದೇನೆ. ಸದ್ಯ ಪರಿಹಾರ ವಿತರಿಸಲಾಗಿದೆ ಎಂದರು. ಆರೋಪಿಗಳಿಗೆ ತಕ್ಕ ಶಿಕ್ಷೆಯಾಗುತ್ತದೆ ಎಂದು ಭರವಸೆ ನೀಡಿದರು.

ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಉಪವಿಭಾಗಧಿಕಾರಿ ಪ್ರಶಾಂತ ಹನಗಂಡಿ, ಹೆಚ್ಚುವರಿ ಜಿಲ್ಲಾಧಿಕಾರಿ ಶಂಕರಗೌಡ ಸೋಮನಾಳ ಪ್ರತಿಭಟನಾಕಾರರ ಮನವೊಲಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ದಾವಲ ಸಾಬ ನದಾಫ್, ಜನವಾದಿ ಮಹಿಳಾ ಸಂಘಟನೆ ಸಂಚಾಲಕಿ ಸವಿತಾ ಪೂಜಾರಿ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘದ ಮಹಿಳಾ ಉಪ ಸಮಿತಿಯ ಜಿಲ್ಲಾ ಸಂಚಾಲಕಿ ರಂಗಮ್ಮ ಕಟ್ಟಿಮನಿ ಸೇರಿದಂತೆ ಕೃಷಿ ಕೂಲಿಕಾರರ ಸಂಘದ ಪದಾಧಿಕಾರಿಗಳು ಇದ್ದರು.

ಬಾಕಿ ಇರುವ ವೇತನ ಬಿಡುಗಡೆಗೆ ಆಗ್ರಹಿಸಿ ಪಂಚಾಯತಿ ನೌಕರರ ಆಗ್ರಹ

*** ಪರೀಕ್ಷೆ ಬೇಡ, ಸೇವಾ ಹಿರಿತನ ಆಧರಿಸಿ ಬಡ್ತಿ ನೀಡಿ**

*** 15 ನೇ ಹಣಕಾಸು ಯೋಜನೆಯಡಿ ಆಡಳಿತ ವೆಚ್ಚದಲ್ಲಿ ಶೇ10, ಹಾಗೂ ಸ್ಥಳೀಯ ತೆರಿಗೆ ಸಂಗ್ರಹದಲ್ಲಿ ಶೇ40 ಹಣವನ್ನು ಸಿಬ್ಬಂದಿ ವೇತನಕ್ಕೆ ಉಪಯೋಗಿಸಿ**

*** ಕರವಸೂಲಿಗಾರ, ಗುಮಾಸ್ತ, ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಸಿ ಗ್ರೂಪ್ ಹಾಗೂ ವಾಟರ್ ಮ್ಯಾನ್, ಜವಾನ, ಸ್ವಚ್ಛತಗಾರರನ್ನು ಡಿ ಗ್ರೂಪ್ ನೌಕರರೆಂದು ಪರಿಗಣಿಸಿ**

ಗ್ರಾಮ ಪಂಚಾಯಿತಿ ನೌಕರರಿಗೆ 15 ತಿಂಗಳುಗಳಿಂದ ಸರ್ಕಾರ ವೇತನ ನೀಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿ ಇಂದು ಕರ್ನಾಟಕ ರಾಜ್ಯ ಗ್ರಾ.ಪಂ ನೌಕರರ ಸಂಘಟನೆ (ಸಿಐಟಿಯು) ನೇತೃತ್ವದಲ್ಲಿ ಸಾವಿರಾರು ನೌಕರರು ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಿದರು. ಗ್ರಾಮ ಪಂಚಾಯಿತಿ ನೌಕರರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.



10 ರಿಂದ 15 ತಿಂಗಳುಗಳಿಂದ ವೇತನ ಇಲ್ಲದೆ ಕೆಲಸ ಮಾಡುತ್ತಿದ್ದೇವೆ. 2021 ಸೆಪ್ಟೆಂಬರ್ ತಿಂಗಳಲ್ಲಿ ಸರ್ಕಾರದ ನಿಧಿಯಿಂದ ಇಎಫ್‌ಎಂಎಸ್ ಮೂಲಕ ವೇತನ ನೀಡಲು ರಾಜ್ಯ ಸರ್ಕಾರ ಆದೇಶ ಮಾಡಿತ್ತು. ಆದರೆ ಇಲ್ಲಿಯವರೆಗೆ ವೇತನ ಬಿಡುಗಡೆ ಸರಿಯಾಗಿ ಆಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಸರಕಾರವು ಗ್ರಾಮ ಪಂಚಾಯತಿ ನೌಕರರ ಯೋಗಕ್ಷೇಮ ವಿಚಾರಿಸುವುದು ಅವರ ಜವಾಬ್ದಾರಿ ಕೊರೊನಾ ಸಂದರ್ಭದಲ್ಲಿ ಅವರ ಸೇವೆ ಅನನ್ಯವಾಗಿದೆ ಆದರೆ ಅಂತಹ ನೌಕರರನ್ನು ಮರೆತಿದ್ದಾರೆ ಸರಕಾರ ಬಿಲ್ ಕಲೆಕ್ಟರ್ ಮತ್ತು ಗುಮಾಸ್ತ ಹುದ್ದೆಯಿಂದ ಗ್ರೇಡ್ –2 ಕಾರ್ಯದರ್ಶಿ ಮತ್ತು ಲೆಕ್ಕ ಸಹಾಯಕ ಹುದ್ದೆಗೆ ಬಡ್ತಿ ನೀಡಬೇಕು ಹಾಗೂ 15 ನೇ ಹಣಕಾಸು ಯೋಜನೆಯಡಿ ಬಾಕಿವಿರುವ ವೇತನವನ್ನು ಈ ಕೂಡಲೇ ನೀಡುಬೇಕೆಂದು ಒತ್ತಾಯಿಸುವುದು ನಮ್ಮ ಧರಣಿಯ ಉದ್ದೇಶವಾಗಿದೆ ಎಂದು ಪ್ರತಿಭಟನೆಕಾರರು ಆಗ್ರಹಿಸಿದರು.

ಗ್ರಾಮ ಪಂಚಾಯತಿ ನೌಕರರ ಸಂಘದ ಜಿಲ್ಲಾ ಗೌರವ ಅಧ್ಯಕ್ಷ ಗಾಂಧಿನಗರ ನಾರಾಯಣಸ್ವಾಮಿ ಮಾತನಾಡಿ ಸರಕಾರದ ಆದೇಶದಂತೆ 15 ನೇ ಹಣಕಾಸು ಯೋಜನೆಯಡಿ ಆಡಳಿತ ವೆಚ್ಚದಲ್ಲಿ ಶೇ10, ಹಾಗೂ ಸ್ಥಳೀಯ ತೆರಿಗೆ ಸಂಗ್ರಹದಲ್ಲಿ ಶೇ40 ಹಣವನ್ನು ಸಿಬ್ಬಂದಿ ವೇತನಕ್ಕೆ ಉಪಯೋಗಿಸಬೇಕು 2019 ಜುಲೈ 23 ರ ಸರ್ಕಾರಿ ಆದೇಶ ಪ್ರಕಾರ ಬಾಕಿ ಉಳಿದ ಎಲ್ಲಾ ನೌಕರರಿಗೂ ಜಿಲ್ಲಾ ಪಂಚಾಯಿತಿ ಅನುಮೋದನೆ ನೀಡಬೇಕು . ಕರವಸೂಲಿಗಾರ , ಗುಮಾಸ್ತ , ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಸಿ ಗ್ರೂಪ್ ಹಾಗೂ ವಾಟರ್ ಮ್ಯಾನ್ , ಜವಾನ, ಸ್ವಚ್ಛತಗಾರರನ್ನು ಡಿ ಗ್ರೂಪ್ ನೌಕರರೆಂದು ಪರಿಗಣಿಸಿ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಗ್ರಾಮ ಪಂಚಾಯಿತಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರದ ಆದೇಶದಂತೆ ನೇಮಕಾತಿ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು

ತಿಂಗಳಿಗೆ ಸರಿಯಾಗಿ ವೇತನ ಬಿಡುಗಡೆ ಮಾಡಬೇಕು, ವೇತನಕ್ಕಾಗಿ 700 ಕೋಟಿ ಹಣ ಬಿಡುಗಡೆ ಮಾಡಬೇಕು, 10 ವರ್ಷ ಮೇಲ್ಪಟ್ಟವರಿಗೆ ಪ್ರಮೋಷನ್‌ಗಾಗಿ ಅರ್ಹತಾ ಪರೀಕ್ಷೆ ರದ್ದುಗೊಳಿಸಬೇಕು, ಪಿಂಚಣಿ ಫೈಲ್ ರೆಡಿ ಇದೆ, ಪಿಂಚಣಿ ನೀಡುವ ಆದೇಶ ಆಗಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು. ಪ್ರತಿಭಟನೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಅಂದಾಜು ಐದು ಸಾವಿರ ಪ್ರತಿಭಟನಾಕಾರರು ಭಾಗಿಯಾಗಿದ್ದರು.

ಪ್ರತಿಭಟನೆಯಲ್ಲಿ ಗ್ರಾ.ಪಂ ನೌಕರರ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ. ರಾಮಕೃಷ್ಣ, ರಾಜ್ಯ ಖಜಾಂಚಿ ಆರ್.ಎಸ್. ಬಸವರಾಜ, ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮಿ, ರಾಜ್ಯ ಉಪಾಧ್ಯಕ್ಷ ವಿಜೆಕೆ ನಾಯರ್, ಪ್ರಾಂತ ರೈತಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು. ಬಸವರಾಜ್, ಜನವಾದಿ ಮಹಿಳಾ ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಗೌರಮ್ಮ ಸೇರಿದಂತೆ ಅನೇಕರಿದ್ದರು.

ಕೃಷಿ ಕಾಯ್ದೆ ರದ್ದತಿಗೆ ಆಗ್ರಹಿಸಿ ಸೆಪ್ಟೆಂಬರ್ 27 ಕ್ಕೆ ಕರ್ನಾಟಕ ಬಂದ್



ಸೆಪ್ಟೆಂಬರ್ 27 ರ ಕರ್ನಾಟಕ ಬಂದ್ ಕುರಿತ ರಾಜ್ಯ ಮಟ್ಟದ ಸಮಾಲೋಚನಾ ಸಭೆಯನ್ನು ಸಂಯುಕ್ತ ಹೋರಾಟ ಕರ್ನಾಟಕ ದಿಂದ ಸೆಪ್ಟೆಂಬರ್ 15, 2021 ರಂದು ನಡೆಯಿತು.

ಬೆಂಗಳೂರಿನ ಫ್ರೀಡಂ ಪಾರ್ಕ್ ಒಳಾವರಣದಲ್ಲಿ ನಡೆದ ಸಭೆಯಲ್ಲಿ ಬಂದ್ ಕುರಿತು ಚರ್ಚೆ ಸೇರಿದಂತೆ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ.

ರಾಜ್ಯದ ಎಲ್ಲಾ ಪ್ರಮುಖ ರೈತ ಸಂಘಟನೆಗಳು, ಕರ್ನಾಟಕ ರಕ್ಷಣಾ ವೇದಿಕೆ ,ಕಾರ್ಮಿಕ ಸಂಘಟನೆಗಳು, ವಿದ್ಯಾರ್ಥಿ, ಯುವಜನ ಮಹಿಳಾ ಸಂಘಟನೆಗಳು ಸೇರಿದಂತೆ 80 ಕ್ಕೂ ಹೆಚ್ಚು ಸಂಘಟನೆಗಳು ಸಭೆಯಲ್ಲಿ ಭಾಗವಹಿಸಿದ್ದವು.

ಸೆಪ್ಟೆಂಬರ್ 27 ರ ದೆಹಲಿ ರೈತ ಹೋರಾಟ ಸಂಯುಕ್ತ ಕಿಸಾನ್ ಮೋರ್ಚಾ ದ ಕರೆಯನ್ನು ಕರ್ನಾಟಕದಲ್ಲೂ ಯಶಸ್ವಿಗೊಳಿಸಲು ಒಗ್ಗಟಿನ ತೀರ್ಮಾನ ತೆಗೆದುಕೊಳ್ಳಲಾಯಿತು.

ಸಭೆಯು ಕರ್ನಾಟಕ ಬಂದ್ ಗೆ ಪೂರ್ವ ತಯಾರಿಯಾಗಿ ದಿನಾಂಕ 19–9–21 ರ ಬೆಳಗ್ಗೆ ಎಲ್ಲಾ ಜಿಲ್ಲೆ/ತಾಲ್ಲೂಕು ಗಳಲ್ಲಿ ಜಂಟಿ ಸಭೆ ನಡೆಸಲು ಹಾಗೂ ಅದೇ ದಿನ ಆನ್ ಲೈನ್ ಮೂಲಕ ರಾಜ್ಯ ಮಟ್ಟದ ಬಹಿರಂಗ ಸಭೆ ಸಂಘಟಿಸಲು ಹಾಗೂ ದಿನಾಂಕ 21–9–21 ಮಂಗಳವಾರ ರಾಜ್ಯಾದ್ಯಂತ ಎಲ್ಲಾ ತಾಲ್ಲೂಕು/ಜಿಲ್ಲಾ ಕೇಂದ್ರಗಳಲ್ಲಿ ಬಂದ್ ಬೆಂಬಲಿಸಿ ಧರಣಿ/ಮೆರವಣಿಗೆ/ಬೈಕ್ ಜಾಥಾ ಮುಂತಾದ ಚಟುವಟಿಕೆಗಳನ್ನು ಸಂಘಟಿಸಲು ತೀರ್ಮಾನಿಸಿತು.

ಸಭೆಯಲ್ಲಿ ಎಸ್‌ಕೆಎಂ ನ ನಾಯಕಿ ಕವಿತಾ ಕುರುಗಂಟಿ, ಸಂಯುಕ್ತ ಹೋರಾಟ ಕರ್ನಾಟಕದ ಮುಖಂಡರಾದ ಕೋಡಿಹಳ್ಳಿ ಚಂದ್ರಶೇಖರ್, ಚಾಮರಸ ಮಾಲೀ ಪಾಟೀಲ್, ಮೈಕೆಲ್ ಫರ್ನಾಂಡೀಸ್, ಜಿ.ಸಿ. ಬಯ್ಯಾರೆಡ್ಡಿ, ಎಸ್.ಆರ್. ಹಿರೇಮಠ, ಬಡಗಲಪುರ ನಾಗೇಂದ್ರ, ಮಾಜಿ ಶಾಸಕರುಗಳಾದ ಬಿ.ಆರ್. ಪಾಟೀಲ್, ಎಂ.ಪಿ. ನಾಡಗೌಡ, ಜಿ.ಎನ್. ನಾಗರಾಜ್, ಮಾವಳ್ಳಿ ಶಂಕರ್ ನೂರ್ ಶ್ರೀಧರ್, ಎಸ್. ವರಲಕ್ಷ್ಮಿ, ಮೀನಾಕ್ಷಿ ಸುಂದರಂ, ಎಚ್.ವಿ. ದಿವಾಕರ್, ದೇವಿ, ಪ್ರಮುಖರಾದ ಪ್ರವೀಣ್ ಕುಮಾರ್ ಶೆಟ್ಟಿ, ಸಾರಾ ಗೋವಿಂದ್, ಡಾ. ಪ್ರಕಾಶ್ ಕಮ್ಮರಡಿ, ಹೆಚ್.ಆರ್. ಬಸವರಾಜಪ್ಪ, ಮಹದಾಯಿ ರೈತ ಹೋರಾಟದ ಶಂಕರ್ ಆರ್. ಅಂಬಲಿ, ಜಿಜಿ ಹಳ್ಳಿ ನಾರಾಯಣಸ್ವಾಮಿ, ಡಿ.ಹೆಚ್. ಪೂಜಾರ್, ಮುಂತಾದವರು ಸಭೆಯಲ್ಲಿ ಭಾಗವಹಿಸಿ ಮಾತಾನಾಡಿದರು.

ಕೋಲಾರ:

ಕೇಂದ್ರ ಮತ್ತು ರಾಜ್ಯ ಸರಕಾರಗಳ ರೈತ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಸಂಯುಕ್ತ ಕಿಸಾನ್ ಮೋರ್ಚಾ ಸೆಪ್ಟೆಂಬರ್ 27 ರಂದು ಭಾರತ್ ಬಂದ್ ಗೆ ಕರೆ ನೀಡಿದ್ದು ಆದರ ಪೂರ್ವಭಾವಿಯಾಗಿ ಬಂದ್ ರೂಪರೇಷೆಗಳನ್ನು ಚರ್ಚಿಸಲು ನಗರದ ಸರಕಾರಿ ನೌಕರರ ಭವನದಲ್ಲಿ ಬುಧವಾರ ವಿವಿಧ ಪ್ರಗತಿಪರ ಸಂಘಟನೆಯ ನೇತೃತ್ವದಲ್ಲಿ ಸಭೆ ನಡೆಸಿದರು.

ದೇಶದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿರುವ ಭಾರತ್ ಬಂದ್‌ಗೆ ಸುಮಾರು ಸಂಘಟನೆಗಳು ಬೆಂಬಲ ಘೋಷಣೆ ಮಾಡಿದ್ದು ಕೇಂದ್ರ ಸರಕಾರದ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕು ಎಂದು ರೈತ ಸಂಘಟನೆಗಳು ನಡೆಸುತ್ತಿರುವ ಹೋರಾಟ ಗಾಳಿ ಮಳೆ ಚಳಿ ಎನ್ನದೇ ಒಂದು ವರ್ಷ ಪೂರ್ಣಗೊಳಿಸುತ್ತಿದೆ. ಆದ್ದರಿಂದ ಸಂಘಟನೆಗಳು ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲು ಈ ತೀರ್ಮಾನ ಕೈಗೊಂಡಿವೆ. ಕೇಂದ್ರದ ನರೇಂದ್ರ ಸರಕಾರಕ್ಕೆ ರೈತರ ಶಕ್ತಿ ಏನೆಂದು ತೋರಿಸಬೇಕಾಗಿದೆ ಎಂದರು.

ದೆಹಲಿ ಹೊರವಲಯದಲ್ಲಿ ರೈತರ ಕೃಷಿ ಕಾಯ್ದೆ ವಿರೋಧಿಸಿ ಹೋರಾಟ ನಡೆಸುತ್ತಿದ್ದಾರೆ.ಕೇಂದ್ರ ಸರಕಾರ ಬಹುತೇಕ ಸಚಿವರು ದೆಹಲಿಯಲ್ಲಿ ಇದ್ದರು ಹೋರಾಟ ಸ್ಥಳಕ್ಕೆ ಭೇಟಿ ಕೊಡುತ್ತಾ ಇಲ್ಲ ರೈತರ ಮೇಲೆ ದಾಳಿ ದಬ್ಬಾಳಿಕೆ ಮಾಡುವುದು ಸರಕಾರದ ಸಾಧನೆಯಾಗಿದೆ ಸರಕಾರ ಕೂಡಿ ಕಾಯ್ದೆಯಲ್ಲಿ ತಿದ್ದುಪಡಿ ತರುವುದು ಬೇಡ. ಸಂಪೂರ್ಣ ರದ್ದು ಮಾಡುವಂತೆ ರೈತ ಸಂಘಟನೆಗಳು ಒತ್ತಾಯವಾಗಿದೆ ಸರಕಾರವು ರೈತ ಪ್ರತಿನಿಧಿಗಳು ಹಾಗೂ ವಿವಿಧ ಸಂಘಟನೆಗಳ ಜೊತೆ ನಡೆಸಿದ ಸಭೆಗಳು ವಿಫಲವಾಗಿವೆ ಬೇಡಿಕೆಗಳನ್ನು ಈಡೇರಿಸುವ ವರೆಗೂ ನಾವು ವಾಪಸ್ಸು ಹೋಗುವುದಿಲ್ಲ ಎಂದು ರೈತರು ನಿರ್ಣಯ ತೆಗೆದುಕೊಂಡಿದ್ದಾರೆ ಅವರ ಹೋರಾಟಕ್ಕೆ ನಾವು ಎಲ್ಲರೂ ಬೆಂಬಲಿಸಬೇಕಾಗಿದೆ ಎಂದರು.

ದೇಶದಲ್ಲಿ ನಡೆಯುತ್ತಾ ಇರುವ ಇಂತಹ ಚಾರಿತ್ರಿಕ ಹೋರಾಟದ ಭಾಗವಾಗಿ ರಾಷ್ಟ್ರವ್ಯಾಪಿ ಬಂದ್ ನ್ನು ಯಶಸ್ವಿಗೊಳಿಸಲು, ರೈತ ಸಂಘಟನೆಗಳು ಟ್ರೇಡ್ ಯೂನಿಯನ್, ಕನ್ನಡಪರ ಸಂಘಟನೆಗಳು,ಮಹಿಳಾ, ವಿಧ್ಯಾರ್ಥಿ, ಯುವಜನ ಸಂಘಟನೆಗಳು, ಸಾರಿಗೆ ನೌಕರರ ಸಂಘಟನೆಗಳು ಮತ್ತು ವ್ಯಾಪಾರಸ್ಥರು, ಪಕ್ಷಬೇಧ ಮರೆತು ರೈತರ ಬೇಡಿಕೆಗಳಿಗೆ ಧ್ವನಿಯಾಗುವಂತೆ ಒತ್ತಾಯಿಸಬೇಕಾಗಿದೆ ಎಂದು ಸಭೆಯಲ್ಲಿ ಚರ್ಚೆ ಮಾಡಿದರು.

ರೈತರ ಹೋರಾಟಕ್ಕೆ ಬೆಂಬಲವಾಗಿ ವ್ಯಾಪಕವಾಗಿ ಜನರ ರೈತರ ಮಧ್ಯೆ ಕರಪತ್ರಗಳನ್ನು ಹಂಚುವ ಮೂಲಕ ಪ್ರಚಾರ ಮಾಡಿ ರೈತರಿಗೆ ಈ ಕಾಯಿದೆಯಿಂದ ಆಗುವ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸಬೇಕು ಜಿಲ್ಲೆಯಲ್ಲಿ ಬಂದ್ ಯಶಸ್ವಿಗೊಳಿಸಲು ತಾಲೂಕು ಮಟ್ಟದ ಸಮಾವೇಶ ಮಾಡಿ ಸೆಪ್ಟೆಂಬರ್ 18 ರಂದು ಜಿಲ್ಲಾ ಮಟ್ಟದ ಸಮಾವೇಶವನ್ನು ಕೋಲಾರದಲ್ಲಿ ನಡೆಸಲಾಗುತ್ತದೆ ಎಂದರು ದೇಶವನ್ನು ಉಳಿಸಿ ರೈತರನ್ನು ಉಳಿಸುವ ಸಲುವಾಗಿ ಪ್ರತಿಯೊಬ್ಬರೂ ಈ ಬಂದ್ ನಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು

ಈ ಸಭೆಯಲ್ಲಿ ಸಂಯುಕ್ತ ಹೋರಾಟದ ಮುಖಂಡ ಗಾಂಧಿನಗರ ನಾರಾಯಣಸ್ವಾಮಿ, ಊರುಬಾಗಿಲು ಶ್ರೀನಿವಾಸ್, ಪುಟ್ಟಣ್ಣಯ್ಯ ರೈತ ಸಂಘದ ಮರಗಲ್ ಶ್ರೀನಿವಾಸ್, ಕೋಟಿಗಾನಹಳ್ಳಿ ಗಣೇಶ್ ಗೌಡ, ಪಿ.ಆರ್ ಸೂರ್ಯನಾರಾಯಣ, ಟಿ.ಎಂ. ವೆಂಕಟೇಶ್, ಸಲ್ಲಾವುದ್ದೀನ್ ಬಾಬು, ಹೂಹಳ್ಳಿ ನಾಗರಾಜ್, ಪಿ.ವಿ. ರಮಣ್ ಸೇರಿದಂತೆ ಅನೇಕರಿದ್ದರು.

ಸಮಗ್ರವಾಗಿ ಚರ್ಚಿಸದೆ ತರಾತುರಿಯಲ್ಲಿ ನೂತನ ಶಿಕ್ಷಣ ನೀತಿ

ರಾಷ್ಟ್ರೀಯ ನೂತನ ಶಿಕ್ಷಣ ನೀತಿಯನ್ನು ತರಾತುರಿಯಲ್ಲಿ ಕರ್ನಾಟಕ ಸರಕಾರ ಜಾರಿಗೊಳಿಸಿರುವ ಅವೈಜ್ಞಾನಿಕ ಕ್ರಮವನ್ನು ವಿರೋಧಿಸಿ ಸದನದಲ್ಲಿ ಚರ್ಚೆಗೆ ಒತ್ತಾಯಿಸಬೇಕೆಂದು ಸಮುದಾಯ ಕರ್ನಾಟಕ ಸಾಂಸ್ಕೃತಿಕ ಸಂಘಟನೆ, ಭಾರತ ಜ್ಞಾನ ವಿಜ್ಞಾನ ಸಮಿತಿ(ಬಿಜಿವಿಎಸ್), ವಿದ್ಯಾರ್ಥಿ, ದಲಿತ, ಮಹಿಳಾ ಸಂಘಟನೆಗಳ ಸಹಯೋಗದಲ್ಲಿ ಸಮಾಲೋಚನಾ ಸಭೆ ಆಯೋಜಿಸಿತ್ತು.

ಸಮಾಲೋಚನಾ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರೊ.ಎಸ್.ಜಿ ಸಿದ್ದರಾಮಯ್ಯ ಮಾತನಾಡಿ ಇಂದಿನ ರಾಜ್ಯ, ಕೇಂದ್ರ ಸರಕಾರಗಳು ಸಂವಿಧಾನವನ್ನು ಗಾಳಿಗೆ ತೂರುವ ಪ್ರಯತ್ನ ಮಾಡುತ್ತಿರುವುದನ್ನು ವಿರೋಧಿಸಿದರು.

ಸಮವರ್ತಿ ಪಟ್ಟಿಯಲ್ಲಿರುವ ಶಿಕ್ಷಣವನ್ನು ರಾಜ್ಯಗಳ ಕೈಯಿಂದ ಕುಸಿಯುತ್ತಿರುವ ಪ್ರಯತ್ನ ಮತ್ತು ವರ್ಣಾಶ್ರಮಗಳನ್ನು ಸ್ಥಿರೀಕರಿಸುವ ಪ್ರಯತ್ನವಾಗಿರುವ ಈ ನೂತನ ನೀತಿಯನ್ನು 21ನೇ ಶತಮಾನದ ಶಿಕ್ಷಣ ನೀತಿ ಇದು ಎಂದು ನಂಬಿಸಲಾಗುತ್ತಿದೆ ಎಂದು ರಾಜ್ಯಸಭಾ ಸದಸ್ಯ ಡಾ.ಎಲ್ ಹನುಮಂತಯ್ಯ ವಿವರಿಸಿದರು.

ಡಾ.ನಿರಂಜನಾರಾಧ್ಯ ಹಿಂದಿನ ಮತ್ತು ನೂತನ ಶಿಕ್ಷಣ ನೀತಿಯ ತೌಲನಿಕ ವಿಶ್ಲೇಷಣೆ ಮಾಡಿದರು. ಹೊಸ ನೀತಿ ಮುಂದೆ ತರಬಹುದಾದ ಅಪಾಯಗಳನ್ನು ಎಳೆ ಎಳೆಯಾಗಿ ವಿವರಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರುಗಳಾದ ಪ್ರೊ.ಎಸ್.ಜಿ.ಸಿದ್ದರಾಮಯ್ಯ, ಡಾ.ಎಲ್.ಹನುಮಂತಯ್ಯ, ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ.ವಸುಂಧರಾ ಭೂಪತಿ, ಶಿಕ್ಷಣ ತಜ್ಞರಾದ ಡಾ.ನಿರಂಜನಾರಾಧ್ಯ, ಬಿ.ಶ್ರೀಪಾದ ಭಟ್, ದಲಿತ ಸಂಘಟನೆಗಳ ಮಾವಳ್ಳಿ ಶಂಕರ್, ಬಿ. ರಾಜಶೇಖರಮೂರ್ತಿ, ಮೋಹನ್ ರಾಜ್ , ಜಿಗಣಿ ಶಂಕರ್, ಎನ್. ವೆಂಕಟೇಶ್ ಮತ್ತು ಇತರ ನಾಯಕರು, ಎಸ್.ಎಫ್.ಐ ರಾಜ್ಯಾಧ್ಯಕ್ಷ ಅಮರೇಶ್ ಕಡಗದ, ಕರ್ನಾಟಕ ವಿದ್ಯಾರ್ಥಿ ಸಂಘಟನೆಯ ಸರೋವರ್ ಬೆಂಕಿಕೆರೆ, ವಿದ್ಯಾರ್ಥಿ ಜನತಾ ದಳದ ಹರಿಪ್ರಸಾದ್.ವಿ, ಕೆ.ಆರ್.ಎಸ್ .ಸಂಘಟನೆಯ ಅಮರೇಶ್ ವಿ, ರಾಜ್ಯ ನಾಯಕರುಗಳು, ಬಿ.ಜಿ.ವಿ.ಎಸ್. ನಾಯಕರು, ಸಮುದಾಯ ರಾಜ್ಯ ಉಪಾಧ್ಯಕ್ಷ ಟಿ.ಸುರೇಂದ್ರ ರಾವ್, ರಾಜ್ಯ ಸಹಕಾರ್ಯದರ್ಶಿ ವಿಮಲಾ. ಕೆ.ಎಸ್. ಮತ್ತು ವಿವಿಧ ವಿದ್ಯಾರ್ಥಿ ಸಂಘಟನೆಗಳ ಮುಖಂಡರು ಪಾಲ್ಗೊಂಡರು.

ಸಮುದಾಯ ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ದೇವೇಂದ್ರ ಗೌಡ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು.



ತ್ರಿಪುರ ರಾಜ್ಯದೆಲ್ಲೆಡೆ ಸಿಪಿಐ(ಎಂ) ಕಚೇರಿಗಳ ಮೇಲಿನ ಧಾಳಿ ಖಂಡಿಸಿ ಪ್ರತಿಭಟನೆ

ತ್ರಿಪುರ ರಾಜ್ಯದೆಲ್ಲೆಡೆ ಸಿಪಿಐ(ಎಂ) ಕಚೇರಿಗಳ ಮೇಲೆ ನಡೆದ ಸರಣಿ ಧಾಳಿಯನ್ನು ಖಂಡಿಸಿ, ಬಿಜೆಪಿಯ ತಾಲಿಬಾನ್ ಮಾದರಿಯ ಗೂಂಡಾಗಿರಿ, ಪೈಶಾಚಿಕ ಕ್ರತ್ಯವನ್ನು ವಿರೋಧಿಸಿ, ಸಿಪಿಐ(ಎಂ) ನೇತ್ರತ್ವದಲ್ಲಿ ಮಂಗಳೂರಿನ ಕ್ಲಾಕ್ ಟವರ್ ಬಳಿ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು.

ನೂರಾರು ಸಂಖ್ಯೆಯಲ್ಲಿ ಸೇರಿದ ಸಿಪಿಐ(ಎಂ) ಕಾರ್ಯಕರ್ತರು ಬಿಜೆಪಿಯ ಗೂಂಡಾಗಿರಿ ಹಾಗೂ ಭಯೋತ್ಪಾದನಾ ಕ್ರತ್ಯದ ವಿರುದ್ಧ ಆಕ್ರೋಶಭರಿತರಾಗಿ ಘೋಷಣೆಗಳನ್ನು ಕೂಗಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ.ಬಾಲಕ್ರಷ್ಣ ಶೆಟ್ಟಿಯವರು, "ತ್ರಿಪುರ ರಾಜ್ಯದಲ್ಲಿ 40 ವರ್ಷಗಳ ಕಾಲ ಸುದೀರ್ಘವಾಗಿ ಆಳ್ವಿಕೆ ನಡೆಸಿದ ಕಮ್ಯುನಿಸ್ಟರು ರಾಜ್ಯದ ಸರ್ವಾಂಗೀಣ ಅಭಿವ್ರದ್ಧಿ ಗೆ ಶಕ್ತಿ ಮೀರಿ ಶ್ರಮಿಸಿದ್ದರು. ಮಾತ್ರವಲ್ಲದೆ ಪ್ರತ್ಯೇಕ ರಾಜ್ಯದ ಬೇಡಿಕೆಯಿಟ್ಟ ಅಲ್ಲಿನ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ದ ಪ್ರಬಲವಾಗಿ ಸೆಣಸಾಟ ನಡೆಸಿ ರಾಜ್ಯದಲ್ಲಿ ಐಕ್ಯತೆ ಸಾಧಿಸಿ, ತ್ರಿಪುರವನ್ನು ಭಾರತದ ಅವಿಭಾಜ್ಯ ಅಂಗವಾಗಿಸುವಲ್ಲಿ ಅಲ್ಲಿನ ಕಮ್ಯುನಿಸ್ಟ್ ಚಳುವಳಿಯ ಪಾತ್ರ ಪ್ರಧಾನವಾಗಿದೆ. ಆದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹಣಬಲ, ತೋಲ್ಬಲವನ್ನು ಬಳಸಿ, ಕುತಂತ್ರದಿಂದ ಆಧಿಕಾರಕ್ಕೇರಿದ ಬಿಜೆಪಿ, ತನ್ನ ಜನವಿರೋಧಿ ನೀತಿಗಳಿಂದಾಗಿ ಜನರ ಆಕ್ರೋಶಕ್ಕೆ ತುತ್ತಾಗಿದೆ. ಮಾತ್ರವಲ್ಲದೆ ತನ್ನ ಭಯೋತ್ಪಾದನಾ ಕ್ರತ್ಯದಿಂದ ಜನತೆಯಲ್ಲಿ ಭಯಭೀತಿಯನ್ನು ಸ್ರಷ್ಟಿಸಿದೆ. ಇದರ ವಿರುದ್ದ ಪ್ರಬಲ ಜನಚಳುವಳಿಯನ್ನು ಸಂಘಟಿಸಿದ ಕಮ್ಯುನಿಸ್ಟರ ವಿರುದ್ದ ಸರಣಿ ಧಾಳಿ ಸಂಘಟಿಸುವ ಮೂಲಕ ತನ್ನ ಹತಾಶ ಪ್ರವ್ರತ್ತಿಯನ್ನು ಪ್ರದರ್ಶಿಸಿದೆ" ಎಂದು ಟೀಕಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು, "ದೇಶಪ್ರೇಮದ ಬಗ್ಗೆ ಬಡಾಯಿ ಕೊಚ್ಚಿಕೊಳ್ಳುವ ಬಿಜೆಪಿ ತ್ರಿಪುರದಲ್ಲಿ ದೇಶದ್ರೋಹಿಗಳೊಂದಿಗೆ ಒಪ್ಪಂದ ಮಾಡಿ ಕಳೆದ ಚುನಾವಣೆಯಲ್ಲಿ ಗೆದ್ದು ರಾಜ್ಯದೆಲ್ಲೆಡೆ ದೊಂಬಿ ಗಲಭೆ ಸ್ರಷ್ಟಿಸಿ ಜನರ ಬದುಕನ್ನೇ ನರಕಯಾತನೆಯನ್ನಾಗಿಸಿದೆ. ತನ್ನ ತಾಲಿಬಾನ್ ಮಾದರಿಯ ಭಯೋತ್ಪಾದನಾ ಕ್ರತ್ಯದ ಮೂಲಕ ಕಮ್ಯುನಿಸ್ಟರ ಮೇಲೆ ದೈಹಿಕ ಧಾಳಿ ನಡೆಸುವ ಬಿಜೆಪಿ ಸಂಘಪರಿವಾರದ ವಿರುದ್ದ ಬುಗಿಲೆದ್ದ ಆಕ್ರೋಶ ಜನಚಳುವಳಿಯಾಗಿ ಮಾರ್ಪಟ್ಟು ತ್ರಿಪುರ ರಾಜ್ಯದಲ್ಲಿ ಬದಲಾವಣೆಯ ಗಾಳಿ ಬೀಸತೊಡಗಿದೆ" ಎಂದು ಹೇಳಿದರು.

ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ. ಯಾದವ ಶೆಟ್ಟಿಯವರು ಮಾತನಾಡುತ್ತಾ, "ಅಂದು ಕಾಂಗ್ರೆಸ್ ನಡೆಸಿದ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯನ್ನು ಎದುರಿಸಿಯೇ ತ್ರಿಪುರ ರಾಜ್ಯದಲ್ಲಿ ಕಮ್ಯುನಿಸ್ಟರು ಅಧಿಕಾರಕ್ಕೇರಿದ್ದು ಮಾತ್ರವಲ್ಲ 40 ವರ್ಷಗಳ ಕಾಲ ಸುಧೀರ್ಘವಾಗಿ ಉತ್ತಮ ಆಡಳಿತ ನೀಡುವ ಮೂಲಕ ದೇಶದಲ್ಲೇ ಮಾದರಿ ಸರಕಾರ ಎಂಬ ಹೆಗ್ಗಳಿಕೆಗೂ ಪಾತ್ರವಾಗಿತ್ತು. ಬಿಜೆಪಿ ಸಂಘಪರಿವಾರ ನಡೆಸುವ ಭಯೋತ್ಪಾದನಾ ಕೃತ್ಯದಿಂದ ಕಮ್ಯುನಿಸ್ಟರು ಯಾವತ್ತೂ ವಿಚಲಿತರಾಗುವುದಿಲ್ಲ. ಕಮ್ಯುನಿಷ್ಟರು ತನ್ನ ಕೊನೆಯ ಉಸಿರು ಇರುವವರೆಗೂ ದೇಶದ ಐಕ್ಯತೆ, ಸೌಹಾರ್ದತೆಗಾಗಿ ಹಾಗೂ ಜನರ ಬದುಕಿನ ರಕ್ಷಣೆಗಾಗಿ ಶ್ರಮಿಸುತ್ತಾರೆ" ಎಂದು ಹೇಳಿದರು.

ಶಿಕ್ಷಕರ ತರಬೇತಿಯನ್ನು ನೀಡುವ ಸಂಸ್ಥೆಗಳು ಗಲ್ಲಿಗೊಂದರಂತೆ ನಾಯಿಕೊಡೆಗಳಂತೆ ಎದ್ದಿವೆ. 2007 ರಿಂದ ಪಕ್ಕದ ಆಂದ್ರದಿಂದ ಶಿಕ್ಷಕ ತರಬೇತಿಯನ್ನು ಪಡೆಯಲು ಯಾವಾಗ ವಲಸೆ ಬಂದರೋ ಆಗ ಡಿಎಡ್ ಮತ್ತು ಬಿಎಡ್ ತರಬೇತಿ ಸಂಸ್ಥೆಗಳಿಗೆ ಇನ್ನಿಲದ ಮಹತ್ವ ಬಂತು. ರಾಜ್ಯದಲ್ಲಿ ಈಗ 304 ಬಿಎಡ್ ಕಾಲೇಜುಗಳಿವೆ. ಅದರಲ್ಲಿ 8 ಸರಕಾರಿ ಕಾಲೇಜುಗಳಿವೆ 296 ಖಾಸಗಿ ಶಿಕ್ಷಣ ಸಂಸ್ಥೆಗಳಿವೆ. ಡಿಎಡ್ ಕಾಲೇಜುಗಳ ಸಂಖ್ಯೆ 176 ಇದೆ. ಅದರಲ್ಲಿ 25 ಸರಕಾರಿ ಕಾಲೇಜುಗಳಿವೆ.

ಶಿಕ್ಷಕರಾಗಲು 19% ಮಂದಿ ಅರ್ಹರು: ಇದರ ಹೊಣೆ ಯಾರು ಹೊರುವರು?!

ಗುರುರಾಜ ದೇಸಾಯಿ

ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ–2021ರ ಫಲಿತಾಂಶವನ್ನು ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯು ಪ್ರಕಟಿಸಿದೆ. ಕರ್ನಾಟಕದ ವಿವಿಧ ತರಗತಿಗಳಲ್ಲಿ ಬೋಧಿಸುವ ಶಿಕ್ಷಣಕರು ಸೇರಿದಂತೆ ಒಟ್ಟು ಪತ್ರಿಕೆ 1 ಮತ್ತು ಪತ್ರಿಕೆ 2ರಲ್ಲಿ 2.31 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಈ ಪೈಕಿ ಶೇ.19ರಷ್ಟು ಮಂದಿ ಉತ್ತೀರ್ಣರಾಗಿದ್ದು, 45,074 ಅಭ್ಯರ್ಥಿಗಳು ಅರ್ಹತೆ ಪಡೆದುಕೊಂಡಿದ್ದಾರೆ.

ಕಳೆದ ವರ್ಷ 2,02,991 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 7,980 ಮಂದಿ ಅರ್ಹತೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಕಳೆದ ಬಾರಿ ಶೇ.3.93ರಷ್ಟು ಫಲಿತಾಂಶ ಬಂದಿದ್ದು, ಈ ಬಾರಿ ಶೇ.15ರಷ್ಟು ಫಲಿತಾಂಶ ಹೆಚ್ಚಳವಾಗಿದೆ. ಪತ್ರಿಕೆ 1ರಲ್ಲಿ (1 ರಿಂದ 5 ನೇ ತರಗತಿ ವರೆಗೆ ಬೋಧಿಸುವ ಶಿಕ್ಷಕರು) ಶೇ.20ರಷ್ಟು ಅಂದರೆ 18,960 ಅಭ್ಯರ್ಥಿಗಳು ಪಾಸ್ ಆಗಿದ್ದಾರೆ. ಪತ್ರಿಕೆ 2 ರಲ್ಲಿ (6 ರಿಂದ 8 ನೇ ತರಗತಿಗೆ ಬೋಧಿಸುವ ಶಿಕ್ಷಕರು) 19,523 ಅಭ್ಯರ್ಥಿಗಳು ಪಾಸ್ ಆಗಿದ್ದಾರೆ.

ಯಾವ ಮಾನದಂಡದ ಮೇಲೆ ಅರ್ಹತೆ?:

ಅರ್ಹತಾ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳು ನೀಡುವ ಸರಿ ಉತ್ತರಗಳನ್ನು ಆಧರಿಸಿ ಉತ್ತರ ಪತ್ರಿಕೆಯ ಮೌಲ್ಯಮಾಪನ ಮಾಡಲಾಗುತ್ತದೆ. ಸಾಮಾನ್ಯ ವರ್ಗದ ಅಭ್ಯರ್ಥಿಗಳು ಶೇ.60ರಷ್ಟು ಮತ್ತು ಪರಿಶಿಷ್ಟ ಜಾತಿ ಮ್ತತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಪಡೆಯುವ ಶೇ.55ರಷ್ಟು ಅಂಕಗಳನ್ನು ಅರ್ಹತೆ ಎಂದು ಪರಿಗಣಿಸಲಾಗುತ್ತದೆ.

ಅರ್ಹತೆ ಬರದಿದ್ದಕ್ಕೆ ಯಾರು ಹೊಣೆ:

2.31 ಲಕ್ಷ ಜನ ಶಿಕ್ಷಕರಾಗಲು ತುದಿಗಾಲ ಮೇಲೆ ನಿಂತಿದ್ದಾರೆ. ಅವರಲ್ಲಿ ಕೇವಲ 45,074 ಜನ ಮಾತ್ರ ತೇರ್ಗಡೆ ಹೊಂದಿದ್ದಾರೆ. ಉಳಿದ 1,85,926 ಜನ ಶಿಕ್ಷಕರಾಗಲು ಅರ್ಹತೆ ಹೊಂದಿಲ್ಲ. ನಿಜಕ್ಕೂ ಇದು ದೊಡ್ಡ ಅಚ್ಚರಿ, ಇಷ್ಟೊಂದು ಜನ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಿಲ್ಲ ಎಂದಾದರೆ



ಇದಕ್ಕೆ ಯಾರು ಹೊಣೆ? ಇದು ಪರೀಕ್ಷಾರ್ಥಿಗಳ ವೈಫಲ್ಯವೆ? ಅಧ್ಯಯನದ ಕೊರತೆಯೇ? ಅಥವಾ ಪ್ರಶಿಕ್ಷಣಾರ್ಥಿಗಳಿಗೆ ತರಬೇತಿ ನೀಡುವ ಉಪನ್ಯಾಸಕರ ವೈಫಲ್ಯವೆ? ಅಥವಾ ಸರಕಾರ ಈ ಪರೀಕ್ಷೆಯ ಹೆಸರಲ್ಲಿ ಶಿಕ್ಷಕರಾಗುವವರ ಕನಸನ್ನು ನಿಯಂತ್ರಿಸುತ್ತದೆಯೇ? ಎಂಬೆಲ್ಲ ಪ್ರಶ್ನೆಗಳು ಸಹಜವಾಗಿ ಕಣ್ಮುಂದೆ ಬರುತ್ತವೆ. ಆದರೆ ಉತ್ತರ ಮಾತ್ರ ಪ್ರಶ್ನೆಯಷ್ಟು ಸರಳವಾಗಿಲ್ಲ.

ನಾಯಿಕೊಡೆಗಳಂತಿವೆ ತರಬೇತಿ ಸಂಸ್ಥೆಗಳು:

ಶಿಕ್ಷಕರ ತರಬೇತಿಯನ್ನು ನೀಡುವ ಸಂಸ್ಥೆಗಳು ಗಲ್ಲಿಗೊಂದರಂತೆ ನಾಯಿಕೊಡೆಗಳಂತೆ ಎದ್ದಿವೆ. 2007 ರಿಂದ ಪಕ್ಕದ ಆಂದ್ರದಿಂದ ಶಿಕ್ಷಕ ತರಬೇತಿಯನ್ನು ಪಡೆಯಲು ಯಾವಾಗ ವಲಸೆ ಬಂದರೋ ಆಗ ಡಿಎಡ್ ಮತ್ತು ಬಿಎಡ್ ತರಬೇತಿ ಸಂಸ್ಥೆಗಳಿಗೆ ಇನ್ನಿಲದ ಮಹತ್ವ ಬಂತು. ರಾಜ್ಯದಲ್ಲಿ ಈಗ 304 ಬಿಎಡ್ ಕಾಲೇಜುಗಳಿವೆ. ಅದರಲ್ಲಿ 8 ಸರಕಾರಿ ಕಾಲೇಜುಗಳಿವೆ 296 ಖಾಸಗಿ ಶಿಕ್ಷಣ ಸಂಸ್ಥೆಗಳಿವೆ. ಡಿಎಡ್ ಕಾಲೇಜುಗಳ ಸಂಖ್ಯೆ 176 ಇದೆ. ಅದರಲ್ಲಿ 25 ಸರಕಾರಿ ಕಾಲೇಜುಗಳಿವೆ.

ಡಿಎಡ್ ಮತ್ತು ಬಿಎಡ್ ಎರಡು ಸೇರಿ ಸರಕಾರಿ ತರಬೇತಿ ಸಂಸ್ಥೆಗಳ ಸಂಖ್ಯೆ ಕೇವಲ 33 ಮಾತ್ರ. ಇದನ್ನು ಬಂಡವಾಳವಾಗಿಸಿಕೊಂಡುವ ಖಾಸಗಿ ಶಿಕ್ಷಣ ಸಂಸ್ಥೆಗಳು ದುಬಾರಿ ಹಣವನ್ನು ಪಡೆಯುತ್ತಿವೆ. ಒಂದು ವರ್ಷಕ್ಕೆ ಪ್ರಶಿಕ್ಷಣಾರ್ಥಿಗಳಿಂದ 70 ರಿಂದ 85 ಸಾವಿರ ಶುಲ್ಕವನ್ನು ಪಡೆಯುತ್ತಿದ್ದಾರೆ. ಒಂದು ವರ್ಷ ಇದ್ದ ಬಿಎಡ್ ಕೋರ್ಸ್‌ನ್ನು ಎರಡು ವರ್ಷ ಮಾಡಿದ್ದರೆ. ಡಿಎಡ್ ಎರಡು ವರ್ಷ ತರಬೇತಿ ಪಡೆಯುವ ಕೋರ್ಸ್ ಆಗಿದೆ. ಅಂದಾಜು ಎರಡು ವರ್ಷಕ್ಕೆ 1,50,000 ಕ್ಕಿಂತ ಹೆಚ್ಚಿನ ಶುಲ್ಕ ಕಟ್ಟುತ್ತಿದ್ದಾರೆ. ಇನ್ನೂ ಖಾಸಗಿ ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ತರಬೇತಿಗಳನ್ನು ನೀಡುತ್ತಿಲ್ಲ ಎಂಬ ಕಾರಣಗಳು ಕೇಳಿ ಬರುತ್ತಿವೆ. ಕೆಲ ತರಬೇತಿ ಸಂಸ್ಥೆಗಳು ಹಣ ನೀಡಿದರೆ ಸಾಕು ಪರೀಕ್ಷೆಗೆ ಕೂಡಿಸುವ ಇಲ್ಲವೆ ಸರ್ಟಿಫಿಕೆಟ್‌ಗಳನ್ನು ನೀಡುತ್ತವೆ ಎಂಬ ಆರೋಪಗಳಿವೆ. ಕೆಲ ಕಾಲೇಜುಗಳಲ್ಲಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳದೆ ಒಬ್ಬರು ಎರಡು ವಿಷಯ ಬೋಧಿಸುವ ವ್ಯವಸ್ಥೆಯೂ ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಕಂಡು ಬರುತ್ತಿದೆ.

ಸ್ವಯಂ ಅಧ್ಯಯನಕ್ಕೆ ಸಮಯವೇ ಇಲ್ಲ:

ಬಿಎಡ್ ಮತ್ತು ಡಿಎಡ್ ಓದುವ ವಿದ್ಯಾರ್ಥಿಗಳಿಗೆ ಸ್ವಯಂ ಅಧ್ಯಯನದ ಕೊರತೆ ಹೆಚ್ಚಾಗಿತ್ತಿದೆ. ಲೆಸನ್



ಪ್ಲಾನ್, ಅಸೈನ್‌ಮೆಂಟ್, ಟೀಚಿಗೇಂಡ್ಸ್ ನಲ್ಲಿ ಸಮಯ ಕಳೆಯುತ್ತಿದ್ದಾರೆ. ಪಠ್ಯಗಳ ಅಧ್ಯಯನ, ಹಾಗೂ ಸಿಇಟಿಗೆ ಗಮನ ನೀಡಲು ಆಗುತ್ತಿಲ್ಲ. ಇಂಟರ್‌ನಲ್ಲ ಅಂಕದ ಹೆಸರಿನಲ್ಲಿ ಬೆದರಿಸುವ ಬೋಧಕರಿಗೆ ಪ್ರಶಿಕ್ಷಣಾರ್ಥಿಗಳು ದಾಳಗಳಾಗಿ ಬಿಟ್ಟಿರುತ್ತಾರೆ. ವಿರೋಧಿಸಿದರೆ ಅಂಕ ಕಡಿತವಾಗುವ ಭಯಕ್ಕೆ ಎಲ್ಲವನ್ನೂ ಸಹಿಸಿಕೊಂಡಿರಬೇಕಾದ ಸ್ಥಿತಿ ವಿದ್ಯಾರ್ಥಿಗಳದ್ದಾಗಿದೆ. ಈ ಬಾರಿಯ ಟಿಇಟಿ ಪರೀಕ್ಷೆ ಹಾಗೂ ಡಿಎಡ್ ಮತ್ತು ಬಿಎಡ್ ಮೂರನೇಯ ಸೆಮೆಸ್ಟರ್ ಪರೀಕ್ಷೆಗಳು ಒಂದೇ ಬಾರಿ ಬಂದಿದ್ದರಿಂದ ಬಹಳಷ್ಟು ಜನ ತೇರ್ಗಡೆಯಾಗಿಲ್ಲ ಎಂಬ ವಾದವೂ ಇದೆ. ಡಿಎಡ್. ಮತ್ತು ಬಿಎಡ್ ಮೂರನೇ ಸೆಮೆಸ್ಟರ್ ಓದುತ್ತಿರುವವರು ಟಿಇಟಿ ಬರೆಯಲು ಅವಕಾಶ ನೀಡಲಾಗಿದೆ. ಇದು ಒಳ್ಳೆಯದೆ ಆದರೆ ಎರಡು ಪರೀಕ್ಷೆಗಳ ನಡುವೆ ಅಂತರ ಇರುವಂತೆ ನೋಡಿಕೊಳ್ಳುವಲ್ಲಿ ಶಿಕ್ಷಣ ಇಲಾಖೆ ವಿಫಲವಾಗಿದೆ.

ಹಣ ಮಾಡುವದಷ್ಟೆ ಸರಕಾರದ ಕೆಲಸ:

ಇನ್ನೂ ಡಿಎಡ್ ಮತ್ತು ಬಿಎಡ್ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಉತ್ತಮ ಗುಣ ಮಟ್ಟದ ಕಲಿಕಗೆ ಸರಕಾರ ನಿಲ್ಲಿಯವರೆಗೆ ಬ್ಲೂಪ್ರಿಂಟ್ ತಯಾರಿಸಿಲ್ಲ. ಭವಿಷ್ಯದಲ್ಲಿ ಶಿಕ್ಕರಾಗಿ ಬರಬೇಕಾದವರ ಬಗ್ಗೆ ಕಾಳಜಿ ವಹಿಸುವುದು ಮುಖ್ಯವಾಗಿದೆ. ಆದರೆ ಸರಕಾರ ಇದರ ಕಡೆ ಗಮನ ನೀಡದೆ ಕೇವಲ ಹಣ ಮಾಡುವುದಕ್ಕಾಗಿ ಪರೀಕ್ಷೆಗಳ ಮೇಲೆ ಪರೀಕ್ಷೆಗಳನ್ನು ನಡೆಸುತ್ತಿದೆ. ಎಸ್.ಸಿ. ಎಸ್‌ಟಿ ಗೆ ಪ್ರತ್ಯೇಕ ಶುಲ್ಕ ಹಾಗೂ ಸಾಮಾನ್ಯ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಶುಲ್ಕ ಎಂದು ನಿಗದಿ ಮಾಡಲಾಗುತ್ತಿದೆ. ಅಂದಾಜು ಪರೀಕಾ ಶುಲ್ಕ 200 ರೂ ಅಂತಾ ಲೆಕ್ಕ ಇಟ್ಟುಕೊಂಡರೆ, ಸರಕಾರಕ್ಕೆ ಬರುವ ಆದಾಯ ಎಷ್ಟು ಅಂದರೆ 4 ಕೋಟಿ 62 ಲಕ್ಷ ರೂ ಗಳಾಗುತ್ತದೆ. ಒಂದು ಟಿಇಟಿ ಪರೀಕ್ಷೆಯಿಂದ ಸರಕಾರಕ್ಕೆ ಇಷ್ಟೊಂದು ಆದಾಯ ಬರುತ್ತಿರುವುದನ್ನು ಗಮನಿಸಿರುವ ಸರಕಾರ ಪರೀಕ್ಷೆಯ ಮೇಲೆ ಪರೀಕ್ಷೆ ನಡೆಸುತ್ತಿದೆಯೇ ಹೊರತು ಅದರಲ್ಲಿರುವ ದೋಷವನ್ನು ಸರಿಪಡಿಸುತ್ತಿಲ್ಲ. ಡಿಎಡ್ ಮತ್ತು ಬಿಎಡ್ ಓದುವುದಕ್ಕಾಗಿ ಒಂದು ಬಾರಿ ಸಿಇಟಿ ಬರೆಯಲಾಗುತ್ತದೆ. ನಂತರದಲ್ಲಿ ಟಿಇಟಿ ಬರೆಯಬೇಕು. ಟಿಇಟಿಯಲ್ಲಿ ತೇರ್ಗಡೆಯಾದರೆ ನೇಮಕಾತಿ ಪರೀಕ್ಷೆ ಬರೆಯಬಹುದಾಗಿದೆ. ಅಂದರೆ ಸಿಇಟಿ + ಟಿಇಟಿ+ಸಿಇಟಿ = ನೇಮಕಾತಿ. ಇದು ಅವೈಜ್ಞಾನಿಕವಾಗಿದೆ ಎಂದು ಅನೇಕರು ಹೇಳುತ್ತಿದ್ದರೂ ಇದನ್ನು ಸರಕಾರ ಸರಿಪಡಿಸುತ್ತಿಲ್ಲ. ಹೆಚ್ಚು ಕಡಿಮೆ ಪರೀಕ್ಷೆಗಳಲ್ಲಿಯೇ ವಯೋಮಿತಿಯನ್ನು ಕಳೆದುಕೊಂಡವರು ಬಹಳಷ್ಟು ಜನರಿದ್ದಾರೆ. ಇಷ್ಟೆಲ್ಲ ಸರ್ಕಸ್ ಮಾಡಿಸುವ ಸರಕಾರ ಕೇವಲ 1 ಸಾವಿರದಿಂದ 5 ಸಾವಿರದೊಳಿಗಿನ ಹುದ್ದೆಗಳಿಗೆ ಮಾತ್ರ ನೇಮಕಾತಿ ಪ್ರಕ್ರಿಯೆ ನಡೆಸುತ್ತಿದೆ. ಈ ಕಾರಣದಿಂದಾಗಿಯೇ ರಾಜ್ಯದಲ್ಲಿ 33,875 ಶಿಕ್ಷಕರ ಹುದ್ದೆಗಳು ಖಾಲಿ ಬಿದ್ದಿವೆ.

ಒಟ್ಟಿನಲ್ಲಿ ಗೊಂದಲಮಯವಾಗರುವ ಟಿಇಟಿ ಕುರಿತು ಸ್ಪಷ್ಟವಾದ ನಿಲುವನ್ನು ರಾಜ್ಯ ಸರಕಾರ ತೆಗೆದುಕೊಳ್ಳಬೇಕಿದೆ. ಜೊತೆಯಲ್ಲಿ ಗುಣ ಮಟ್ಟದ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ರೂಪಿಸುವ ಜವಬ್ದಾರಿಯೂ ಸರಕಾರದ ಮೇಲಿದೆ. ಆ ನಿಟ್ಟಿನಲ್ಲಿ ಸರಕಾರ ಯೋಚಿಸಬೇಕಿದೆ.

"ಯಾವ ಮಾನದಂಡವನ್ನು ಬಳಸಿ ಶಿಕ್ಷಕರ ಅರ್ಹತೆಯನ್ನು ಸರಕಾರ ಮತ್ತು ಶಿಕ್ಷಣ ಇಲಾಖೆ ಅಳೆಯುತ್ತಿದೆ ಎಂಬುದೆ ಗೊತ್ತಾಗುತ್ತಿಲ್ಲ. ಇಷ್ಟೊಂದು ಪರೀಕ್ಷೆಗಳ ಮೇಲೆ ಪರೀಕ್ಷೆಳನ್ನು ತೆಗೆದುಕೊಳ್ಳುವುದಾದರೆ ತರಬೇತಿ ಸಂಸ್ಥೆಗಳಲ್ಲಿ ಗುಣ ಮಟ್ಟದ ತರಬೇತಿ ಸಿಗುತ್ತಿಲ್ಲವೆ? ಮಕ್ಕಳಿಗೆ ಬೋಧನೆ ಮಾಡುವುದು ಹೇಗೆ ಎಂಬುದನ್ನು ಹೇಳಿ ಕೊಡುತ್ತಿದ್ದಾರೆಯೇ ಎಂದು ಪರೀಕ್ಷೆ ನಡೆಸಬೇಕಾದವರು ಯಾರು? ಒಟ್ಟಿನಲ್ಲಿ ಶಿಕ್ಷಕರಾಗಬೇಕಾಗಿರುವವರಿಗೆ ಪರೀಕ್ಷೆಯ ಹೆಸರಿನಲ್ಲಿ ಸರಕಾರ ಕಾಲ ಹರಣ ಮಾಡುತ್ತಿದೆ."

–ಗೋವಿಂದ ಮಾನಸಗಲ್, ಅತಿಥಿ ಉಪನ್ಯಾಸಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದೇವದುರ್ಗ

ಕೋವಿಡ್ ಲಸಿಕೆ ನೀಡುವಾಗ ಮಾತ್ರೆಗಳನ್ನು ಒದಗಿಸಲು ಹಾಗೂ ಇತರೆ ಬೇಡಿಕೆಗಳನ್ನು ಈಡೇರಿಸಲು ಡಿವೈಎಫ್‌ಐ ಒತ್ತಾಯ

ಕೋವಿಡ್ ಲಸಿಕೆ ನೀಡುವಾಗ ಆಸ್ಪತ್ರೆಗಳಲ್ಲಿ ಮಾತ್ರೆಗಳನ್ನು ನೀಡಲು ಒತ್ತಾಯಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಹಾವೇರಿ ಜಿಲ್ಲ ಸಮಿತಿ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮಂಗಳವಾರ ತಹಸೀಲ್ದಾರರವರ ಮೂಲಕ ಮನವಿ ಸಲ್ಲಿಸಿದೆ.

ಮಾರಣಾಂತಿಕ ಕೊರೋನಾ ಸೋಂಕು ನಿಯಂತ್ರಿಸಲು ಹಾಗೂ ಜನತೆ ಈ ಸೋಂಕಿನಿಂದ ಪ್ರಾಣಾಪಾಯದಿಂದ ಪಾರಾಗಲು ಸರಕಾರ ಆರೋಗ್ಯ ಇಲಾಖೆಯ ಮೂಲಕ ಉಚಿತವಾಗಿ ಲಸಿಕೆಯನ್ನು ನೀಡುತ್ತಿದೆ. ಲಸಿಕೆ ನೀಡುವ ಸಂದರ್ಭದಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ ಇರುವ ವ್ಯಕ್ತಿಗಳಿಗೆ ಜ್ವರ, ಸುಸ್ತು ಇತರೆ ದೈಹಿಕ ತೊಂದರೆಗಳು ಎದುರಾದರೂ ಅದಕ್ಕೆ ಆರೋಗ್ಯ ಇಲಾಖೆಯು ಪ್ಯಾರಾಸೆಟಮಲ್ ಮತ್ತಿತರೆ ಔಷಧಿ ಮಾತ್ರೆ ಕೊಡುತಿದ್ದರು. ಆದರೆ ಇತ್ತೀಚಿನ ಹಲವು ದಿನಗಳಿಂದ ಸರಿಯಾಗಿ ಲಸಿಕೆ ದೊರೆಯುತ್ತಿರಲಿಲ್ಲ. ಈಗ ಲಸಿಕೆ ಸಿಗುತ್ತಿದೆ ಆದರೆ ಔಷಧಿ ಮಾತ್ರೆಗಳನ್ನು ಹಾವೇರಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿರುವ ಲಸಿಕಾ ಕೇಂದ್ರ, ತಾಲೂಕಿನ ದೇವಿಹೊಸೂರ ಪ್ರಾಥಮಿಕ ಆರೋಗ್ಯ ಕೇಂದ್ರವ್ಯಾಪ್ತಿಯ ದೇವಿಹೊಸೂರು ಹಾಗೂ ವೆಂಕಟಾಪುರ, ಹಾನಗಲ್ ತಾಲೂಕಿನ ನೀರಲಗಿ (ಮಹಲ್ ಆಡೂರು) ಗ್ರಾಮಗಳು ಸೇರಿದಂತೆ ಇತರೆಡೆಗಳಲ್ಲಿ ಲಸಿಕೆ ಮಾತ್ರ ಹಾಕಿ ಮಾತ್ರೆ ನೀಡುತ್ತಿಲ್ಲ.

ಸರಕಾರಿ ಆರೋಗ್ಯ ಇಲಾಖೆಯ ಈ ಕ್ರಮದ ದುಷ್ಪರಿಣಾಮವಾಗಿ ಅನೇಕರು ಲಸಿಕೆ ಹಾಕಿಸಿಕೊಳ್ಳಲು ನಗರ ಹಾಗೂ ಗ್ರಾಮೀಣ ಭಾಗದ ಬಡಜನತೆ ಮುಂದೆ ಬರುತ್ತಿಲ್ಲ. ಜ್ವರ, ಮೈ ಕೈ ನೋವಿಗೆ ಸಾಧಾರಣವಾಗಿ ನೀಡುವ ಪ್ಯಾರಾಸೆಟಮಲ್ ಮಾತ್ರೆಗಳನ್ನು ಕನಿಷ್ಠ ಸರಕಾರ ಪೂರೈಸದೆ ಇದ್ದರೆ ಅದು ಜನತೆಗೆ ಮಾಡುತ್ತಿರುವ ಅನ್ಯಾಯವಾಗುತ್ತದೆ. ಸರಕಾರದ ಈ ನಡೆ ಸಹಿಸಲಾಸಾಧ್ಯವಾದುದು. ಕೆಲವೆಡೆಗಳಲ್ಲಿ ಲಸಿಕೆ ನೀಡುವಾಗ ಸಿಬ್ಬಂದಿಗಳು ತಾರತಮ್ಯ ನೀತಿ ಅನುಸರಿಸುತ್ತಿದ್ದಾರೆ. ಇಂತಹವರಿಗೆ ಸೂಕ್ತ ನಿರ್ದೇಶನ ನೀಡಬೇಕಿದೆ.

ಅಲ್ಲದೇ ಸರಕಾರಿ ಆಸ್ಪತ್ರೆಗಳಲ್ಲಿ ಸಾಮಾನ್ಯ ರೋಗಗಳಿಗೂ ಔಷಧಿ ಕೊಡದೇ ಖಾಸಗೀ ಔಷಧ ಅಂಗಡಿಗಳಲ್ಲಿ ಕೊಳ್ಳಲು ಚೀಟಿ ನೀಡುತ್ತಿರುವುದು ಖಂಡನೀಯವಾದುದು. ಬಡ ರೋಗಿಗಳಿಗೆ ದುಬಾರಿ ಹಣ ಖರ್ಚು ಮಾಡಿ ಔಷಧಿ ಕೊಳ್ಳಲು ಸಾಧ್ಯವಾಗದಿರುವುದರಿಂದಾಗಿ ಜೀವಹಾನಿಗೆ ತುತ್ತಾಗುವ ಸಂಭವವೇ ಹೆಚ್ಚು ಎಂದು ಡಿವೈಎಫ್‌ಐ ಪ್ರಧಾನ ಕಾರ್ಯದರ್ಶಿ ಬಸವರಾಜ ಪೂಜಾರ ಹೇಳಿದ್ದಾರೆ.

ಜೊತೆಗೆ ಕೆಲವು ಸರಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಸೇರಿದಂತೆ ಅಗತ್ಯವಿರುವ ಸಿಬ್ಬಂದಿ ಹಾಗೂ ಸಲಕರಣೆಗಳ ಕೊರತೆಯಿದ್ದು ಕೂಡಲೇ ಈ ಸಮಸ್ಯೆಗಳನ್ನು ಪರಿಹರಿಸಬೇಕು.

ಆದುದರಿಂದ ಸಾರ್ವಜನಿಕ ಆರೋಗ್ಯ ಇಲಾಖೆಯ ವತಿಯಿಂದ ಕೂಡಲೇ ಲಸಿಕೆಯ ಜೊತೆಗೆ ಮಾತ್ರೆ ನೀಡಲು ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಲು ಅಗತ್ಯ ಮುತುವರ್ಜಿ ವಹಿಸಬೇಕೆಂದು ಮನವಿ ಪತ್ರದಲ್ಲಿ ಆಗ್ರಹಿಸಿದೆ.

‘ವಿಜ್ಞಾನ ಎಂಬ ಅಹಂಕಾರ’ ಮತ್ತು ಅಜ್ಞಾನದ ಬಲೆ


ಅತಿಥಿ ಅಂಕಣ



ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ

(ಸೆ.9 ರಂದು ವಾರ್ತಾ ಭಾರತಿಯಲ್ಲಿ ಪ್ರಕಟವಾದ ವಸಂತ ನಡಹಳ್ಳಿ ಅವರ ‘ವಿಜ್ಞಾನ ಎಂಬ ಅಹಂಕಾರ’ಕ್ಕೆ ಪ್ರತಿಕ್ರಿಯೆ)

ವಸಂತ ನಡಹಳ್ಳಿ ಅವರು ತಮ್ಮ ಲೇಖನಕ್ಕೆ ಕೊಟ್ಟಿರುವ ‘ವಿಜ್ಞಾನ ಎಂಬ ಅಹಂಕಾರ’ ಎಂಬ ಶೀರ್ಷಿಕೆಯು ಅವೈಜ್ಞಾನಿಕ ದೃಷ್ಟಿಯ ’ವಿಜ್ಞಾನಿಗಳು’ ಅನುಸರಿಸುವ ‘ವಿಜ್ಞಾನ’ವನ್ನೇ ನಿಜವಾದ ವಿಜ್ಞಾನವೆಂದು ತಪ್ಪಾಗಿ ಗ್ರಹಿಸಿ ಕೊಟ್ಟ ಶೀರ್ಷಿಕೆಯಾಗಿದೆ. ವಿಜ್ಞಾನ–ತಂತ್ರಜ್ಞಾನಗಳ ಜೀವಪೋಷಕ ಫಲಗಳು ದುರ್ಬಲರಿಗೆ ದೊರೆಯುತ್ತಿಲ್ಲ. ಇದಕ್ಕಾಗಿ ಇವುಗಳ ಮೇಲೆ ಹಿಡಿತವಿಟ್ಟುಕೊಂಡಿರುವ ಬಲಿಷ್ಠರನ್ನು ಹೊಣೆಮಾಡುವ ಬದಲು ವಿಜ್ಞಾನ– ತಂತ್ರಜ್ಞಾನಗಳನ್ನು ಹೊಣೆಮಾಡುವ ಕ್ರಮ, ನಾವು ಬದುಕುವ ಸಮಾಜವು ಹೇಗೆ ಸಂಘಟಿತವಾಗಿದೆ ಮತ್ತು ಅದರ ಬದಲಾವಣೆಯ ಚುಕ್ಕಾಣಿ ಯಾರ ನಿಯಂತ್ರಣದಲ್ಲಿದೆ ಎಂಬುದರ ಬಗ್ಗೆ ಇರುವ ಅಜ್ಞಾನದ ಫಲ.



ಈಚೆಗೆ ವಾರ್ತಾಭಾರತಿಯಲ್ಲಿ ‘ವಿಜ್ಞಾನದ ಎಂಬ ಅಹಂಕಾರ’ ಎನ್ನುವ ಶೀರ್ಷಿಕೆಯೊಂದಿಗೆ ನಡಹಳ್ಳಿ ವಸಂತ ಎಂಬುವರ ಲೇಖನವೊಂದು ಪ್ರಕಟವಾಯಿತು. (ವಾರ್ತಾ ಭಾರತಿ. ಸೆ. 9)

ಆ ಲೇಖನದ ಮೊದಲ ಪ್ಯಾರಾ ಹೀಗಿದೆ:

“ಇವತ್ತು ವಿಜ್ಞಾನ ತಂತ್ರಜ್ಞಾನಗಳ ಹೆಸರಿನಲ್ಲಿ ನಡೆಯುತ್ತಿರವುದನ್ನು ಪರಾಮರ್ಷೆಗೆ ಒಡ್ಡುವವರಿಗೆ ವಿಜ್ಞಾನದ ವಿರೋಧಿಗಳು ಎಂಬ ಹಣೆಪಟ್ಟಿಯನ್ನು ಹಚ್ಚಲಾಗುತ್ತದೆ. ಇಂತಹವರನ್ನು ಅವಾಸ್ತವಿಕ ಕಲ್ಪನೆಗಳನ್ನಿಟ್ಟುಕೊಂಡು ಕಾಲವನ್ನು ಹಿಂದಿರುಗಿಸುವ ಭ್ರಮೆಯಲ್ಲಿ ಬದುಕುತ್ತಿರುವವರು ಎಂದು ಕಡೆಗಣಿಸಲಾಗುತ್ತದೆ. ದುರದೃಷ್ಟವೆಂದರೆ ಸಾಕಷ್ಟು ಚಿಂತನಶೀಲ ವೈಜ್ಞಾನಿಕ ಮನೋಭಾವವಿರುವವರಲ್ಲಿಯೂ ಇಂತಹದೇ ಅಭಿಪ್ರಾಯಗಳಿವೆ. ಇದನ್ನು ಅರ್ಥಮಾಡಿಕೊಳ್ಳಲು ವಿಜ್ಞಾನ, ಯಾಂತ್ರೀಕರಣ, ಕಾರ್ಪೊರೇಟೀಕರಣ, ಜಾಗತೀಕರಣಗಳನ್ನು ಒಳಗೊಂಡಿರುವ ನವಿರಾದ ಬಲೆಯನ್ನು ಸರಿಸಿ ನೋಡಬೇಕಾಗುತ್ತದೆ.“

ನಡಹಳ್ಳಿಯವರು ತಮ್ಮ ಲೇಖನದಲ್ಲಿ ಬಳಸುವ ವಿಜ್ಞಾನದ ನಿರ್ವಚನೆಯು ಗೊಂದಲದಿಂದ ಕೂಡಿದ್ದರೂ ಅವರ ನಿಲುವು ಮಾನವರ ಇತಿಹಾಸದಲ್ಲಿ ‘ವಿಜ್ಞಾನ’ದ ಪಾತ್ರವನ್ನು ಗುರುತಿಸುವಾಗ ಕೆಲಮಟ್ಟಿಗೆ ಮಟ್ಟಿಗೆ ಸಂಗತವಾಗಿಯೇ ಇದೆ. ಆದರೆ, ಅವರ ಪ್ರಕಾರ ‘ವಿಜ್ಞಾನ’ವು ಮನುಷ್ಯರಲ್ಲಿ ಮಾತ್ರವಲ್ಲ ಇತರ ಮಾನವೇತರ ಜೀವಿಗಳಲ್ಲಿಯೂ ಇದೆ. ಜೀವಿಗಳು ಪ್ರತಿಕೂಲ ಸನ್ನಿವೇಶಗಳಲ್ಲಿಯೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಮತ್ತು ತಮ್ಮ ಸಂತಾನವನ್ನು ಮುಂದುವರೆಸಲು ಅಗತ್ಯವಾದ ವಿವಿಧ ರೂಪದಲ್ಲಿ ಹೊಂದಾಣಿಕೆಗಳನ್ನು ಮಾಡಿಕೊಳ್ಳುವ ಶಕ್ತಿಯೇ ವಿಜ್ಞಾನ. ಪ್ರಕೃತಿಯು ಆ ಶಕ್ತಿಯನ್ನು ಮನುಷ್ಯರ ಮೆದುಳಿಗೆ ‘ಕೊಟ್ಟಿರಬೇಕು’. ಎಂದೂ, ಅದೇ ರೀತಿಯಲ್ಲಿ, ಈ ಶಕ್ತಿಯು ಅಂದರೆ ‘ವಿಜ್ಞಾನ’ವು ಇತರ ಜೀವಿಗಳಿಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಮತ್ತು ಸಂತಾನವನ್ನು ಮುಂದುವರೆಸಲು ಪ್ರಕತಿಯೇ ‘ನೀಡಿರಬಹುದಾದ’ ವಿವಿಧ ರೂಪಗಳಲ್ಲಿರುವ ಪ್ರವೃತ್ತಿಯಾದ್ದರಿಂದ ‘ವಿಜ್ಞಾನ’ವನ್ನು ಮನುಷ್ಯರಿಗೆ ಮಾತ್ರ ಸೀಮಿತಗೊಳಿಸುವುದು ಸರಿಯಲ್ಲ ಎಂದು ಅವರು ಅಭಿಪ್ರಾಯಪಡುತ್ತಾರೆ. ಹೀಗಾಗಿ, ನಡಹಳ್ಳಿಯವರ ಪ್ರಕಾರ, “ವಿಜ್ಞಾನ ತಂತ್ರಜ್ಞಾನಗಳು ಕೇವಲ ಮಾನವನಿಗೆ ಸೀಮಿತ ಎನ್ನುವ ತಿಳುವಳಿಕೆಯಲ್ಲಿಯೇ ಅನಗತ್ಯ ಹೆಚ್ಚುಗಾರಿಕೆಯಿದೆ. ಇಲ್ಲಿಂದಲೇ ವಿಜ್ಞಾನದ ಅಹಂಕಾರ ಪ್ರಾರಂಭವಾಗುತ್ತದೆ.”

ನಡಹಳ್ಳಿಯವರ ಮಾತುಗಳಲ್ಲೇ ಹೇಳುವುದಾದರೆ, “ವಿಜ್ಞಾನವೆಂದರೆ, ಸುತ್ತಲಿನ ಭೌತಿಕ ಜಗತ್ತಿನ ಆಗುಹೋಗುಗಳ ಬಗೆಗೆ ಹೆಚ್ಚು ನಿಖರವಾಗಿ ಹಾಗೂ ತಾರ್ಕಿಕವಾಗಿ ತಿಳಿಯುವುದು ಮತ್ತು ತಂತ್ರಜ್ಞಾನವೆಂದರೆ ಹೀಗೆ ದೊರೆತ ಜ್ಞಾನದಿಂದ ನಿತ್ಯಜೀವನವನ್ನು ಹೆಚ್ಚು ಸುರಕ್ಷಿತ ಮತ್ತು ಸಹನೀಯವಾಗಿಸಿಕೊಳ್ಳಲು ಬಳಸುವುದು” ಆದರೆ ನಡಹಳ್ಳಿಯವರ ಪ್ರಕಾರ ಇದು ವಿಜ್ಞಾನ ತಂತ್ರಜ್ಞಾನಗಳ ‘ಸರಳ ವ್ಯಾಖ್ಯೆ’. ಮತ್ತು ಇದನ್ನು “ಇಟ್ಟುಕೊಂಡರೆ’ ಮಾನವನ ಉಗಮವಾದಾಗಿನಿಂದಲೇ ಇವು ನಡೆಯುತ್ತಾ ಬಂದಿರಬೇಕಲ್ಲವೆ?” ಎಂಬ ತಮ್ಮ ಊಹೆಯನ್ನು ಆಧರಿಸಿದ ಅನುಮಾನವನ್ನೂ ವ್ಯಕ್ತಪಡಿಸುತ್ತಾರೆ. ಅವರ ಈ ಮಾತುಗಳ ಹಿಂದೆ, ಮನುಷ್ಯರ ವಿಕಾಸವನ್ನು ಮತ್ತು ಅವರ ಬದುಕಿನ ಸಾಮಾಜಿಕ ಹಂತಗಳನ್ನು ಚಾರಿತ್ರಿಕವಾಗಿ ನೋಡದ ಅಥವಾ ನೋಡಲಾರದ ನಿಲುವಿದೆ. ಅವರು ವಿಜ್ಞಾನವನ್ನು ನಿರ್ದಿಷ್ಟ ಸಾಮಾಜಿಕ ಹಂತಗಳನ್ನು ಆಧರಿಸಿ ರೂಪುಗೊಂಡ ವೈಚಾರಿಕ ಮತ್ತು ತಾರ್ಕಿಕ ಚಿಂತನಾ ವಿಧಾನವನ್ನಾಗಿ ನೋಡದೆ, ನಿಗೂಢವಾಗಿಸಿ ಅದನ್ನು ಒಂದು ಪ್ರಕೃತಿದತ್ತ ಶಕ್ತಿಯೆಂದು ನಂಬುತ್ತಾರೆ. ಪ್ರಾರಂಭದಲ್ಲಿ ಅವರು ವಿಜ್ಞಾನವೆಂದರೆ ಒಂದು ಆಲೋಚನಾ ವಿಧಾನವೆಂದು ತಾತ್ವಿಕವಾಗಿ ಒಪ್ಪಿದರೂ, ಸಾಮಾನ್ಯವಾಗಿ ಅನುಷ್ಠಾನ ಮತ್ತು ಆನ್ವಯಿಕ ನೆಲೆಗಳಲ್ಲಿ ರೂಢಿಗತವಾಗಿರುವ ಜನಸಾಮಾನ್ಯರ ಅರ್ಥದ ವಿಜ್ಞಾನದ ನಿರ್ವಚನೆಯನ್ನೇ ಅನುಸರಿಸುತ್ತಾರೆ. ಅಂದರೆ, ವಿಜ್ಞಾನವೆಂಬುದು ಭೌತಶಾಸ್ತ್ರ, ರಸಾಯನಶಾಸ್ತ್ರ ಜೀವಶಾಸ್ತ್ರ ಮುಂತಾದ ನಿರ್ದಿಷ್ಟ ಬಗೆಯ ಜ್ಞಾನಶಾಖೆಗಳಿಗೆ ಕೊಟ್ಟಿರುವ ಸಾಮಾನ್ಯ ಹೆಸರೆಂಬ ಅರ್ಥದಲ್ಲೇ ಬಳಸುತ್ತಾರೆ. ಜೊತೆಗೆ ಮೇಲೆ ಹೇಳಿದಂತೆ ಎಲ್ಲಾ ಪ್ರಾಣಿಗಳಲ್ಲೂ ಇರುವ ಪ್ರಕೃತಿದತ್ತವಾದ ‘ಶಕ್ತಿ’ ಎಂದೂ ಅಭಿಪ್ರಾಯಪಡುತ್ತಾರೆ.

ಭೌತಿಕ ವಸ್ತುಸ್ಥಿತಿಯನ್ನು ಆಧರಿಸಿ ದತ್ತವಾಗುವ ಮನುಷ್ಯರ ಯಾವುದೇ ಅನುಭವವನ್ನು ತಾರ್ಕಿಕವಾಗಿ, ವೈಚಾರಿಕವಾಗಿ ಮತ್ತು ಪುರಾವೆಗಳ ಸಹಿತ ಯಾರಾದರೂ ಪರೀಕ್ಷಿಸಿ ನೋಡಬಹುದಾದ ಕ್ರಮದಲ್ಲಿ ಮಂಡಿಸುವ ಯಾವುದೇ ನಿರಪೇಕ್ಷ ತೀರ್ಮಾನ, ವೈಜ್ಞಾನಿಕ ತೀರ್ಮಾನ ಎನಿಸಿಕೊಳ್ಳುತ್ತದೆ. ಹೀಗಾಗಿ ವಿಜ್ಞಾನ ಎನ್ನುವುದು ಒಂದು ಪಠ್ಯವಲ್ಲ, ಅಥವಾ ನಿರ್ದಿಷ್ಟ ಜ್ಞಾನಸಂಗ್ರಹವಲ್ಲ. ವಸ್ತುಪ್ರಪಂಚವನ್ನು ಮತ್ತು ಮನುಷ್ಯರ ಸಾಮಾಜಿಕ ಸಂಬಂಧಗಳನ್ನು ನಿರ್ದಿಷ್ಟ ಕಾಲದ, ನಿರ್ದಿಷ್ಟ ಸಮಾಜಿಕ ಸಂದರ್ಭಗಳಲ್ಲಿ ಗ್ರಹಿಸುವ ಮತ್ತು ಅವನ್ನು ಸಾಧ್ಯವಿದ್ದಷ್ಟೂ ನಿಖರವಾಗಿ ವಿವರಿಸುವ ಒಂದು ವೈಚಾರಿಕ ವಿಧಾನ. ನಿಸರ್ಗ ವಿಜ್ಞಾನದ ಎಲ್ಲಾ ಶಾಖೆಗಳೂ ಮತ್ತು ಮಾನವ ವಿಜ್ಞಾನದ ಎಲ್ಲಾ ಶಾಖೆಗಳೂ ಸೇರಿ ಪೂರ್ಣ ವಿಜ್ಞಾನ ಎನಿಸುತ್ತದೆ. ಇದಕ್ಕೆ ಹೊರತಾದ, ಕೇವಲ ವ್ಯಕ್ತಿಗತ ಪ್ರಯೋಜನ, ವೈಯಕ್ತಿಕ ಅನುಭವ, ನಂಬಿಕೆ, ಊಹೆ, ಅಭಿಪ್ರಾಯಗಳನ್ನು ಆಧರಿಸಿದ ತೀರ್ಮಾನಗಳನ್ನು ವಿಜ್ಞಾನ ಎನ್ನುವುದಿಲ್ಲ. ಹೆಚ್ಚೆಂದರೆ ಅವನ್ನು ಅನುಭವವಾದೀ (ಎಂಪಿರಿಕಲ್) ತೀರ್ಮಾನಗಳೆನ್ನುತ್ತೇವೆ.

ನಡಹಳ್ಳಿಯವರು ಸರಿಯಾಗೇ ಗುರುತಿಸುವಂತೆ, ಬದುಕಿನ ಸಂದರ್ಭದಲ್ಲಿ ನಮ್ಮ ಕರಣಗಳ ಮೂಲಕ ಸಿಗುವ ಅನುಭವಗಳನ್ನು ವೈಜ್ಞಾನಿಕ ವಿಧಾನದಲ್ಲಿ ಪರಿಷ್ಕರಿಸಿ, ಅನ್ವಯಿಸಿ, ನಿತ್ಯ ಜೀವನಕ್ಕೆ ಬೇಕಾದ ಉಪಕರಣ, ಸಲಕರಣೆ ಮತ್ತು ಸಾಧನಗಳನ್ನು ಆವಿಷ್ಕರಿಸಿಕೊಳ್ಳುವ ಕಲೆಯೇ ತಂತ್ರಜ್ಞಾನ. ಆದರೆ ಈ ಕಲೆಯು ಇದ್ದಕ್ಕಿದ್ದಂತೆ ರೂಪುಗೊಳ್ಳುವುದಿಲ್ಲ. ಅಥವಾ ಚಾರಿತ್ರಿಕ ಸಂದರ್ಭಗಳ ವಸ್ತುಸ್ಥಿತಿಗಳಿಂದ ಪ್ರತ್ಯೇಕವಾಗಿರುವುದಿಲ್ಲ. ಆದಿಮಾನವರು ನೆಲಕೆರೆದು ಬೀಜ ಬಿತ್ತುತ್ತಿದ್ದ ಚೂಪುಕೋಲು, ಬೇಟೆಗೆ ಬಳಸುತ್ತಿದ್ದ ಚೂಪುಗಲ್ಲಿನಿಂದ ಹಿಡಿದು, ಮಧ್ಯಯುಗದ ಕೃಷಿಸಲಕರಣೆಯಾದ ನೇಗಿಲು, ರಕ್ಷಣೆ–ಆಕ್ರಮಣಕ್ಕೆ ಬಳಸುವ ಬಂದೂಕು, ಸಂಗೀತವಾದ್ಯ, ಆಧುನಿಕ ಕಾಲದ ರೈಲು ಬಸ್ಸು, ವಿಮಾನ ಕಂಪ್ಯೂಟರ್, ರೊಬೋಟ್ ರಾಕೆಟ್ಟುಗಳವರೆಗೆ ಎಲ್ಲವೂ ಆಯಾ ಕಾಲದ ಚಾರಿತ್ರಿಕ ವಸ್ತುಸ್ಥಿತಿಗಳನ್ನು ಆಧರಿಸಿ, ಜೀವನದ ಮಟ್ಟವನ್ನು ಸುಧಾರಿಸುವಂತೆ, ವಾಣಿಜ್ಯ–ವ್ಯಾಪಾರಗಳ ತೆಕ್ಕೆಗೆ ಸಿಗುವಂತೆ ಆವಿಷ್ಕರಿಸಿದ ಎಲ್ಲಾ ವಸ್ತುಗಳೂ ಆಯಾ ಕಾಲದ ತಂತ್ರಜ್ಞಾನದ ಫಲಗಳೇ. ಅವುಗಳ ಹಿಂದಿರುವ ಆಲೋಚನಾ ವಿಧಾನ, ಅವುಗಳ ಸೃಷ್ಟಿಗೆ ಆಧಾರವಾದ ಪ್ರತಿಭೆ–ಬುದ್ಧಿವಂತಿಕೆ–ಜ್ಞಾನಗಳೂ ಸಹ ಈಗ ನಾವು ವೈಜ್ಞಾನಿಕವೆಂದು ಕರೆಯುವ ವೈಚಾರಿಕ ವಿಧಾನದಲ್ಲಿ ರೂಪಗೊಂಡ ತಿಳುವಳಿಕೆಯೇ.

ಕಾವ್ಯ, ಸಾಹಿತ್ಯ, ಚಿತ್ರಕಲೆ, ತತ್ವಶಾಸ್ತ್ರ ಮುಂತಾದವುಗಳು ಆಯಾ ಕಾಲದ ವಸ್ತುಗಳನ್ನು, ಮನುಷ್ಯ–ಪ್ರಕೃತಿಗಳ ನಡುವಿನ ಒಡನಾಟದಲ್ಲಿ ಹುಟ್ಟುವ ಆಲೋಚನೆ ಮತ್ತು ಭಾವನೆಗಳನ್ನು, ಒಟ್ಟಿನಲ್ಲಿ ಮನುಷ್ಯರ ಜೀವನಾನುಭವವನ್ನು ಆಧರಿಸಿ, ಹಿಗ್ಗಿಸಿ, ಕುಗ್ಗಿಸಿ ಅಥವಾ ವಿಸ್ತರಿಸಿ ಮಾಡಿದ ಮಾನಸಿಕ ಸೃಷ್ಟಿಗಳು. ಅವು ಭೌತಿಕ ವಸ್ತುಗಳ ಪ್ರತೀಕಗಳೇ ಹೊರತು ಅವೇ ವಸ್ತುಗಳಲ್ಲ. ಅಂದರೆ, ಅವು ಭೌತಿಕ ವಸ್ತುಗಳಾಗಿರದೆ, ಮಾನಸಿಕ ಕ್ರಿಯೆಗಳಾದ ಊಹೆ, ಕಲ್ಪನೆ, ವ್ಯಕ್ತಿಗತ ಅನುಭವ ಮತ್ತು ನಂಬಿಕೆಗಳನ್ನು ಆಧರಿಸಿ ರೂಪುಗೊಳ್ಳುವುದರಿಂದ ಅವುಗಳನ್ನು ವಿಜ್ಞಾನವೆನ್ನುವುದಿಲ್ಲ. ಆದರೆ, ಅವನ್ನು ಮನುಷ್ಯರ ಬದುಕಿಗೆ ನಿರುಪಯುಕ್ತವೆಂದು ತಿರಸ್ಕರಿಸುವುದಿಲ್ಲ. ಅವುಗಳ ಮೂರ್ತರೂಪವನ್ನು ಭೌತಿಕವಾಗಿ ಸೃಷ್ಟಿಸಲು ಮತ್ತು ಆಸ್ವಾದಿಸಲು ಸೂಕ್ತ ತಂತ್ರಜ್ಞಾನ ಹಾಗೂ ವೈಜ್ಞಾನಿಕ ದೃಷ್ಟಿ ಬೇಕೇ ಬೇಕು. ಪುಸ್ತಕ, ಚಿತ್ರ, ಶಿಲ್ಪಕಲಾಕೃತಿ, ದೇವರ ವಿಗ್ರಹ, ರಾಕ್ಷಸಾಕೃತಿಗಳು ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ ಗೊಮ್ಮಟೇಶ್ವರನ ಸುಂದರ ಮೂರ್ತಿ, ಬೇಲೂರು–ಹಳೇಬೀಡು ದೇವಸ್ಥಾನಗಳ ಕಲಾಕುಸುರಿ, ತಾಜ್ಮಹಲ್ ನ ಅಳತೆಬದ್ಧ ಸೌಂದರ್ಯ ಇವುಗಳಿಗೆ ಆಧಾರ ವೈಜ್ಞಾನಿಕ ದೃಷ್ಟಿ ಮತ್ತು ಕಲ್ಲು–ಮಣ್ಣು, ಲೋಹ, ಮುಂತಾದ ಭೌತಿಕ ವಸ್ತುಗಳು, ಜೊತೆಗೆ ಮನುಷ್ಯರಿಗೆ ಮಾತ್ರ ವಿಶಿಷ್ಟವಾದ ಅಳತೆ–ಮಾನಕ–ಸೌಂದರ್ಯಪ್ರಜ್ಞೆಗ್ಗಳನ್ನು ಮೇಳೈಸುವ ವಾಸ್ತುಶಿಲ್ಪಗಳ ತಂತ್ರಜ್ಞಾನಗಳೇ.

ಕೆಲವು ಜಾತಿಯ ಹಕ್ಕಿಗಳು ಮತ್ತು ಜೇನುಹುಳುಗಳಂಥ ಕೀಟಗಳು ಮನುಷ್ಯರ ತಂತ್ರಜ್ಞಾನ ಕೌಶಲಗಳನ್ನೂ ಮೀರಿಸುವಂಥ ಗೂಡುಗಳನ್ನು ನಿರ್ಮಿಸಿದರೂ ಅವು ಮನುಷ್ಯೇತರ ಜೀವಿಗಳ ‘ಪ್ರಕೃತಿದತ್ತ’ ಪ್ರವೃತ್ತಿಗಳ ಫಲವೇ ಹೊರತು ಮನುಷ್ಯರಲ್ಲಿರುವಂತೆ ಸಾಮಾಜಿಕವಾಗಿ ಮತ್ತು ಚಾರಿತ್ರಿಕವಾಗಿ ವಿಕಾಸಗೊಂಡ ಪ್ರಜ್ಞಾಪೂರ್ವಕ ಕ್ರಿಯೆಗಳ ಫಲವಲ್ಲ. ಮನುಷ್ಯರಲ್ಲಿರುವಂತೆ ಪೂರ್ವಾಲೋಚನೆ, ತಾರ್ಕಿಕ ಯೋಜನೆ ಮತ್ತು ಬುದ್ಧಿವಂತಿಕೆ–ಜ್ಞಾನಗಳನ್ನು ಚಾರಿತ್ರಿಕ ಬದುಕಿನ ಸಂದರ್ಭಗಳಲ್ಲಿ ರೂಪುಗೊಂಡ ಉಪಕರಣಗಳೊಂದಿಗೆ ಬೆರೆಸಿ ನಿರ್ಮಿಸಿದ ಭೌತಿಕ ಅಥವಾ ಮಾನಸಿಕ ಸೃಷ್ಟಿಗಳಲ್ಲ. ಕವಿಗಳು ವರ್ಣಿಸುವ ಕೀಟಗಳ ಝೇಂಕಾರದಲ್ಲಿ, ಕೋಗಿಲೆಯ ಸುಮಧುರ ಉಲುಹಿನಲ್ಲಿ, ನವಿಲಿನ ನರ್ತನದಲ್ಲಿ ಇರುವುದು ಹಸಿವು–ಬೇಟೆಗಳ ಸಂದರ್ಭದಲ್ಲಿ ಆಯಾ ಜೀವಿಗಳ ವಿಶಿಷ್ಟತೆಗನುಗುಣವಾಗಿ ವ್ಯಕ್ತವಾಗುವ ಪ್ರಾಣಿಸಹಜ ಪ್ರವೃತ್ತಿಗಳೇ ಹೊರತು ಅವು ಮನುಷ್ಯರಲ್ಲಿರುವಂತೆ ಪೂರ್ವಾಲೋಚನೆ, ತಾರ್ಕಿಕ ಯೋಜನೆ, ಉಪಕರಣಗಳನ್ನು ಬಳಸುವ ಕೌಶಲ, ಸಾಮಾಜಿಕ ತರಬೇತಿ, ಮತ್ತು ಸೌಂದರ್ಯಮೀಮಾಂಸೆಯ ಫಲಗಳಲ್ಲ. ಮನುಷ್ಯರು ಸಾಮಾಜಿಕವಾಗಿ ಸೃಷ್ಟಿಸುವ ವಸ್ತುಗಳಿಗೆ ಬದುಕನ್ನು ಸಾಧ್ಯಮಾಡುವ ಉಪಯೋಗ ಮೌಲ್ಯ ಮತ್ತು ಅದನ್ನಾಧರಿಸಿ, ವಾಣಿಜ್ಯ–ವ್ಯಾಪಾರಗಳನ್ನು ಸಾಧ್ಯಮಾಡುವ ವಿನಿಮಯ ಮೌಲ್ಯ ಎಂಬ ಎರಡು ಮುಖಗಳಿವೆ. ಈ ಆಯಾಮಗಳು ಮನುಷ್ಯೇತರ ಜೀವಿಗಳು ತಮ್ಮ ಪ್ರವೃತ್ತಿಯಾಗಿ ಸೃಷ್ಟಿಸುವ ಕೃತಿಗಳಿಗೆ ಇಲ್ಲ.

ನಡಹಳ್ಳಿಯವರು ಮನುಷ್ಯೇತರ ಜೀವಿಗಳಲ್ಲಿರುವುದೆಂದು ನಂಬುವ ವಿಜ್ಞಾನವೆಂಬ ಶಕ್ತಿಯು ಮನುಷ್ಯರಿಗೆ ಮಾತ್ರ ಇರುವ ವಿಶಿಷ್ಟ ಶಕ್ತಿಯೆಂದು ‘ವೈಜ್ಞಾನಿಕವಾಗಿ ಯೋಚಿಸುವವರೂ’ ಹೇಳುತ್ತಾರೆಂದೂ, ವಿಜ್ಞಾನದ ‘ಸರಳ ವಾಖ್ಯೆ’ಯನ್ನು ಅನುಸರಿಸುವ ಅವರು ಹೇಳುವ ವಿಜ್ಞಾನದ ‘ಅಹಂಕಾರ’ ಇಲ್ಲಿಂದ ಪ್ರಾರಂಭವಾಗುತ್ತದೆಯೆಂದೂ ಅಭಿಪ್ರಾಯಪಡುತ್ತಾರೆ. ವಾಸ್ತವವಾಗಿ ಸಮಸ್ಯೆ ಇರುವುದು ವಿಜ್ಞಾನದಲ್ಲಲ್ಲ. ನಡಹಳ್ಳಿಯವರೂ ಸೇರಿದಂತೆ ‘ಅವರು ವೈಜ್ಞಾನಿಕವಾಗಿ ಯೋಚಿಸುವವರು’ ಎಂದು ಯಾರನ್ನು ನಿರ್ದೇಶಿಸುತ್ತಾರೋ ಅಂಥವರು ಮಾಡುವ ವಿಜ್ಞಾನದ ವ್ಯಾಖ್ಯೆಯಲ್ಲಿದೆ. ವಿಜ್ಞಾನವೆಂದರೆ, ವಿಜ್ಞಾನಿಗಳೆಂದರೆ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಸಸ್ಯಶಾಸ್ತ್ರ, ಗಣಿತ, ಮನೋವಿಜ್ಞಾನ ಖಗೋಳವಿಜ್ಞಾನ, ಅಣುವಿಜ್ಞಾನ ಮುಂತಾದ, ಜ್ಞಾನಶಿಸ್ತುಗಳಲ್ಲಿ ಪರಿಣಿತರಾದವರನ್ನು ಮಾತ್ರ ವಿಜ್ಞಾನಿಗಳೆಂದೂ, ಚರಿತ್ರೆ, ಸಾಹಿತ್ಯ, ಕಲೆ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮುಂತಾದ ಜ್ಞಾನ ಶಿಸ್ತುಗಳಲ್ಲಿ ಪರಿಣಿತರಾದವರನ್ನು ವಿಜ್ಞಾನಿಗಳಲ್ಲವೆಂದೂ ಪರಿಗಣಿಸುವ ಅವೈಜ್ಞಾನಿಕ ಮತ್ತು ತಪ್ಪು ವಿಧಾನ ಬಹಳ ಹಿಂದಿನಿಂದಲೂ ವಿಶ್ವದಾದ್ಯಂತ ರೂಢಿಯಲ್ಲಿದೆ. ತಮ್ಮ ತಮ್ಮ ವಿಷಯಗಳಲ್ಲಿ ಮಾತ್ರ ವೈಜ್ಞಾನಿಕ ವಿಧಾನವನ್ನು ಬಳಸಿ, ಅವುಗಳ ಪರಿಧಿಯ ಹೊರಗೆ ಯಾವುದೇ

ಪುಟ 10 ಕ್ಕೆ



ಉತ್ತರ ಪ್ರದೇಶ ವಿಧಾನ ಸಭೆ ಚುನಾವಣೆ ಸಮೀಪಿಸುತ್ತಿದ್ದು ಮೋದಿ ಹಾಗೂ ಆದಿತ್ಯನಾಥ್ ನೇತೃತ್ವದ ಬಿಜೆಪಿ ಕೋಮುವಾದ ಹಾಗೂ ಜಾತಿವಾದದ ಡಬಲ್ ಎಂಜಿನ್‌ನಲ್ಲಿ ಜನರನ್ನು ಅಣಿಗೊಳಿಸಲು ಮುಂದಾಗಿದೆ. ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ನಡೆಯುತ್ತಿರುವ ರೈತ ಚಳವಳಿಯ ಹಿನ್ನೆಲೆಯಲ್ಲಿ ಮೋದಿ ಮತ್ತು ಯೋಗಿ ಭಾಷಣಗಳನ್ನು ಗಮನಿಸಬೇಕು.

*** ಪ್ರಕಾಶ್ ಕಾರಟ್**

ಕೋಮುವಾದ ಮತ್ತು ಜಾತಿವಾದದ 'ಡಬಲ್ ಎಂಜಿನ್' ಮತ್ತು 'ಅಬ್ಬಾ ಜಾನ್' ಹಸಿ ಕೋಮುವಾದಿ ಸುಳ್ಳು

ಪ್ರಧಾನಿ ನರೇಂದ್ರ ಮೋದಿ ಕೆಲವು ದಿನಗಳ ಹಿಂದೆ, ಉತ್ತರ ಪ್ರದೇಶದಲ್ಲಿ 'ಡಬಲ್ ಲಾಭ' ಒದಗಿಸಲು 'ಡಬಲ್ ಎಂಜಿನ್ ಬೆಳವಣಿಗೆ' ಎಂಬ ತಮ್ಮ ಅಚ್ಚುಮೆಚ್ಚಿನ ಹೋಲಿಕೆ ಮಾತನ್ನು ಮತ್ತೆ ಬಳಸಿದ್ದಾರೆ. ಆಲಿಗಢದಲ್ಲಿ ರಾಜಾ ಮಹೇಂದ್ರ ಪ್ರತಾಪ್ ಸಿಂಗ್ ರಾಜ್ಯ ವಿಶ್ವವಿದ್ಯಾಲಯದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡುವಾಗ ಮೋದಿ ಹೀಗೆ ಹೇಳಿದ್ದು ವಾಸ್ತವವಾಗಿ 'ಡಬಲ್ ಎಂಜಿನ್'ನ ಅರ್ಥವೇನೆಂಬುದನ್ನು ಸ್ಪಷ್ಟವಾಗಿಸಿದೆ. ಅದು ಕಡು ಕೋಮುವಾದ ಹಾಗೂ ಜಾತಿ ಮನವಿಯ ಒಂದು ಮಿಶ್ರಣವಾಗಿದೆ.

ಉತ್ತರ ಪ್ರದೇಶ ವಿಧಾನ ಸಭೆ ಚುನಾವಣೆ ಸಮೀಪಿಸುತ್ತಿದ್ದು ಮೋದಿ ಹಾಗೂ ಆದಿತ್ಯನಾಥ್ ನೇತೃತ್ವದ ಬಿಜೆಪಿ ಕೋಮುವಾದ ಹಾಗೂ ಜಾತಿವಾದದ ಡಬಲ್ ಎಂಜಿನ್‌ನಲ್ಲಿ ಜನರನ್ನು ಅಣಿಗೊಳಿಸಲು ಮುಂದಾಗಿದೆ. ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ನಡೆಯುತ್ತಿರುವ ರೈತ ಚಳವಳಿಯ ಹಿನ್ನೆಲೆಯಲ್ಲಿ ಮೋದಿ ಭಾಷಣವನ್ನು ಗಮನಿಸಬೇಕು. ನಾಲ್ಕರಿಂದ ಐದು ವರ್ಷಗಳ ಹಿಂದೆ ಜನರು ಹೆದರಿಕೆಯಿಂದ ಜೀವನ ನಡೆಸುತ್ತಿದ್ದರು ಹಾಗೂ 'ಸೋದರಿಯರು ಮತ್ತು ಪುತ್ರಿಯರು ಮನೆಗಳಿಂದ ಹೊರಗೆ ಬರಲು ಭಯಪಡುತಿದ್ದರು' ಎಂಬುದನ್ನು ನೆನಪಿಸಲು ಮೋದಿ ಮರೆಯಲಿಲ್ಲ. ಭಯದ ವಾತಾವರಣ ಹೇಗಿತ್ತೆಂದರೆ ಅನೇಕ ಜನರು ತಮ್ಮ ಪೂರ್ವಜರ ಮನೆಗಳನ್ನು ಬಿಟ್ಟು ಓಡಿ ಹೋಗಿದ್ದರು. ಮುಸ್ಲಿಂ ಕ್ರಿಮಿನಲ್‌ಗಳ ಹೆದರಿಕೆಯಿಂದಾಗಿ ಶಾಮ್ಲಿ ಜಿಲ್ಲೆಯ ನೂರಾರು ಕುಟುಂಬಗಳು ಮನೆಮಠ ತೊರೆದಿದ್ದರು ಎಂದು ಬಿಜೆಪಿ ಸಂಸದ ಹುಕುಂ ಸಿಂಗ್ 2016ರಲ್ಲಿ ಮಾಡಿದ್ದ ಸುಳ್ಳು ಆರೋಪದ ಪ್ರತಿಧ್ವನಿಯಂತಿದೆ ಈ ಟಿಪ್ಪಣಿ.

ಮೋದಿಯ 71ನೇ ಜನ್ಮದಿನದ ಪ್ರಯುಕ್ತ ಅವರ ಭಾವಚಿತ್ರ ಹೊಂದಿದ 14 ಕೋಟಿ ರೇಶನ್ ಬ್ಯಾಗ್‌ಗಳನ್ನು ವಿತರಿಸಲು ಬಿಜೆಪಿ ನಿರ್ಧರಿಸಿದೆ. ಆಹಾರಧಾನ್ಯ ಒದಗಿಸುವ ಸರ್ಕಾರಿ ಯೋಜನೆಯನ್ನು ಆಳುವ ಬಿಜೆಪಿ ತನ್ನ ನಾಯಕನನ್ನು ವೈಭವೀಕರಿಸಲು ದುರುಪಯೋಗಪಡಿಸಿಕೊಳ್ಳುತ್ತಿದೆ. ಬಿಜೆಪಿಯ ಪಾಳೇಗಾರಿ ಮನೋಭಾವ ಭಾರತದ ಜನತೆಯನ್ನು ಸರ್ಕಾರಿ ಯೋಜನೆಗಳ ಫಲಾನುಭವಿಗಳು ಎಂದಷ್ಟೇ ಕಾಣುತ್ತದೆಯೇ ಹೊರತು, ಸಮಾನ ಹಕ್ಕುಗಳಿರುವ ನಾಗರಿಕರು ಎಂದಲ್ಲ.

ಮಹೇಂದ್ರ ಪ್ರತಾಪ್ ಸಿಂಗ್ ಯುನಿವರ್ಸಿಟಿಯ ಸ್ಥಾಪನೆಯು 'ಜಾಟ್ ಶಿರೋಮಣಿ'ಗೆ ಅರ್ಪಿಸುವ ಗೌರವವಾಗಿದೆ ಎಂದು ಕಾರ್ಯಕ್ರಮದ ಪೋಸ್ಟರ್‌ಗಳಲ್ಲಿ ವರ್ಣಿಸಲಾಗಿದೆ. ಮಹೇಂದ್ರ ಪ್ರತಾಪ್ ಸಿಂಗ್‌ರನ್ನು ಜಾಟ್ ನಾಯಕನ ಸ್ಥಾನಕ್ಕೆ ಇಳಿಸುವುದು ತೀರಾ ಅಸಂಗತವಾಗಿದೆ. ಅವರೊಬ್ಬ ಕ್ರಾಂತಿಕಾರಿಯಾಗಿದ್ದರು. ಇತರ ಮುಜಾಹಿದಿನ್‌ಗಳ ಜೊತೆ ಸೇರಿ 1915ರಲ್ಲಿ ಕಾಬೂಲ್‌ನಲ್ಲಿ ಭಾರತದ ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸಿದ್ದರು. ಅವರು ಆ ಸರ್ಕಾರದ ಅಧ್ಯಕ್ಷರಾಗಿದ್ದರು; ಮೌಲ್ವಿ ಬರ್ಕತುಲ್ಲಾ ಪ್ರಧಾನ ಮಂತ್ರಿಯಾಗಿದ್ದರು. ಅವರ ಸಮಾಜವಾದಿ ಹಾಗೂ ಜಾತ್ಯತೀತ ದೃಷ್ಟಿಕೋನಕ್ಕೂ ಸಂಕುಚಿತವಾದಿ ಧಾರ್ಮಿಕ ಅಥವಾ ಜಾತಿವಾದಿ ರಾಜಕಾರಣಕ್ಕೂ ಏನೇನೂ ಸಂಬಂಧವಿಲ್ಲ. ಆದರೆ, ಇಡೀ ಜಾಟ್ ಸಮುದಾಯ ಹೊಸ ಕೃಷಿ ಕಾನೂನುಗಳ ವಿರುದ್ಧ ಸೆಟೆದು ನಿಂತಿರುವಾಗ ಬಿಜೆಪಿ ಹತಾಶೆಯಿಂದ ಆ ಸಮುದಾಯದ ವಿಶ್ವಾಸ ಗಳಿಸಲು ಕಸರತ್ತು ನಡೆಸುತ್ತಿರುವುದು ಸ್ಪಷ್ಟವಾಗಿದೆ.

ಆದಿತ್ಯನಾಥ್ ತನ್ನ ವಾಡಿಕೆಯ ಧೋರಣೆಗೆ ಅನುಗುಣವಾಗಿ ಕೋಮುವಾದಿ ಅಬ್ಬರವನ್ನು ಹೆಚ್ಚಿಸಿದ್ದಾರೆ. ಆಲಿಗಢದಲ್ಲಿ ನಡೆದ ಸಭೆಗೂ ಮುನ್ನ ಆದಿತ್ಯನಾಥ್ ಕುಶಿನಗರದಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡಿದ್ದರು. ಈಗ ಎಲ್ಲರಿಗೂ ಪಡಿತರ ಸಿಗುತ್ತಿದೆ. ಆದರೆ 2017ಕ್ಕೂ ಮುಂಚೆ ಪ್ರತಿಯೊಬ್ಬರಿಗೂ ಪಡಿತರ ಸಿಗುತ್ತಿತ್ತೇ ಎಂದು ಪ್ರಶ್ನಿಸಿದರು. 'ಅಬ್ಬಾ ಜಾನ್' ಎಂದು ಹೇಳುವವರು ಮಾತ್ರವೇ ಎಲ್ಲ ಪಡಿತರ ಧಾನ್ಯಗಳನ್ನು ತಿಂದು ತೇಗುತ್ತಿದ್ದರು ಎಂದಿದ್ದರು. ಈ ಪಕ್ಕಾ ಮುಸ್ಲಿಂ-ವಿರೋಧಿ ಪ್ರಚಾರ ಹಸಿ ಹಸಿ ಸುಳ್ಳು. ಮುಸ್ಲಿಮರೇ ಅಗತ್ಯ ಸೇವೆಗಳಿಂದ ಅತಿ ಹೆಚ್ಚು ವಂಚಿತ ಜನರು ಎಂಬುದು ಉತ್ತರ ಪ್ರದೇಶದ ಎಲ್ಲ ಅಂಕಿಅಂಶಗಳು ಸಾಬೀತುಪಡಿಸಿವೆ. ಮುಸ್ಲಿಮರನ್ನು ಪ್ರತ್ಯೇಕಗೊಳಿಸಿ ರಾಕ್ಷಸರೆಂಬಂತೆ ಬಿಂಬಿಸುತ್ತಲೇ, ಉತ್ತರ ಪ್ರದೇಶ ಹಾಗೂ ಕೇಂದ್ರದ ಸರ್ಕಾರಗಳೆರಡೂ ಎಲ್ಲರ ಅಭಿವೃದ್ಧಿಗಾಗಿ (ಸಬ್ ಕಾ ವಿಕಾಸ್) ತಾವು ಕೆಲಸ ಮಾಡುತ್ತಿದ್ದೇವೆ ಎಂದು ಅಬ್ಬರಿಸುತ್ತಿವೆ, ಸರ್ಕಾರದ ಕಲ್ಯಾಣ ಯೋಜನೆಗಳ ಲಾಭ ಎಲ್ಲ ಸಮುದಾಯಗಳಿಗೆ ಸಿಗುತ್ತಿದೆ ಎಂದು ಕೊಚ್ಚಿಕೊಳ್ಳುತ್ತಿವೆ. ಈ ಧೋರಣೆಯಿಂದಾಗಿಯೇ ಬಿಜೆಪಿಯು ಪ್ರಧಾನಮಂತ್ರಿ ಹಾಗೂ ಪಕ್ಷದ ಹೆಸರಿನಲ್ಲಿ ಸರ್ಕಾರಿ ಯೋಜನೆಗಳನ್ನು ಹೈಜಾಕ್ ಮಾಡಿದೆ.

ಮೋದಿಯ 71ನೇ ಜನ್ಮದಿನದ ಪ್ರಯುಕ್ತ ಅವರ ಭಾವಚಿತ್ರ ಹೊಂದಿದ 14 ಕೋಟಿ ರೇಶನ್ ಬ್ಯಾಗ್‌ಗಳನ್ನು ವಿತರಿಸಲು ಬಿಜೆಪಿ ನಿರ್ಧರಿಸಿದೆ. ಆಹಾರಧಾನ್ಯ ಒದಗಿಸುವ ಸರ್ಕಾರಿ ಯೋಜನೆಯನ್ನು ಆಳುವ ಬಿಜೆಪಿ ತನ್ನ ನಾಯಕನನ್ನು ವೈಭವೀಕರಿಸಲು ದುರುಪಯೋಗಪಡಿಸಿಕೊಳ್ಳುತ್ತಿದೆ.

ಬಿಜೆಪಿಯ ಪಾಳೇಗಾರಿ ಮನೋಭಾವ ಭಾರತದ ಜನತೆಯನ್ನು ಸರ್ಕಾರಿ ಯೋಜನೆಗಳ ಫಲಾನುಭವಿಗಳು ಎಂದಷ್ಟೇ ಕಾಣುತ್ತದೆಯೇ ಹೊರತು, ಸಮಾನ ಹಕ್ಕುಗಳಿರುವ ನಾಗರಿಕರು ಎಂದಲ್ಲ.

ಅನು: ವಿಶ್ವ



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಾರ್ತಾಭಾರತಿ

ಶಿಕ್ಷಣ ಮತ್ತು ಆರೋಗ್ಯದ ಮೇಲೆ ಕರ್ನಾಟಕ ಸರಕಾರದ ವೆಚ್ಚ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತಲೂ ಕಡಿಮೆ

2019-20ರಲ್ಲಿ ಕರ್ನಾಟಕ ಸರಕಾರ ಶಿಕ್ಷಣ ಮತ್ತು ಆರೋಗ್ಯ ಬಾಬ್ತುಗಳ ಮೇಲೆ ಮಾಡಿದ ವೆಚ್ಚ ಒಟ್ಟು ವೆಚ್ಚಗಳ 4.28%. ಇದು ದಕ್ಷಿಣ ಭಾರತದ ನೆರೆಯ ರಾಜ್ಯಗಳಿಗಿಂತ ಬಹಳ ಕಡಿಮೆ ಮಾತ್ರವಲ್ಲ, ವಿಶೇಷ ವಿಧದ ರಾಜ್ಯಗಳನ್ನು ಬಿಟ್ಟು ಉಳಿದ ರಾಜ್ಯಗಳ ರಾಷ್ಟ್ರೀಯ ಸರಾಸರಿಗಿಂತಲೂ ಕಡಿಮೆ ಎಂದು ಸಪ್ಟಂಬರ್ 15ರಂದು ರಾಜ್ಯ ಸರಕಾರ ವಿಧಾನ ಸಭೆಯಲ್ಲಿ ಮಂಡಿಸಿರುವ ಮಹಾಲೆಕ್ಕ ಪರಿಶೋಧಕರ (ಸಿಎಜಿ) ವರದಿ ಹೇಳುತ್ತದೆ.

ರಾಷ್ಟ್ರೀಯ ಸರಾಸರಿ ಮತ್ತು ಕೆಲವು ರಾಜ್ಯಗಳ ವೆಚ್ಚದ ಪ್ರಮಾಣ ಹೀಗಿವೆ:

ರಾಷ್ಟ್ರೀಯ ಸರಾಸರಿ	**5.21%**
ಕೇರಳ	6.59%
ತೆಲಂಗಾಣ	5.14%
ತಮಿಳುನಾಡು	5.13%
ಆಂಧ್ರಪ್ರದೇಶ	4.86%
ಮಧ್ಯಪ್ರದೇಶ	4.7%
ಮಹಾರಾಷ್ಟ್ರ	4.34%
ಕರ್ನಾಟಕ	**4.28%**

ಸರಕಾರ ಮಾಡುವ ಒಟ್ಟು ವೆಚ್ಚದಲ್ಲಿ ಶಿಕ್ಷಣ ಮತ್ತು ಆರೋಗ್ಯಕ್ಕೆ ಮಾಡುವ ವೆಚ್ಚದ ಪ್ರಮಾಣ ಹೆಚ್ಚಿದಷ್ಟೂ ಸರಕಾರೀ ವೆಚ್ಚಗಳ ಗುಣಮಟ್ಟ ಉತ್ತಮ ಎಂದು ಬಗೆಯಲಾಗುತ್ತದೆ ಎಂದು ಈ ಸಿಎಜಿ ವರದಿಯೂ ಹೇಳಿರುವುದಾಗಿ ವರದಿಯಾಗಿದೆ.

ಅಭಿವೃದ್ಧಿ ವೆಚ್ಚಗಳಲ್ಲಿಯೂ ಹಿಂದೆ

ರಾಜ್ಯ ಸರಕಾರ 2019-20ರಲ್ಲಿ 48499 ಕೋಟಿ ರೂ.ಗಳಷ್ಟು ಮಾರುಕಟ್ಟೆಯಿಂದ ಸಾಲ ತಂದಿದೆ. ಆದರೂ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಅದು ಮಾಡಿರುವ ಬಂಡವಾಳ ವೆಚ್ಚಗಳಲ್ಲಿ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಕೇವಲ 1% ಏರಿಕೆಯಾಗಿದೆ ಎಂದು ಕೂಡ ಸಿಎಜಿ ಟಿಪ್ಪಣಿ ಮಾಡಿದೆ. ಒಟ್ಟು ವೆಚ್ಚಗಳಲ್ಲಿ ಬಂಡವಾಳ ವೆಚ್ಚಗಳ ಪ್ರಮಾಣ 19%.

ಅಲ್ಲದೆ, ಸರಕಾರ ತನ್ನ ಬಳಿ ಇದ್ದ ನಗದನ್ನು ಬಳಸಿದ್ದರೆ ಈ ಸಾಲ ಮಾಡುವ ಅಗತ್ಯವಿರುತ್ತಿರಲಿಲ್ಲ ಎಂದೂ ಸಿಎಜಿ ಗಮನಿಸಿರುವುದಾಗಿ ವರದಿಯಾಗಿದೆ. ಈ ಅವಧಿಯಲ್ಲಿ ಸರಕಾರದ ಬಳಿಯಿದ್ದ ನಗದು ಶಿಲ್ಕು 5139 ಕೋಟಿ ರೂ. ನಿಂದ 13634 ಕೋಟಿ ರೂ. ಗೇರಿತ್ತು ಎಂದು ಅದು ಹೇಳಿದೆ.

11% ದಷ್ಟು ಖರ್ಚಾಗದೆ ಉಳಿದಿದೆ

ಇನ್ನೊಂದು ಕಡೆಯಲ್ಲಿ, ಬಜೆಟ್‌ನ ಅನುದಾನಗಳಲ್ಲಿ ರೂ. 29826.44 ಕೋಟಿ ಖರ್ಚಾಗದೇ ಉಳಿದಿದೆ. ಎಂದೂ ಈ ಸಿಎಜಿ ವರದಿ ಹೇಳಿದೆ.

ಒಟ್ಟು 29 ವಿವಿಧ ಅನುದಾನಗಳ ಅಡಿಯಲ್ಲಿ ಬಜೆಟಿನ ಅನುಮೋದಿತ ವೆಚ್ಚಗಳ 11% ದಷ್ಟು ಬಳಕೆಯಾಗದೇ ಉಳಿದಿತ್ತು ಎಂದು ಸಿಎಜಿ ಗಮನಿಸಿದೆ.

ಇಷ್ಟೇ ಅಲ್ಲ, ಈ ಬಳಕೆಯಾಗದೆ ಉಳಿದಿರುವ ಮೊತ್ತದಲ್ಲಿ ನಿಗದಿತ ದಿನಾಂಕದೊಳಗೆ ರೂ.14484.63 ಕೋಟಿ, ಅಂದರೆ 49%ದಷ್ಟನ್ನು ಮಾತ್ರವೇ ಹಣಕಾಸು ಇಲಾಖೆಗೆ ಹಿಂದಿರುಗಿಸಲಾಗಿತ್ತು. ಆರ್ಥಿಕ ವರ್ಷದ ಕೊನೆಯ ಎರಡು ದಿನಗಳಲ್ಲಿ ರೂ.1174.87 ಕೋಟಿ ಮರಳಿಸಲಾಗಿದೆ ಎಂದು ಸಿಎಜಿ ಗುರುತಿಸಿದೆ.

ಸಾಲ ವಸೂಲಿ 1% ಕ್ಕಿಂತಲೂ ಕಡಿಮೆ

ರಾಜ್ಯ ಸರಕಾರ ವಿವಿಧ ಸಂಸ್ಥೆಗಳಿಗೆ ಸಾಲವಾಗಿ ಒಟ್ಟು 4069 ಕೋಟಿ ರೂ. ನೀಡಿತ್ತು. ಮತ್ತು ಇದೇ ಅವಧಿಯಲ್ಲಿ ವಸೂಲಿಯಾದ ಮೊತ್ತ ಕೇವಲ 203 ಕೋಟಿ ರೂ. ಇದು ವರ್ಷದ ಆರಂಭದಲ್ಲಿದ್ದ ಸಾಲದ ಮೊತ್ತದ 1% ಕ್ಕಿಂತಲೂ ಕಡಿಮೆ.

ಲಿಂಗ ಬಜೆಟಿನಲ್ಲಿ ವಿಶ್ಲೇಷಣೆಯ ಅಭಾವ

ಪ್ರತಿವರ್ಷ ರಾಜ್ಯ ಬಜೆಟಿನಲ್ಲಿ ಲಿಂಗ ಬಜೆಟಿಂಗ್‌ಗೆ ನೀಡಿಕೆಯನ್ನು ಹೆಚ್ಚಿಸುತ್ತಿದ್ದರೂ, ಇದರ ಒಟ್ಟಾರೆ ವಿಶ್ಲೇಷಣೆ, ವಿವಿಧ ಬಾಬ್ತುಗಳಿಗೆ ನೀಡಿಕೆ ಹಾಗೂ ಅವುಗಳ ಉಸ್ತುವಾರಿ ವ್ಯವಸ್ಥೆಯ ಬಗ್ಗೆ ಮಾಹಿತಿಗಳ ಕೊರತೆ ಇದೆ ಎಂದೂ ಸಿ.ಎ.ಜಿ. ಟಿಪ್ಪಣಿ ಮಾಡಿರುವುದಾಗಿ ವರದಿಯಾಗಿದೆ.



ಕೆ.ಎಸ್. ವಿಮಲ

‘ಮೋದಿ ಹ್ಯಾಪಿ ಬರ್ತ್ ಡೇ’ ಸೂತಕದ ಮನೆಯಲ್ಲಿ ಸಂಭ್ರಮಾಚರಣೆ

ಮೋದಿ ನಿಮ್ಮ ರಾಜ್ಯಭಾರದಲ್ಲಿ_.. ಯಾರಿಗೆ ಥ್ಯಾಂಕ್ಸ್ ಹೇಳಬೇಕು ಮತ್ತು ಯಾಕೆ? ಇದು ಶ್ರೀ ಸಾಮಾನ್ಯರ ಪ್ರಶ್ನೆ.

“ಅಕ್ಕಾ ಮಕ್ಕಳು ಪೂರಿ ಮಾಡು, ಪಲಾವ್ ಮಾಡು ಅಂತಾರಕ್ಕ, ಅಡ್ಗಿ ಎಣ್ಣಿ ಬೆಲೆ ಆಕಾಶ್ದಗಾ.. ಹ್ಯಾಂಗ್ ಮಾಡ್ಲಿ..ದಿನಾ ಕೇಳೊ ಮಕ್ಳಿಗೆ ನಾ ಹ್ಯಾಂಗ್ ಹೇಳ್ಲಿ.”

ಇದು ಶಿವಮ್ಮಳ ಅಳಲು, ಅವಳೊಬ್ಬಳದೇ ಅಲ್ಲ. ಸರಿ ಸುಮಾರು ಮಧ್ಯಮ ವರ್ಗದವರೂ ಕೂಡಾ ಇಂಥಹ ವೇದನೆಯನ್ನು ಅನುಭವಿಸುತ್ತಿದ್ದಾರೆ....ಇದಕ್ಕೆ ಕಾರಣ ಎಲ್ಲ ಜೀವನಾವಶ್ಯಕ ವಸ್ತುಗಳ ಬೆಲೆಯಲ್ಲಿ ತೀವ್ರ ಏರಿಕೆ. ಅದರಲ್ಲಿಯೂ ಖಾದ್ಯ ತೈಲಗಳ ಬೆಲೆಯಲ್ಲಿ ಅತೀವ ಏರಿಕೆಯಾಗಿದೆ.

ದಕ್ಷಿಣ ಭಾರತದ ಮನೆಗಳಲ್ಲಿ ಸಾಮಾನ್ಯವಾಗಿ ಬಳಸುವುದು ಕಡಲೆ ಅಥವಾ ಶೇಂಗಾ ಎಣ್ಣೆ. ಕರ್ನಾಟಕದ ಕೆಲವು ಭಾಗಗಳಲ್ಲಿ ಸೂರ್ಯಕಾಂತಿ ಎಣ್ಣೆಯ ಬಳಕೆಯೂ ಇದೆ. ಹಾಗೆಯೇ ಇತರ ಖಾದ್ಯ ತೈಲಗಳ ಬೆಲೆಯಲ್ಲಿ ವಿಪರೀತ ಏರಿಕೆಯಾಗಿದೆ. ಸಾಧಾರಣ ಕುಟುಂಬದಲ್ಲಿ ಖಾದ್ಯತೈಲ ಬಳಕೆಯಲ್ಲಿ ಗಣನೀಯ ಪ್ರಮಾಣದ ಕಡಿತ ಆಗಿದೆ. ಇದಕ್ಕೆ ಕಾರಣ ಅವರ ಆದಾಯ ಕುಸಿದಿದೆ.

ಆದರೆ..ದೇಶದ ಪ್ರಧಾನಿಗೆ ಈ ಯಾವ ಮಾಹಿತಿಗಳೂ ಇಲ್ಲವೆಂಬಂತೆ ಅವರ 71ನೇ ಹುಟ್ಟಿದ ದಿನಕ್ಕೆ 71 ಸಾವಿರ ದೀಪ ಬೆಳಗಿಸುವರಂತೆ. ದಲಿತ ಕವಿ ಸಿದ್ದಲಿಂಗಯ್ಯನವರ ಕವಿತೆಯ ಸಾಲುಗಳು ಹೀಗಿವೆ. .

. ಮನೆಮನೆಯೂ ಕತ್ತಲು, ಪ್ರತಿ ಕಣ್ಣು ಕಣ್ಣೀರು
ರಾಜ್ಯ ಬಂದಿದ್ಯಾರಿಗೋ ರಾಮಣ್ಣ
ಸುಖವು ದಕ್ಕಿದ್ಯಾರಿಗೋ. . . . .

ಇದು ಇಂದಿನ ನಮ್ಮ ಸುತ್ತಲಿನ ವಿದ್ಯಮಾನಗಳಿಗಾಗಿಯೇ ಬರೆದ ಹಾಗಿದೆ. ಎಂದರೆ ಈ ಅಮೃತ ಮಹೋತ್ಸವದ ವರ್ಷದಲ್ಲಿಯೂ ದುಡಿಯುವ ಜನರ ಪಾಲಿಗೆ ಪ್ರತಿ ದಿನವೂ ವಿಷ ದಕ್ಕುತ್ತಿದೆಯೇ ಹೊರತೂ ಅಮೃತವಲ್ಲ. ಇದು ದಶಕಗಳ ಕಾಲದಿಂದ ನಾವಾಡಿಕೊಂಡು ಬಂದ ಮಾತುಗಳು. ಈಗ ಕೊರೊನಾ ಮಹಾರೋಗ ತಂದಿತ್ತ ಸಂಕಟಗಳು ಈಗಾಗಲೆ ಇದ್ದ ಸಂಕಷ್ಟಗಳನ್ನು ನೂರ್ಮಡಿ ಹೆಚ್ಚಿಸಿದೆ. ದೇಶವೀಗ ಕಡು ಕಷ್ಟವನ್ನು ಅನುಭವಿಸುತ್ತಿರುವ ಹೊತ್ತು. ದುಡಿಯುವ ಜನರ ಬದುಕು ಮೂರಾಬಟ್ಟೆಯಾದ ಹೊತ್ತು.

ಸೂತಕದ ಮನೆಯಲ್ಲಿ ಸಂಭ್ರಮಾಚರಣೆಯೇ?

ದೇಶದಾದ್ಯಂತ ಬಹುತೇಕ ಕುಟುಂಬಗಳಲ್ಲಿ ಗಂಡ, ಮಗ, ಹೆಂಡತಿ ಮಗಳು, ಅಪ್ಪ ಅಮ್ಮ ಹತ್ತಿರದ ಸಂಬಂಧಿಗಳು ಹೀಗೆ ಒಬ್ಬರಲ್ಲ ಒಬ್ಬರನ್ನು ಒಂದು ಕಡೆ ಕೋವಿಡ್ ಆಹುತಿ ತೆಗೆದುಕೊಂಡಿದ್ದರೆ ಇನ್ನು ಕೆಲವೆಡೆ ಕೊವಿಡ್ ಎಂಬ ರಾಜಾತಿಥ್ಯದ ಖಾಯಿಲೆಯ ಎದುರು ಕ್ಯಾನ್ಸರ್, ಹೃದಯ ಸಂಬಂಧೀ ಪ್ರಾಣಾಂತಕ ಖಾಯಿಲೆಗಳನ್ನೂ ಸರಕಾರಗಳೇ ಗೌಣವಾಗಿಸಿಬಿಟ್ಟ ಹಿನ್ನೆಲೆಯಲ್ಲಿ ಅದರಿಂದ ಪ್ರಾಣ ಕಳೆದುಕೊಂಡವರೆಷ್ಟೋ. ದೇಹಕ್ಕೆ ಪೌಷ್ಟಿಕ ಆಹಾರ ಸಿಕ್ಕದಿರುವ ಕಾರಣದಿಂದ ಕೆಲವು ರೋಗಗಳು ಉಲ್ಬಣಗೊಂಡು ದಯನೀಯ ಸ್ಥಿತಿಗೆ ತಳ್ಳಲ್ಪಟ್ಟವರೂ ಇದ್ದಾರೆ.

71 ಸಾವಿರ ದೀಪ ಬೆಳಗಿಸುವ ವಾರಣಾಸಿಯಲ್ಲಿ ವಾರವೊಂದಕ್ಕೆ 1500 ಹೆಚ್ಚು ಶವಗಳು ದಹನಕ್ಕಾಗಿ ದಹನಸ್ಥಳಗಳಾದ ಮಣಿಕರ್ಣಿಕಾ ಘಾಟ್ ಗೆ ಬಂದಿವೆ ಎಂದು ಏಪ್ರಿಲ್ 2021 ರ ವರದಿಗಳು ಹೇಳಿವೆ. ಇದು ತನ್ನ 71 ನೇ ಹುಟ್ಟಿದ ದಿನವನ್ನು ವಿಶೇಷವಾಗಿ ಆಚರಿಸಿಕೊಳ್ಳುತ್ತಿರುವ, ಮತ್ತು ದೇಶದ ಜನ ಲಾಕ್ ಡೌನ್ ಕಾರಣದಿಂದ ಆದಾಯ, ಬದುಕು ಕಳೆದುಕೊಂಡು ಪರಿತಪಿಸುತ್ತಿರುವಾಗ ನವಿಲಿಗೆ ಕಾಳು ತಿನ್ನಿಸುತ್ತ ಛಾಯಾಚಿತ್ರಕ್ಕೆ ಪೋಸುಕೊಟ್ಟು ಅದನ್ನು ಸಾರ್ವಜನಿಕವಾಗಿ ಪ್ರಚಾರಕ್ಕೆ ಬಿಟ್ಟ ಪ್ರಧಾನ ಮಂತ್ರಿಗಳ ಲೋಕಸಭಾ ಕ್ಷೇತ್ರ. ಬಹುಶಃ ಕರ್ನಾಟಕದ ಮಹಿಳೆಯರು ನಿಟ್ಟುಸಿರು ಬಿಡುವಂತೆಯೆ ವಾರಣಾಸಿಯ ಮಹಿಳೆಯರೂ ಬೆಲೆ ಏರಿಕೆಯ ಬಿಸಿಯಲ್ಲಿ ತತ್ತರಿಸುತ್ತಿರಬಹುದು. ಮೋದಿ ಭಾವಚಿತ್ರದೊಂದಿಗೆ 14 ಕೋಟಿ ಧಾನ್ಯಗಳ ಮೂಟೆಯನ್ನು ವಿತರಿಸಲಾಗುವುದಂತೆ. 5 ಕೋಟಿ ಥ್ಯಾಂಕ್ಯು ಮೋದೀಜೀ ಪೋಸ್ಟ್ ಕಾರ್ಡ್ ಅವರಿಗೆ ರವಾನೆಯಾಗಲಿದೆಯಂತೆ.

ನಮಗೆ ಪ್ರಶ್ನೆಗಳಿವೆ:

ಅಲ್ಲಿ ದೆಹಲಿಯ ಗಡಿಗಳಲ್ಲಿ ಅನ್ನದಾತರು ಕರಾಳ ಕೃಷಿ ಮಸೂದೆಯನ್ನು ಹಿಂತೆಗೆದುಕೊಳ್ಳಲು ದಣಿವರಿಯದ ಹೋರಾಟ ನಡೆಸುತ್ತಿದ್ದಾರೆ ಮಿ.ಪ್ರೈಮಿನಿಸ್ಟರ್, ಅವರ ಕೂಗಿಗೆ ಕಿವಿಗೊಡದ ತಮಗೆ ಅವರ ಬೆವರಿನ ಘಮಲು ಹೊತ್ತ ಧಾನ್ಯಗಳ ಮೇಲೆ ನಿಮ್ಮ ಹೆಸರು ಕೆತ್ತಲು ಯಾವ ಅಧಿಕಾರವಿದೆ??

ದೇಶದಾದ್ಯಂತ ಮಹಿಳೆಯರ ಮೇಲೆ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ, ಅತ್ಯಾಚಾರಗಳು ಅನಿಯಂತ್ರಿತವಾಗಿ ನಡೆಯುತ್ತಿವೆ. ತಮ್ಮ ಕ್ಷೇತ್ರವಿರುವ ಮತ್ತು ಆಗಾಗ ತಾವು ಹೊಗಳುವ ಉತ್ತರಪ್ರದೇಶ 2021ರ ಮೊದಲ ಎಂಟು ತಿಂಗಳಿನಲ್ಲಿಯೇ ದೇಶದಲ್ಲಿಯೇ ಅತಿ ಹೆಚ್ಚು ಪ್ರಕರಣಗಳು ನಡೆದ ರಾಜ್ಯವೆಂಬ ಕುಖ್ಯಾತಿ ಗಳಿಸಿದೆ. ಹಾಗೆಯೇ ತಮ್ಮದೇ ನೇರ ಮೂಗಿನ ಕೆಳಗೆ, ನಿಮ್ಮ ಸರಕಾರದ ಅಡಿಯಲ್ಲಿಯೇ ಪೋಲೀಸ್ ಮತ್ತು ಕಾನೂನು ಸುವ್ಯವಸ್ಥೆಯ ಜವಾಬ್ದಾರಿ ಇರುವ ದೇಶದ ರಾಜಧಾನಿ ದೆಹಲಿ ಎರಡನೇ ಕುಖ್ಯಾತ ಸ್ಥಾನದಲ್ಲಿದೆ. ಇದಕ್ಕಾಗಿ ದೇಶದಾದ್ಯಂತದಿಂದ ಬಿ.ಜೆ.ಪಿ.ಯ ಯುವಪಡೆ ತಮಗೆ ಥ್ಯಾಂಕ್ಸ್ ಪತ್ರ ಕಳಿಸುತ್ತಿದೆಯೇ?

ಉಜ್ವಲಾ ಹೆಸರಿನಲ್ಲಿ ಮಹಿಳೆಯರ ಮೂಗಿಗೆ ತುಪ್ಪ ಸವರಿದ ನಿಮಗೆ ಹೆಣ್ಣು ಮಕ್ಕಳು ಗ್ಯಾಸ್ ಸಿಲಿಂಡರ್‌ಗಳನ್ನು ಮೂಲೆಗೆ ತಳ್ಳಿ ಮತ್ತೆ ಸೌದೆಯ ಮೊರೆ ಹೋಗುತ್ತಿದ್ದಾರೆಂದು ಗೊತ್ತಾಗಿದೆಯೇ? ಪ್ರತಿ ತಿಂಗಳೂ ಏರಿಸುತ್ತಿರುವ ಬೆಲೆಯಿಂದಾಗಿ ಒಲೆಗಳು ಉರಿಯಲಾರದ ಸ್ಥಿತಿ ಬಂದೊದಗಿದೆ. 100% ಗೂ ಹೆಚ್ಚು ಏರಿಕೆಯಾಗಿದೆ ಸ್ವಾಮೀ. ನಮ್ಮ ತೆರಿಗೆಯ ಹಣದಲ್ಲಿ ಪ್ರಧಾನ ಮಂತ್ರಿಗಳ ಮನೆಯಲ್ಲಿ ರೋಟಿ ಸುಡುತ್ತದೆ, ಅನ್ನ ಬೇಯುತ್ತದೆ. ನಿಮಗೆ ಹೇಗೆ ಗೊತ್ತಾದೀತು ಗ್ಯಾಸ್ ಸಿಲಿಂಡರ್ ಬೆಲೆಯಲ್ಲಿ ಆದ ಹೆಚ್ಚಳ ಅಲ್ವೇ?

ಉದ್ಯೋಗ ಅಂದ್ರೆ ಪಕೋಡಾ ಮಾರೋದಲ್ಲ:

ಅಂದಹಾಗೆ ನಿಮ್ಮ ಯುವಪಡೆ ದೇಶದ ಅತ್ಯುತ್ತಮ ಉದ್ಯೋಗ ಕೇಂದ್ರವಾದ ಪಕೋಡಾ ಮಾರಾಟ ಕೇಂದ್ರದಲ್ಲಿ ಉದ್ಯೋಗಿಗಳಾಗಿರಬಹುದಲ್ಲವೇ? ಅಂಥಹ ಒಂದು ಘನತೆಯನ್ನು ಕಲ್ಪಿಸಿ ಕೊಟ್ಟ ಕಾರಣಕ್ಕೆ ಥ್ಯಾಂಕ್ಸ್ ಅವರು ಹೇಳಬಹುದೇನೋ? ಆದರೆ ಈ ದೇಶದ ನಿಜವಾದ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿದೆ. ಆದರೆ ಉದ್ಯೋಗ ಅವಕಾಶಗಳು ತೀವ್ರವಾಗಿ ಕಡಿಮೆಯಾಗುತ್ತಿವೆ. ಸಿ.ಎಂ.ಐ.ಈ ವರದಿಯ ಪ್ರಕಾರ ಜುಲೈ 2021 ರಿಂದ ಆಗಸ್ಟ್ 2021 ರ ವೇಳೆಗೆ ದೇಶದಲ್ಲಿ 15 ಲಕ್ಷ ಉದ್ಯೋಗಗಳ ಕಡಿತವಾಗಿದೆಯಂತೆ. ರಾಷ್ಟ್ರೀಯ ನಿರುದ್ಯೋಗದ ಪ್ರಮಾಣ ಜುಲೈನಲ್ಲಿ 6.96% ಇದ್ದಿದ್ದು ಆಗಸ್ಟ್ನಲ್ಲಿ 8.32% ಗೆ ಏರಿಕೆಯಾಗಿದೆ. ಔದ್ಯೋಗಿಕ ಕ್ಷೇತ್ರದಲ್ಲಿ ಬೆಳವಣಿಗೆಯಾಗಿದೆ, ಜಿ.ಡಿ.ಪಿ ಯ ದರ 20.1% ಆಗಿದೆ ಎಂದು ಹೆಗ್ಗಳಿಸಿಕೊಳ್ಳುವ ಹೊತ್ತಿನಲ್ಲಿ ಉದ್ಯೋಗ ಕಡಿತವಾಗುತ್ತಿದೆ ಎಂದರೆ ಇದು ಆಶಾದಾಯಕ ಬೆಳವಣಿಗೆ ಅಲ್ಲ ಮೋದೀಜಿ..

ನಗರ ನಿರುದ್ಯೋಗ ಜುಲೈನಲ್ಲಿ 8.3% ಇದ್ದುದು ಆಗಸ್ಟ್ ವೇಳೆಗೆ 9.78% ಗೆ ಏರಿದೆ. ಹಾಗೆಯೇ ಗ್ರಾಮೀಣ ಭಾರತದ ನಿರುದ್ಯೋಗ ಪ್ರಮಾಣ ಜುಲೈನಲ್ಲಿ 6.34% ಇದ್ದುದು ಆಗಸ್ಟ್ ವೇಳೆಗೆ 7.64%ಗೆ ಏರಿದೆ. ಎಲ್ಲ ಏರಿಕೆಗಳೂ ಸಕಾರಾತ್ಮಕ ಅಲ್ಲ ಮೋದೀಜೀ. ನಮ್ಮ ದೇಶದ ರಾಜಧಾನಿ ದೆಹಲಿಯಲ್ಲಿ ಅಂದ್ರೆ ನೀವು ನವಿಲಿಗೆ ಕಾಳು ತಿನ್ನಿಸುತ್ತ ಸಂತೋಷದಿಂದಿರುವ ನಗರದಲ್ಲಿ 11.6% ನಿರುದ್ಯೋಗಿ ಯುವಪಡೆ ಬದುಕು ಸಾಗಿಸಲು ಭವಿಷ್ಯದ ದಾರಿ ಕಾಣದ ಸ್ಥಿತಿಯಲ್ಲಿದ್ದಾರೆ ಸ್ವಾಮೀ. . ..ಕಳೆದ ವರ್ಷ ನಿಮ್ಮ ಹುಟ್ಟಿದ ದಿನದಿಂದ ಈ ವರ್ಷದ ಹುಟ್ಟಿದ ದಿನದ ಹೊತ್ತಿಗೆ ಕೇವಲ 12 ಕೋಟಿ ಜನ ಉದ್ಯೋಗ ಕಳೆದುಕೊಂಡಿದ್ದಾರೆ. ನಿಮ್ಮ ಮಧ್ಯರಾತ್ರಿಯ ಲಾಕ್ ಡೌನ್ ಘೋಷಣೆಯ ಅವಾಂತರಕ್ಕೆ ಲಕ್ಷಾಂತರ ಜನ ತಮ್ಮ ಜೀವ ಉಳಿದರೆ ಸಾಕೆಂದು ವಲಸೆ ಕಾರ್ಮಿಕರು ದಿಕ್ಕೆಟ್ಟವರಂತೆ ಓಡಿದರಲ್ಲ, ಸಾವು ನೋವು, ದಾರಿಯಲ್ಲೇ ಹೆರಿಗೆಯೂ ಆದ ಲಕ್ಷಾಂತರ ಜನರ ನೋವಿನ ಉಸಿರಿನ ಶಬ್ದಕ್ಕೆ ಯಾವತ್ತಾದರೂ ಕಿವಿ ಕೊಟ್ಟಿರಾ. ತಮ್ಮ ಕ್ಷೇತ್ರವಿರುವ ರಾಜ್ಯದಲ್ಲಿ ಸಿಂಪಡಿಸಿದ ಕ್ರಿಮಿನಾಶಕಕ್ಕೆ ಪಶುಗಳಂತೆ ಮೈಯೊಡ್ಡಿ ನಿಂತರಲ್ಲ ಅದಕ್ಕಾಗಿ ಥ್ಯಾಂಕ್ಸ್ ಹೇಳುವುದೇ ತಮಗೆ....

ಖಾಸಗಿಯವರಿಗೆ ಲೂಟಿ ಮಾಡಲು ಬಿಟ್ಟ ಟೀಕಾ ಉತ್ಸವ:

ಹಾಗೆಯೇ... .. ...ಲಸಿಕೆ.. ..ಯಾವುದು ತಮ್ಮ ಆದ್ಯತೆಯಾಗಿ ದೇಶದ ಎಲ್ಲರಿಗೂ ಉಚಿತವಾಗಿ ಸಿಗಬೇಕಿತ್ತೋ, ಅದನ್ನು ಖಾಸಗಿಯವರಿಗೆ ಲಾಭಕ್ಕೆ ಮಾರಿಕೊಳ್ಳಲು ಬಿಟ್ಟು ದಿನವೊಂದಕ್ಕೆ 40–50 ರೂಪಾಯಿ ಸಂಪಾದಿಸಲು ಕಷ್ಟ ಪಡುವ ದುಡಿಯುವ ಜನರಿಂದ ಸಾವಿರಾರು ರೂಪಾಯಿ ಲಸಿಕೆಗಾಗಿ ದೋಚಲು ಬಿಟ್ಟು, ತಮ್ಮ ಜನ್ಮದಿನದಂದು ಒಂದೇ ದಿನ 1.5ಕೋಟಿ ಉಚಿತ ಲಸಿಕೆ ಹಾಕಿಸುವ ಘೋಷಣೆ ಬರುತ್ತದಲ್ಲ. . . ಇದೊಂದು ನಾಚಿ ತಲೆ ತಗ್ಗಿಸಬೇಕಾದ ಸಂಗತಿಯಲ್ಲವೇ??? ಟೀಕಾ ಉತ್ಸವವೆಂದು ಮಾಡಿ ಜನರ ತೆರಿಗೆ ಹಣ ಲಕ್ಷಾಂತರ ರೂಪಾಯಿ ಜಾಹಿರಾತಿಗೆ ವ್ಯಯಿಸಿದಿರಲ್ಲ ಅದಕ್ಕೆ ತಮಗೆ ಥ್ಯಾಂಕ್ಸ್ ಹೇಳಬೇಕೇ??

ಹುಟ್ಟಿದ ದಿನದ ಕೊಡುಗೆಯಾಗಿ ಒಂದು ಸುಗ್ರೀವಾಜ್ಞೆ ಬಂದು ಬಿಡಲಿ ನೋಡೋಣ:

ಮಹಾನ್ ನಾಯಕರೆ, ದೇಶದ ಮಹಿಳೆಯರು ಕಳೆದ 25 ವರ್ಷಗಳಿಂದ ಶಾಸನ ಸಭೆಗಳಲ್ಲಿ ಸರಿಯಾದ ಪ್ರಾತಿನಿಧ್ಯಕ್ಕಾಗಿ 33% ಮೀಸಲಾತಿಗಾಗಿ ಕಾಯುತ್ತಲೇ ಇದ್ದಾರೆ, ನೆನಪಿಸಿಕೊಳ್ಳಿ ಅಂದು ಸೆಪ್ಟೆಂಬರ್ 12 1996ರಂದು ಮಸೂದೆ ಸಂಸತ್ತಿನಲ್ಲಿ ಮಂಡನೆಯಾದಾಗ ತಮ್ಮನ್ನು ಮೋಟಾ ಭಾಯ್ ಎಂದೇ ಕರೆಯುವ ಅಪ್ನಾ ಚೋಟಿ ಬೆಹನಜಿ ಉಮಾ ಭಾರತಿಯವರು ಅಡ್ಡಗಾಲು ಹಾಕಿದ್ದರು. ಈಗ ತಮಗೆ ಸಂಪೂರ್ಣ ಬಹುಮತವಿದೆಯಲ್ಲವೇ?? ತಮ್ಮ ಹುಟ್ಟಿದ ದಿನದ ಕಾಣಿಕೆಯಾಗಿ ಒಂದು ಸುಗ್ರೀವಾಜ್ಞೆ ಘೋಷಿಸಿ ಬಿಡಿ. ಮಧ್ಯರಾತ್ರಿಯಲ್ಲಿಯೂ ಸಹಿ ಹಾಕಲು ಸಿದ್ಧರಿರುವ ಪ್ರಥಮ ಪ್ರಜೆಯಿದ್ದಾರಲ್ಲ ಹೇಗೂ. ಅವರಿಂದಲಂತೂ ತೊಂದರೆ ಬರಲಾರದು. ತಾವು ಕೃಷಿ ಮಸೂದೆಗಳನ್ನು ತಂದಿದ್ದು ಹಾಗೆಯೇ ಅಲ್ಲವೇ? ತಮಗೆ ಥ್ಯಾಂಕ್ಸ್ ಹೇಳುವವರ ಸಾಲಿನಲ್ಲಿ ತಮ್ಮ ಪಕ್ಷದ ಯುವಪಡೆಯಲ್ಲಿ ಯುವತಿಯರೂ ಇದ್ದಾರಲ್ಲವೇ?

ಬೆನ್ನಿಗಂಟಿದೆ ನೆತ್ತರಿನ ವಾಸನೆ:

ಇದೆಲ್ಲದರ ನಂತರ ಮುಗಿಸುವ ಮೊದಲು. ಇದು ಕೇವಲ ಹುಟ್ಟಿದ ದಿನದ ಆಚರಣೆ ಮಾತ್ರ ಆಗಿರಲಿಲ್ಲ. ತಾವು ಅಧಿಕಾರದ ಪದಗ್ರಹಣದ ಎರಡು ದಶಕಗಳನ್ನು ಆಚರಿಸಿಕೊಳ್ಳುತ್ತಿದ್ದೀರಲ್ಲವೇ? ನೆನಪಾಗುತ್ತಿಲ್ಲವೇ ಗುಜರಾತ್ ನರಮೇಧ, ಜ್ಞಾಪಕಕ್ಕೆ ಬರಲೇ ಬೇಕಲ್ಲವೇ ನರೊದಾ ಪಾಟಿಯಾ. ನಿಮ್ಮ ಬೆನ್ನಿನಲ್ಲಿ ರಕ್ತದ ಕಲೆ ಇದೆ. ರಂಗು ರಂಗಿನ ಹೊಸ ಪೋಷಾಕು, ರವೀಂದ್ರರ ಹೇರ್ ಸ್ಟೈಲ್, ಯಾವುದೂ. . .ಯಾವ್ಯಾವುದೂ ಆ ನೆತ್ತರಿನ ಕಲೆಗಳನ್ನು ಅಳಿಸಲಾರವು.. ಷೇಕ್ಸಪಿಯರ್ ರ ನಾಟಕ ಮ್ಯಾಕಬೆತ್ ನ ಲೇಡಿ ಮ್ಯಾಕ್‌ಬತ್ ನೆನಪಿಗೆ ಬರುತ್ತಾಳೆ. “ಅರೇಬಿಯಾದ ಎಲ್ಲ ಸುಗಂಧ ದ್ರವ್ಯಗಳೂ ನನ್ನ ಕೈಗಂಟಿದ ನೆತ್ತರ ವಾಸನೆಯನ್ನು ಅಳಿಸಲಾರವೇ.. “....ಎಂದೊದರುವ ಆಕೆಯ ಹಾಗೆ ನಿಮಗೂ ಎಂದಾದರೂ ಅನಿಸಿದರೆ ಆದಿನ ಥ್ಯಾಂಕ್ಸ್ ಹೇಳಬಹುದೇನೋ.



ವ್ಯಂಗ್ಯಚಿತ್ರ ಕೃಪೆ: ಪಿ. ಮಹಮ್ಮದ್, ವಾರ್ತಾಭಾರತಿ

16.8 ಲಕ್ಷ ಜನಕ್ಕೆ ಮೋದಿ-71 “ರಾಷ್ಟ್ರೀಯ ನಿರುದ್ಯೋಗ ದಿನ”

ಮೋದಿ ಭಕ್ತರು ಮೋದಿ 71ನೇ ಹುಟ್ಟುಹಬ್ಬದಂದು ವಿಧವಿಧವಾಗಿ “ಥ್ಯಾಂಕ್ಯೂ’ ಹೇಳುವ ಮೂಲಕ ಆಚರಿಸುತ್ತಿದ್ದರೆ, ದೇಶಪ್ರೇಮಿಗಳು ಅದನ್ನು “ರಾಷ್ಟ್ರೀಯ ನಿರುದ್ಯೋಗ ದಿನ”ವಾಗಿ ಆಚರಿಸಿದರು. ಟ್ವಿಟರ್ ನಲ್ಲಿ #NationalUnemploymentDay” ಎಂಬ ಹ್ಯಾಶ್ ಟ್ಯಾಗ್ ಮಧ್ಯಾಹ್ನದ ಹೊತ್ತಿಗೆ ಮೊದಲ ಸ್ಥಾನದಲ್ಲಿ ಟ್ರೆಂಡ್ ಆಗುತ್ತಿದ್ದ ಈ ಹ್ಯಾಶ್‌ಟ್ಯಾಗ್‌ನೊಂದಿಗೆ 16.8 ಲಕ್ಷ ಜನ ಟ್ವೀಟ್ ಮಾಡಿದ್ದಾರೆ. ನಿರುದ್ಯೋಗದ ಹದಗೆಡುತ್ತಿರುವ ಪರಿಸ್ಥಿತಿಯ ಮೇಲೆ ಬೆಳಕು ಚೆಲ್ಲುವ ಅಂಕೆಸಂಖ್ಯೆಗಳ ಚಿತ್ರಗಳನ್ನು ಹಾಕಿ ಇಂತಹ ‘ಸೂತಕದ ಮನೆಯಲ್ಲಿ’ ಹುಟ್ಟು ಹಬ್ಬದ “ಸಂಭ್ರಮ ಆಚರಣೆ” ಮಾಡುತ್ತಿರುವವರಿಗೆ ಸರಿಯಾಗಿ ಉಗಿದಿದ್ದಾರೆ.





‘ಆರ್ಥಿಕ ಸುಧಾರಣೆ’ಗಳ ಮೂರು ದಶಕಗಳು

ಸರಿಯಾಗಿ ಮೂರು ದಶಕಗಳ ಹಿಂದೆ 1991ರಲ್ಲಿ ಹರಿಯಬಿಟ್ಟ ನವ-ಉದಾರವಾದಿ ಆರ್ಥಿಕ ಸುಧಾರಣೆಗಳು ದೇಶದಲ್ಲಿ ಆಳವಾದ ಬದಲಾವಣೆಗಳನ್ನು ತಂದಿವೆ- ಅವು ವಿವಿಧ ಜನವಿಭಾಗಗಳ ಮೇಲೆ ವಿಭಿನ್ನ ಪರಿಣಾಮಗಳನ್ನು ಬೀರಿದೆ. ದುಡಿಯುವ ಜನವಿಭಾಗಗಳ ಮೇಲೆ ಅದರಿಂದಾದ ಪರಿಣಾಮಗಳೇನು, ಇದನ್ನು ಎಡಪಂಥೀಯರು ಹೇಗೆ ಕಾಣುತ್ತಾರೆ. ಈ ಕುರಿತು ಫ್ರಂಟ್‌ಲೈನ್ ಪಾಕ್ಷಿಕ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಮತ್ತು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಅಶೋಕ ಧವಳೆಯವರ ಸಂದರ್ಶನವನ್ನು ನಡೆಸಿತು. ಅವುಗಳ ಮೊದಲ ಭಾಗಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಸಂದರ್ಶನ: ಟಿ.ಕೆ.ರಾಜಲಕ್ಷ್ಮಿ

ಅನು: ಶ್ರೃಂ.ಶ.ನಾ



ಎಡ ಪಂಥೀಯರು ಎಂದಿನಿಂದಲೂ ನವ ಉದಾರವಾದಿ ಸುಧಾರಣೆಗಳನ್ನು ಟೀಕಿಸುತ್ತ ಬಂದಿದ್ದಾರೆ. ಈ ಸುಧಾರಣೆಗಳ 3 ದಶಕಗಳನ್ನು ಗಮನಿಸಿದಾಗ, ಎಡ ಪಂಥೀಯರ ಈ ಟೀಕೆಯು ಸಾಬೀತಾಗಿದೆ ಎಂದು ನೀವು ಹೇಳುತ್ತೀರಾ?

ಖಂಡಿತವಾಗಿಯೂ! ನವ ಉದಾರವಾದಿ ಸುಧಾರಣೆಗಳು ಲಾಭ ಕೇಂದ್ರಿತವೇ ಹೊರತು, ಜನ ಕೇಂದ್ರೀತ ಅಲ್ಲ. ಸುಧಾರಣಾ ದಶಕಗಳು ಜನರನ್ನು ಸಂಕಷ್ಟಕ್ಕೆ ತಳ್ಳಿ ಲಾಭ ಹೆಚ್ಚಿಸಿಕೊಳ್ಳುವತ್ತ ಮಾತ್ರ ಕೇಂದ್ರಿಕೃತವಾಗಿರುವುದು, ಹೆಚ್ಚುತ್ತಿರುವ ಬಡತನ, ತೀವ್ರವಾಗಿ ವ್ಯಾಪಕವಾಗುತ್ತಿರುವ ಆರ್ಥಿಕ ಅಸಮಾನತೆ ಮತ್ತು ಎಲ್ಲ ದೇಶಗಳಲ್ಲಿ ಆಂತರಿಕ ಬೇಡಿಕೆಗಳು ಕುಸಿಯುತ್ತಿರುವುದನ್ನು ವಿಶ್ವದ ಹಾಗೂ ಭಾರತದ ಅನುಭವಗಳು ತೋರಿಸಿವೆ. ಜಾಗತಿಕ ಆರ್ಥಿಕ ಮಂದಗತಿ ಮತ್ತು ಅದು ಜನರ ಜೀವದ ಮೇಲೆ ಬೀರಿರುವ ದುಷ್ಪರಿಣಾಮಗಳು ಈಗಲೂ ಮುಂದುವರೆಯುತ್ತಿರುವ ಪಿಡುಗಿನಿಂದ ಇನ್ನಷ್ಟು ಬಿಗಡಾಯಿಸಿವೆ. ಮಾರ್ಕ್ಸ್ ಈ ಹಿಂದೆ ಹೇಳಿದ್ದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದು ಸೂಕ್ತ. “ಬಂಡವಾಳಶಾಹಿಯು ಎಷ್ಟು ಅಗಾಧ ಪ್ರಮಾಣದ ಉತ್ಪಾದನೆ ಮತ್ತು ವಿನಿಮಯದ ಸಾಧನಗಳ ಮಾಯಾಲೋಕವನ್ನು ಹುಟ್ಟುಹಾಕಿದೆಯೆಂದರೆ, ತನ್ನ ಮಂತ್ರೋಚ್ಚಾರಣೆಗಳಿಂದ ತಾನೇ ಆವಾಹಿಸಿದ ನರಕದ ಶಕ್ತಿಗಳನ್ನು ನಿಯಂತ್ರಿಸಲಾಗದ ಮಾಂತ್ರಿಕನಂತಾಗಿದೆ”.

ಮೂರು ಹೊಸ ಕೃಷಿ ಕಾಯಿದೆಗಳು ಮತ್ತು ಕನಿಷ್ಟ ಬೆಂಬಲ ಬೆಲೆಗೆ ಮುಂದುವರೆದಿರುವ ನಮ್ಮ ರೈತರ ಅಭೂತಪೂರ್ವ ಹೋರಾಟಗಳ ಹಿನ್ನೆಲೆಯಲ್ಲಿ ಭಾರತದಲ್ಲಿ ಮೂರು ದಶಕಗಳ ನವ ಉದಾರವಾದಿ ಸುಧಾರಣೆಗಳು ಕಾಣ ಬರುತಿವೆ. ಇದು ಒಂದು ಶತಮಾನದ ಹಿಂದೆ ಇಂಡಿಗೋ ಬೆಳೆಯುನ್ನು ಬೆಳೆಯುವಂತೆ ಒತ್ತಡ ಹೇರಿದ್ದರ ವಿರುದ್ಧ ನಡೆದಿದ್ದ ಚಂಪಾರಣ್ ಸತ್ಯಾಗ್ರಹವನ್ನು ನೆನಪಿಸುತ್ತಿದೆ- ಕಾರ್ಪೊರೇಟ್ ಕೃಷಿ, ಸಣ್ಣ ಉತ್ಪಾದನೆಗಳ ನಾಶ (ಮೋದಿಯವರ ‘ನೋಟುರದ್ಧತಿ’) ಮತ್ತು ಸದ್ಯದಲ್ಲೇ ಕ್ಷಾಮದ ಪರಿಸ್ಥಿತಿಗೆ ಕೊಂಡೊಯ್ಯಬಹುದಾದ ಆಹಾರ ಕೊರತೆಗಳು.

ಭಾರತದ ಸುಧಾರಣಾ ಪ್ರಕ್ರಿಯೆ ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ಪ್ರಾಬಲ್ಯಕ್ಕೊಳಗಾಗಿರುವ ನವ ಉದಾರವಾದದ ಸೈದ್ಧಾಂತಿಕ ನಿಲುಮೆಯ ಅಭಿನ್ನ ಅಂಗ. ಅದರ ಉದ್ದೇಶ, ಬಂಡವಾಳಶಾಹಿ ವ್ಯವಸ್ಥೆಯ ಅತ್ಯಂತ ಹೀನ ಸುಲಿಗೆಕೋರ ಚಾರಿತ್ರ್ಯವನ್ನು, “ಮೃಗೀಯ ಶಕ್ತಿ”ಯನ್ನು ಹರಿಯಬಿಟ್ಟು ಲಂಗುಲಗಾಮಿಲ್ಲದೆ ಲಾಭಗಳನ್ನು ಗರಿಷ್ಟ ಪ್ರಮಾಣಕ್ಕೆ ಏರಿಸುವುದು. ಸಾರ್ವಜನಿಕ ಆಸ್ತಿಗಳು, ಎಲ್ಲಾ ಸಾರ್ವಜನಿಕ ಸೌಲಭ್ಯಗಳು ಮತ್ತು ಸೇವೆಗಳು ಮತ್ತು ಎಲ್ಲಾ ಖನಿಜ ಸಂಪನ್ಮೂಲಗಳ ವ್ಯಾಪಕ ಖಾಸಗೀಕರಣ ಮತ್ತು ಜನರ ಮೇಲೆ ‘ಬಳಕೆ ಶುಲ್ಕ’ಗಳನ್ನು ಹೇರುವುದು ಇತ್ಯಾದಿ. ನವ ಉದಾರವಾದವು ಜಾಗತಿಕವಾಗಿ ಮತ್ತು ಭಾರತದಲ್ಲಿ ಕಾರ್ಪೊರೇಟ್‌ಗಳಿಗೆ ಭಾರೀ ಸಮೃದ್ಧಿಯನ್ನು ಒದಗಿಸಿದೆ. ಶ್ರೀಮಂತರ ಮೇಲಿನ ತೆರಿಗೆಯು ಜಾಗತಿಕವಾಗಿ ಶೇ. 79 ರಷ್ಟು ಇಳಿಕೆಯಾಗಿದೆ. 2008 ರ ಹಣಕಾಸು ಕುಸಿತದ ನಂತರ, ಬಹುತೇಕ ಬಿಲಿಯನೇರ್‌ಗಳು ಮೂರು ವರ್ಷಗಳಲ್ಲಿ ತಮ್ಮ ಸಂಪತ್ತನ್ನು ಮರಳಿ ಪಡೆದರು ಮತ್ತು 2018 ರಲ್ಲಿ ಅದನ್ನು ಇಮ್ಮಡಿಗೊಳಿಸಿಕೊಂಡರು. ಆ ಸಂಪತ್ತು ವೃದ್ಧಿಯಾಗಿರುವುದು ಉತ್ಪಾದನೆಯಿಂದಲ್ಲ, ಬದಲಾಗಿ ಸಟ್ಟಾಕೋರತನದ ಮೂಲಕ. ಮತ್ತು ಹೀಗಾಗಿಯೇ ಈ ಅಗಾಧ ಜಾಗತಿಕ ಕುಸಿತವು ಶೇರು ಮಾರುಕಟ್ಟೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಿಲ್ಲ.

ಮತ್ತೊಂದೆಡೆ, ಜಾಗತಿಕವಾಗಿ, ಆದಾಯ ಗಳಿಸುವವರಲ್ಲಿ ಶೇ. 80 ಪ್ರಮಾಣದ ಜನರು 2008ರ ಪೂರ್ಣ ಆದಾಯ ಮಟ್ಟವನ್ನು ಮರಳಿ ಪಡೆದಿಲ್ಲ. ಸಂಘಟಿತ ಉದ್ದಿಮೆ ಮತ್ತು ದುಡಿಯುವ ವರ್ಗದ ಹಕ್ಕುಗಳ ಮೇಲಿನ ದಾಳಿಯಿಂದಾಗಿ 1979 ರಲ್ಲಿ ಅಮೇರಿಕಾದಲ್ಲಿ ನಾಲ್ಕರಲ್ಲಿ ಒಬ್ಬ ಕಾರ್ಮಿಕರನ್ನು ಪ್ರತಿನಿಧಿಸುತ್ತಿದ್ದ ಕಾರ್ಮಿಕ ಸಂಘಟನೆಗಳು ಇಂದು 10 ರಲ್ಲಿ ಒಬ್ಬರನ್ನು ಪ್ರತಿನಿಧಿಸುವ ಪ್ರಮಾಣಕ್ಕೆ ಇಳಿದಿವೆ.

ಜೆಫ್ ಬೆಜೋಸ್ ರವರ ಅಂತರಿಕ್ಷ ಪ್ರಯಾಣದ ಕುರಿತು ಆಕ್ಸ್‌ಫಾಮ್ ಅಂತರರಾಷ್ಟ್ರೀಯ ದ ಅಸಮಾನತೆ ಆಂದೋಲನದ ಜಾಗತಿಕ ಮುಖ್ಯಸ್ಥ ದೀಪಕ್ ಕ್ಸೇವಿಯರ್, “ನಾವೀಗ ವಾಯುಮಂಡಲದ ಅಸಮಾನತೆ ತಲುಪಿದ್ದೇವೆ. ಪ್ರತಿ ಒಂದು ನಿಮಿಷಕ್ಕೆ ಸುಮಾರು 11 ಜನರು ಹಸಿವಿನಿಂದ ಇಂದು ಮರಣ ಹೊಂದುತ್ತಿದ್ದಾರೆ. ಇನ್ನೊಂದೆಡೆ ಬೆಜೋಸ್ 11 ನಿಮಿಷದ ವೈಯಕ್ತಿಕ ಅಂತರಿಕ್ಷ ಉಡ್ಡಯನಕ್ಕೆ ತಯಾರಾಗುತ್ತಾರೆ. ಇದೊಂದು ಮಾನವ ಅವಿವೇಕ, ಮಾನವ ಸಾಧನೆಯಲ್ಲ” ಎಂದಿದ್ದಾರೆ.

ಅತಿ ಶ್ರೀಮಂತರಿಗೆ ಅನ್ಯಾಯಯುತ ತೆರಿಗೆ ವ್ಯವಸ್ಥೆಗಳು ಮತ್ತು ಕರುಣಾಜನಕ ದುಡಿಮೆಗಾರರ ರಕ್ಷಣೆಯ ಕರುಣಾಜನಕ ಪರಿಸ್ಥಿತಿ ನಿರ್ಮಿಸಿ ಉತ್ತೇಜನೆ ಕೊಡಲಾಗುತ್ತಿದೆ. ಕೋವಿಡ್ ಸಾಂಕ್ರಾಮಿಕದ ಆರಂಭದ ನಂತರದಲ್ಲಿ ಅಮೆರಿಕನ್ ಬಿಲಿಯನೇರ್‌ಗಳ ಶ್ರೀಮಂತಿಕೆ ಇನ್ನೂ 1.8 ಟ್ರಿಲಿಯನ್ ಡಾಲರ್‌ಗಳಷ್ಟು ಹೆಚ್ಚಿತು. ಕೋವಿಡ್-19 ಲಸಿಕೆಯ ಮೇಲೆ ಬೃಹತ್ ಔಷಧಿ ಕಂಪನಿಗಳ ಏಕಸ್ವಾಮ್ಯದ ಮೂಲಕ ಒಂಬತ್ತು ಹೊಸ ಬಿಲಿಯನೇರ್‌ಗಳು ಸೃಷ್ಟಿಯಾಗಿದ್ದಾರೆ.

ಸಾಂಕ್ರಾಮಿಕ ಬಂದ 18 ತಿಂಗಳುಗಳಲ್ಲಿ ಕೇಂದ್ರ ಬ್ಯಾಂಕ್‌ಗಳು ಸರಿಸುಮಾರು 11 ಟ್ರಿಲಿಯನ್ ಡಾಲರ್‌ಗಳನ್ನು, ಅಂದರೆ ಪ್ರತಿ ಗಂಟೆಗೆ ಸುಮಾರು 834 ಮಿಲಿಯನ್ ಡಾಲರ್‌ಗಳನ್ನು ಜಾಗತಿಕ ಆರ್ಥಿಕತೆ ಕುಸಿಯದಿರುವಂತೆ ನೋಡಿಕೊಳ್ಳಲು ವೆಚ್ಚ ಮಾಡಿವೆ. ಇದು ಒಂದು ತಲೆಮಾರಿನಲ್ಲಿ ಕಂಡಿರದಷ್ಟು ಬೃಹತ್ ಪ್ರಮಾಣದ ಶೇರು ಪುಟ 10 ನೋಡಿ

ಸಂದರ್ಶನ: ಅನುಪಮ ಕಟಕಮ್

ಅನು: ಟಿ.ಯಶವಂತ



ಭಾರತದ ಜನಸಂಖ್ಯೆಯ ಮೂರನೇ ಎರಡು ಭಾಗ ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನು ಅವಲಂಬಿಸಿದೆ. ಆರ್ಥಿಕ ಧೋರಣೆಗಳ ಅನುಷ್ಠಾನವು ತನ್ನ ಘೋಷಿತ ಉದ್ದೇಶವನ್ನು ಸಾಧಿಸುವ ಬದಲು ಹಾಗೂ ಈ ಕ್ಷೇತ್ರವನ್ನು ಸಕಾರಾತ್ಮಕವಾಗಿ ಪ್ರಭಾವಿಸುವ ಬದಲು ಭಾರತವನ್ನು, ಇವತ್ತಿಗೂ ಮುಂದುವರೆಯುತ್ತಿರುವ ಸತತವಾಗಿ ಕೃಷಿ ಬಿಕ್ಕಟ್ಟಿನ ಕಡೆಗೆ ತೆಗೆದುಕೊಂಡು ಹೋಗುತ್ತಿದೆ. ಈ ಬಗ್ಗೆ ನಿಮ್ಮ ಅಭಿಪ್ರಾಯ.

ಸ್ವಾತಂತ್ರ್ಯ ಬಂದ 75 ವರ್ಷಗಳ ನಂತರವೂ ಭಾರತ ಜನಸಂಖ್ಯೆಯ ಮೂರನೇ ಎರಡರಷ್ಟು ಮಂದಿ ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನೇ ಅವಲಂಬಿಸಿರುವ ವಾಸ್ತವವೇ ಭಾರತದ ಕೃಷಿ ರಂಗವು ಸಂಕಟ ಹಾಗೂ ಬಿಕ್ಕಟ್ಟಿನಲ್ಲಿದೆ ಎಂಬುದರ ಸೂಚನೇಯೇ ಆಗಿದೆ. ಭಾರತೀಯ ಆರ್ಥಿಕತೆಯ ಸಂರಚನೆಯನ್ನು ಪರಿವರ್ತಿಸುವಲ್ಲಿ ಆರ್ಥಿಕ ಉದಾರೀಕರಣವು ವಿಫಲವಾಗಿದೆ. ಕೃಷಿ ರಂಗದ ಕಳಪೆ ಬೆಳವಣಿಗೆಯ ಕಾರಣದಿಂದ ಶೇಕಡಾ 50 ಕ್ಕೂ ಹೆಚ್ಚು ಕೃಷಿ ಕುಟುಂಬಗಳು ಬಡತನ ರೇಖೆಗಿಂತ ಕೆಳಗಿವೆ. ಗ್ರಾಮೀಣ ಬೇಡಿಕೆಯು ಶಾಶ್ವತವಾಗಿ ಪಾತಾಳ ಸ್ಥಿತಿಯಲ್ಲಿದೆ; ಗ್ರಾಮೀಣ ಪ್ರದೇಶಗಳ ಕೊಳ್ಳುವ ಶಕ್ತಿಯಲ್ಲಿ ಯಾವುದೇ ಬೆಳವಣಿಗೆ ಕಾಣುತ್ತಿಲ್ಲ. ತತ್ಪರಿಣಾಮವಾದ ಕೃಷಿಯ ಕಳಪೆ ಬೆಳವಣಿಗೆಯಿಂದ ಕೈಗಾರಿಕಾ ಬೆಳವಣಿಗೆಯೂ ಪ್ರತಿಕೂಲ ಪರಿಣಾಮಕ್ಕೆ ತುತ್ತಾಗಿದೆ.

ಆದರೆ ಕೃಷಿ ಕುರಿತೇ ಮಾತಾನಾಡುವುದಾದರೆ ಕೇರಳ, ಪ.ಬಂಗಾಳ ಹಾಗೂ ತ್ರಿಪುರ ಹೊರತುಪಡಿಸಿ ಕಾರ್ಷಿಕ ಸುಧಾರಣೆಯನ್ನು ಸಂಪೂರ್ಣವಾಗಿ ನಿರ್ಲಕ್ಷ್ಯಿಸಿದ್ದರಿಂದಾಗಿ ಮತ್ತು ಗ್ರಾಮೀಣ ಮೂಲಸೌಕರ್ಯಗಳಲ್ಲಿ ಸಾರ್ವಜನಿಕ ಹೂಡಿಕೆಯ ಕಳಪೆ ಪ್ರಮಾಣದಿಂದಾಗಿ ಭಾರತದ ಕೃಷಿಯು ಐತಿಹಾಸಿಕವಾಗಿ ಬಿಕ್ಕಟ್ಟು ಗ್ರಸ್ಥವಾಗಿದೆ. ಈ ಕಾರಣದಿಂದ ಜಗತ್ತಿನಲ್ಲೇ ಅತಿ ಹೆಚ್ಚು ಗ್ರಾಮೀಣ ಅಸಮಾನತೆ ಇರುವ ದೇಶಗಳಲ್ಲಿ ಭಾರತವೂ ಕೂಡ ಒಂದು. ಗ್ರಾಮೀಣ ಸಮಾಜದಲ್ಲಿ ಅದಾಗಲೇ ಅಸ್ತಿತ್ವದಲ್ಲಿ ಇದ್ದ ಇಂತಹ ವೈರುಧ್ಯವು 1991 ರ ನಂತರ ಗ್ರಾಮೀಣ ಸಮಾಜವನ್ನು ಆವರಿಸಿದ ಬಿಕ್ಕಟ್ಟಿನಿಂದ ಮತ್ತಷ್ಟು ಉಲ್ಬಣಗೊಂಡಿತು. ಕೃಷಿ ಬೆಳವಣಿಗೆ ದರ ನಿಧಾನಗೊಂಡಿತು. ಸಾರ್ವಜನಿಕ ಹೂಡಿಕೆ ಕುಸಿಯಲಾರಂಭಿಸಿತು. ಲಾಗುವಾಡು ಸಬ್ಸಿಡಿಗಳು ಕಡಿತಗೊಂಡಿದ್ದರಿಂದ ಲಾಗುವಾಡು ದರಗಳು ಏರಲಾರಂಭಿಸಿದವು.

ಮುಕ್ತ ವ್ಯಾಪಾರ ಒಪ್ಪಂದಗಳು ವಿನಾಶಕಾರಿ ಆಮದುಗಳ ಮಹಾ ಪ್ರವಾಹಕ್ಕೆ ಕಾರಣವಾಗಿ ಹಲವು ವಾಣಿಜ್ಯ ಬೆಳೆಗಳ ದರಗಳು ಕುಸಿದವು. ಇದರಿಂದಾಗಿ ಎಲ್ಲಾ ಬೆಳೆಗಳ ಲಾಭದಾಯಕತೆಯ ದರ ಕುಗ್ಗಿತು. ಕೃಷಿ ಸಾಲವನ್ನು ಸಣ್ಣ ಹಾಗೂ ಅತಿ ಸಣ್ಣ ರೈತರಿಂದ ಶ್ರೀಮಂತ ವಿಭಾಗಗಳು ಮತ್ತು ಕಾರ್ಪೊರೇಟ್ ಕೃಷಿ ವ್ಯಾಪಾರ ಸಂಸ್ಥೆಗಳ ಕಡೆ ತಿರುಗಿಸಲಾಯಿತು. ಕಳೆದ ಮೂರು ದಶಕಗಳಿಗೂ ಹೆಚ್ಚು ಕಾಲದಿಂದ ಇರುವ ಈ ನವ ಉದಾರೀಕರಣ ಧೋರಣೆಗಳೇ ನಮ್ಮ ಸುತ್ತ ಕಾಣುತ್ತಿರುವ ಪ್ರಸ್ತುತ ಕಾರ್ಷಿಕ ಬಿಕ್ಕಟ್ಟಿಗೆ ಕಾರಣವೆಂಬುದು ವಾಸ್ತವ. ಈ ನವ ಉದಾರೀಕರಣ ಧೋರಣೆಗಳು ಜಾರಿಗೆ ಬಂದ ವರ್ಷದೊಳಗೆ ನಡೆದ 1992 ರ ಹರ್ಯಾಣದ ಹಿಸ್ಸಾರ್ ನಮ್ಮ ರಾಷ್ಟ್ರೀಯ ಸಮ್ಮೇಳನದಲ್ಲಿ ಈ ಕುರಿತು ಅಂದಾಜಿಸಿ ಎಚ್ಚರಿಸಿದ್ದೆವು.

ಸುಧಾರಣೆಗಳು ಏಕೆ ವಿಫಲವಾದವು?

ಆರ್ಥಿಕ ಬೆಳವಣಿಗೆಯು ಹೊರತಾಗಿಯೂ ಭಾರತೀಯ ಕೃಷಿಯು ಕ್ಷಿಪ್ರಗತಿಯ ಹಲವು ಪಟ್ಟು ಬೆಳವಣಿಗೆಯನ್ನಾಗಲಿ ಅಥವಾ ಸಣ್ಣ ರೈತರ ವಿಮೋಚನೆಯನ್ನಾಗಲಿ ಅಥವಾ ವ್ಯಾಪಕವಾದ ಗ್ರಾಮೀಣ ಅಭಿವೃದ್ಧಿಯನ್ನಾಗಲಿ ಸಾಧಿಸಲಿಲ್ಲ. ಏಕೆ?

ಈ ಕ್ಷೇತ್ರದ ಅಗತ್ಯವನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳಲಾಗಿತ್ತು. ಹಾಗಾಗಿಯೇ ಕೃಷಿ ರಂಗದ ಸುಧಾರಣೆಗಳು ವಿಫಲಗೊಂಡವು. ಈ ಕ್ಷೇತ್ರಕ್ಕೆ ಕಾರ್ಷಿಕ ಸುಧಾರಣೆ, ಹೆಚ್ಚಿನ ಸಾರ್ವಜನಿಕ ಹೂಡಿಕೆ ಹಾಗೂ ಬೆಂಬಲದ ಅಗತ್ಯವಿತ್ತು. ಆದರೆ ತಮ್ಮ ಬಳಿ ಯಾವುದೇ ಸಾಕ್ಷ್ಯಾಧಾರಗಳಿಲ್ಲದೇ ಇದ್ದರೂ ನೀತಿ ನಿರ್ಧಾರಕರು ಕೃಷಿ ರಂಗದ ವಿದೇಶಿ ಹಾಗೂ ದೇಶಿಯ ಮಾರುಕಟ್ಟೆಗಳನ್ನು ತೆರೆಯುವುದರಿಂದ ಈ ಕ್ಷೇತ್ರ ತನ್ನಷ್ಟಕ್ಕೇ ತಾನೇ ಬೆಳೆಯುತ್ತದೆ ಎಂದು ಭಾವಿಸಿದ್ದರು. ಪಶ್ಚಿಮ ಜಗತ್ತನ್ನು ಗಮನಿಸಿ. ಭಾರತದಲ್ಲಿ ನಾವು ಮಾಡಿದಂತೆ ಅವರು ಮಾರುಕಟ್ಟೆಗಳನ್ನು ತೆರೆದರೆ, ಪಶ್ಚಿಮದ ಕೃಷಿ ಒಂದು ವರ್ಷವೂ ಕೂಡ ಉಳಿಯಲಾರದು. ಹಾಗಾಗಿಯೇ ಪಶ್ಚಿಮದ ಕೃಷಿಯಲ್ಲಿ ಪ್ರಬಲವಾದ ರಕ್ಷಣಾತ್ಮಕ ಧೋರಣೆಗಳಿದ್ದು, ಇದನ್ನು WTO (ವಿಶ್ವ ವಾಣಿಜ್ಯ ಸಂಸ್ಥೆ) ಒಪ್ಪಂದಗಳ ಮಾತುಕತೆಗಳಲ್ಲಿ ಕಿತ್ತು ಹಾಕಲು ಅವರು ಸಿದ್ದರಿಲ್ಲ. ವಿಚಿತ್ರವೆಂದರೆ ತಮ್ಮ ಕೃಷಿಯನ್ನು ಅವರು ರಕ್ಷಿಸಿಕೊಳ್ಳುತ್ತಿರುವಾಗಲೇ ಈ ದೇಶಗಳು ಭಾರತದಂತಹ ದೇಶಗಳನ್ನು ಕೃಷಿಯನ್ನು ತೆರೆಯುವಂತೆ ಒತ್ತಡ ಹಾಕಿವೆ. ಇದು ದ್ವಿಮುಖ ನೀತಿಯಾಗಿದ್ದರೂ ನಮ್ಮ ಸರ್ಕಾರ ಕೂಡ ಇಂತಹ ಅತಾರ್ಕಿಕ ಬೇಡಿಕೆಗೆ ಸಂಪೂರ್ಣವಾಗಿ ಶರಣಾಗಿದೆ.

ಸುಧಾರಣೆಗಳ ಹಿನ್ನೆಲೆಯಲ್ಲಿ ಕೃಷಿಯಲ್ಲಿನ ಕಡಿಮೆ ಉತ್ಪಾದಕತೆ ಹಾಗೂ ಬೆಳೆಯುತ್ತಿರುವ ಶ್ರಮಶಕ್ತಿಯನ್ನು ಒಳಗೊಳ್ಳುವಲ್ಲಿ ಈ ವಲಯದ ಅಸಾಮರ್ಥ್ಯವು ಎದ್ದು ಕಾಣುವಂತಹದ್ದು. ರೈತರು ವಿಶೇಷವಾಗಿ ಸಣ್ಣ ರೈತರು ಇನ್ನೂ ಹೆಚ್ಚಿನ ಅಂಚಿಗೆ ತಳ್ಳಲ್ಪಡುತ್ತಿರುವುದಕ್ಕೆ ಕಾರಣವೇನು. ಈ ಬಗ್ಗೆ ವಿವರಿಸುತ್ತೀರಾ?

ಕೃಷಿಯಲ್ಲಿ ಕಡಿಮೆ ಉತ್ಪಾದಕತೆ ಇರುವುದು ಒಂದು ಗಂಭೀರ ಸಮಸ್ಯೆ. ಭಾರತದ ಹೊಲಗಳಲ್ಲಿ ಇರುವ ಇಳುವರಿ ಅಂತರ ತುಂಬಾ ದೊಡ್ಡದು. ನಿರಂತರವಾಗಿ ಸಾರ್ವಜನಿಕ ಕೃಷಿ ಸಂಶೋಧನೆಯನ್ನು ದುರ್ಬಲಗೊಳಿಸುತ್ತಿರುವುದು ಉತ್ಪಾದಕತೆಯ ಬೆಳವಣಿಗೆ ಕಳಪೆ ಪ್ರಮಾಣದಲ್ಲಿ ಇರಲು ಒಂದು ಕಾರಣ ಎಂದು ಎ.ಐ,ಕೆ.ಎಸ್ ಪ್ರತಿಪಾದಿಸುತ್ತದೆ. ನಮ್ಮ ಕೃಷಿ ಜಿಡಿಪಿ (ಒಟ್ಟು ಆಂತರಿಕ ಉತ್ಪನ್ನ) ಕಡೇ ಪಕ್ಷ ಶೇಕಡಾ 2 ರಷ್ಟನ್ನಾದರೂ ಸಾರ್ವಜನಿಕ ಕೃಷಿ ಸಂಶೋಧನೆಗೆ ಹೂಡಿಕೆ ಮಾಡುವುದು ನಮ್ಮ ಅಗತ್ಯವಾಗಿದೆ. ಚೀನಾದಲ್ಲಿ ಈ ರೀತಿ ಆಗಿದೆ.

ಸಾರ್ವಜನಕ ಕೃಷಿ ಸಂಶೋಧನೆಯನ್ನು ಬಲಿಷ್ಟಗೊಳಿಸುವ ಮೂಲಕ ಮಾನ್ಸೊಂಟೊ ವನ್ನು ತನ್ನ ದೇಶದಿಂದ ಚೀನಾ ಹೊರಕ್ಕೆ ತಳ್ಳಿ ಮಾನ್ಸೊಂಟೊ ದರದ ಸುಮಾರು ಶೇಕಡಾ 25 ರಷ್ಟರಲ್ಲಿ ಅಷ್ಟೇ ಗರಿಷ್ಠ ಇಳುವರಿ ಬೀಜವನ್ನು ಉತ್ಪಾದಿಸಿದೆ. ಹೆಚ್ಚಿನ ಸಾರ್ವಜನಕ ಹೂಡಿಕೆಯಿಂದಾಗಿಯೇ ಸಂಶೋಧನಾ ವ್ಯವಸ್ಥೆಗೆ ಇಂತಹ ಬಲ ಬಂದಿದೆ. ನಾವು ಇಲ್ಲಿ ವಿಫಲವಾಗಿದ್ದೇವೆ. ಇಲ್ಲಿ ನಾವು ಕೃಷಿ ರಂಗದ ಮಾನ್ಸೊಂಟೊ ಮತ್ತು ಇದೇ ರೀತಿಯ ಕಾರ್ಪೊರೇಟ್ ಸಂಸ್ಥೆಗಳ ಅಡಿಯಾಳಾಗಿದ್ದೇವೆ.

ಅದೇ ರೀತಿ ನಮ್ಮ (ಕೃಷಿ) ವಿಸ್ತರಣಾ ವ್ಯವಸ್ಥೆಯನ್ನು ಪುಟ 10 ನೋಡಿ

‘ಆರ್ಥಿಕ ಸುಧಾರಣೆ’ಗಳ ಮೂರು ದಶಕಗಳು



ಪುಟ 9 ರಿಂದ

ಮಾರುಕಟ್ಟೆ ಉಬ್ಬರದ ಕಿಡಿ ಹಚ್ಚಿದ ಸಮಯದಲ್ಲೇ ಜನಸಾಮಾನ್ಯರು ಹೆಚ್ಚೆಚ್ಚು ನಿರುದ್ಯೋಗ, ಬಡತನ, ಹಸಿವು ಮತ್ತು ಅಭಾವದಿಂದ ನರಳುತ್ತಿದ್ದಾರೆ. ಈ ಶೇರು ಮಾರುಕಟ್ಟೆ ಉಬ್ಬರದ ಅಲೆಯ ಮೇಲೆ ಬಿಲಿಯನೇರ್‌ಗಳು ತೇಲುತ್ತಿದ್ದರು. ಗಾಢವಾಗುತ್ತಿರುವ ಆರ್ಥಿಕ ಬಿಕ್ಕಟ್ಟಿನ ನಡುವೆ ಶೇರು ಮಾರುಕಟ್ಟೆಯ ಈ ಉಬ್ಬರದ ‘ಗುಳ್ಳೆ’ ಎಲ್ಲಾ ಗುಳ್ಳೆಗಳಂತೆ ಒಡೆದೇ ಒಡೆಯುತ್ತದೆ. ಮತ್ತು ಈ ಪ್ರಕ್ರಿಯೆಯಲ್ಲಿ ಆರ್ಥಿಕತೆಯು ಇನ್ನಷ್ಟು ಹಾಳಾಗುತ್ತದೆ, ಹಲವು ದೇಶಗಳು ಘಾಸಿಗೊಳಗಾಗುತ್ತವೆ.

ನೆಹರೂ ಯುಗ ಮತ್ತು ವರ್ತಮಾನದ ಕಾಲ

1980 ರ ವರೆಗೂ ಎಡ ಪಂಥೀಯರು ನೆಹರೂ ಅವಧಿಯ ಆರ್ಥಿಕ ನೀತಿಗಳನ್ನು ಸಹ ಟೀಕಿಸಿದ್ದವು. ಹಿಂದಿನ ಕಾಲದ ಟೀಕೆಗಳಿಗೂ, ವರ್ತಮಾನದ ಆರ್ಥಿಕ ನೀತಿಗಳ ಟೀಕೆಗೂ ಇರುವ ಭಿನ್ನತೆ ಏನು?

ನಿಜ. ನೆಹರೂ ಯುಗದಲ್ಲಿ ಜಾರಿ ಮಾಡಿದ್ದ ಆರ್ಥಿಕ ನೀತಿಗಳನ್ನು ನಾವು ಬಲವಾಗಿ ಟೀಕಿಸಿದ್ದೆವು. ದೊಡ್ಡ ಬೂರ್ಜ್ವಾವರ್ಗದ ಮುಂದಾಳತ್ವದಲ್ಲಿ ಬೂರ್ಜ್ವಾ ಮತ್ತು ಭೂಮಾಲಿಕ ಸಖ್ಯತೆಯ ಭಾರತೀಯ ಆಳುವ ವರ್ಗಗಳು ಅಂದು ಆಯ್ಕೆ ಮಾಡಿದ್ದ ಆರ್ಥಿಕ ಬೆಳವಣಿಗೆಯ ಹಾದಿಯು ಭಾರತದ ಧೀಮಂತ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಜನತೆಗೆ ನೀಡಿದ್ದ ಭರವಸೆಗಳಿಗೆ ಮತ್ತು ಜನತೆಯ ಆಕಾಂಕ್ಷೆಗಳಿಗೆ ದ್ರೋಹ ಬಗೆಯುವಂತಿತ್ತು. ಬಡತನ, ಹಸಿವು, ನಿರುದ್ಯೋಗ ಮತ್ತು ಅನಕ್ಷರತೆ ಹೋಗಲಾಡಿಸುವ ಬದಲು, ಇವೆಲ್ಲದರಲ್ಲೂ ಹೆಚ್ಚಳವಾಗಿತ್ತು. ನೆಹರೂ ಯುಗದಲ್ಲಿ “ಸಮಾಜವಾದಿ ಮಾದರಿ ಸಮಾಜ” ಎಂಬ ಪ್ರಚಾರ ಮತ್ತು ಮಾತುಗಳು ಇದ್ದರೂ, ವಾಸ್ತವದಲ್ಲಿ ನಡೆದದ್ದು ಬಂಡವಾಳಶಾಹಿ ಹಾದಿಯ ಬೆಳವಣಿಗೆ. ಲಾಭ ಗಳಿಸಲು ಮಾನವ ಶೋಷಣೆಯನ್ನು ತೀವ್ರಗೊಳಿಸುವ ಮೂಲಕವೇ ಬಂಡವಾಳಶಾಹಿಯ ಬೆಳವಣಿಗೆಯಾಗುವುದು.

ಆದರೆ ವರ್ತಮಾನ ಕಾಲದ ಆರ್ಥಿಕ ನೀತಿಗಳ ಪ್ರಸ್ತುತ ಟೀಕೆ ಬಹಳ ಭಿನ್ನವಾಗಿದೆ. ನೆಹರೂ ಯುಗದಲ್ಲಿ ಆಗಿದ್ದ ಸಕಾರಾತ್ಮಕ ಸಾಧನೆಗಳೆಲ್ಲವನ್ನು ಇಂದು ವೇಗವಾಗಿ ಧ್ವಂಸಗೊಳಿಸಲಾಗುತ್ತಿದೆ. ಯೋಜನಾ ಆಯೋಗ ಮತ್ತು ಪಂಚವಾರ್ಷಿಕ ಯೋಜನೆಗಳ ಮೂಲಕ ಯೋಜನೆ ತಯಾರಿಸುವುದು, ಸಾರ್ವಜನಿಕ ವಲಯದ ಸ್ಥಾಪನೆ ಮತ್ತು ನಮ್ಮ ಆರ್ಥಿಕತೆಯಲ್ಲಿ ಇವಕ್ಕೆ ಒಂದು “ದಿಗ್ದರ್ಶಕ ಔನ್ನತ್ಯ” ಒದಗಿಸುವುದು, ಎಲ್ಲವೂ ಒಂದು ಸ್ವತಂತ್ರ ಆರ್ಥಿಕ ಬುನಾದಿಯನ್ನು ಭಾರತದಲ್ಲಿ ಹಾಕಿದವು. ಮೋದಿ ಸರ್ಕಾರವು ಜಾರಿ ಮಾಡುತ್ತಿರುವ ಆಕ್ರಮಣಕಾರಿ ನವ ಉದಾರವಾದಿ ನೀತಿಗಳು ಇದೇ ಬುನಾದಿಯನ್ನು ನಿಷ್ಕರುಣೆಯಿಂದ ಧ್ವಂಸ ಮಾಡುತ್ತಿವೆ. ಇದು ಕೇವಲ ಕೈಗಾರಿಕೆಗಳಿಗೆ ಮಾತ್ರ ಸೀಮಿತವಾಗಿರದೆ ಹೊಸ ಕೃಷಿ ಕಾಯಿದೆಗಳ ಮೂಲಕ ಕೃಷಿ ರಂಗವನ್ನು ನಾಶ ಮಾಡಲು ಮುಂದಾಗಿದೆ.

ಸಾರ್ವಜನಿಕ ವಲಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಇದರಿಂದ ಅಂತಿಮವಾಗಿ ಪ್ರಯೋಜನವಾದದ್ದು ಖಾಸಗಿ ಬಂಡವಾಳಶಾಹಿ ವಲಯ ಬೆಳೆಯಲು ಮತ್ತು ಅಭಿವೃದ್ಧಿ ಹೊಂದಲು. ಆದರೂ ಅದು ಭಾರತ ಪಾಶ್ಚಿಮಾತ್ಯ ಬಂಡವಾಳದ ಅಡಿಯಾಳಾಗಿ ಮತ್ತು ಅವಲಂಬಿ ಆರ್ಥಿಕತೆಯ ಮಟ್ಟಕ್ಕೆ ಇಳಿಯದಂತೆ ರಕ್ಷಣೆ ನೀಡುವಲ್ಲಿ ಸಾರ್ವಜನಿಕ ವಲಯವು ಭದ್ರ ತಡೆಗೋಡೆಯಾಗಿ ಕಾರ್ಯ ನಿರ್ವಹಿಸಿದೆ. ಎಡಪಂಥೀಯರು ಈಗ ಸಾರ್ವಜನಿಕ ವಲಯದ ರಕ್ಷಣೆಗೆ ನಿಂತಿರುವುದು, ಭಾರತದ ಸ್ವತಂತ್ರ ಆರ್ಥಿಕ ಬುನಾದಿಗಳನ್ನು ಮತ್ತು ರಾಷ್ಟ್ರೀಯ ಆಸ್ತಿಗಳನ್ನು ರಕ್ಷಿಸಿ, ಕಾಪಾಡಬೇಕಾಗಿದೆ ಎಂಬ ಈ ತಿಳುವಳಿಕೆಯ ಆಧಾರದಲ್ಲಿ.

ಭಾರತ ಹೊಳೆಯುತ್ತಿದೆಯೇ ಅಥವಾ ನರಳುತ್ತಿದೆಯೇ

ಆರ್ಥಿಕ ಉದಾರೀಕರಣದ ಮೂಲಕ ಬಹಳಷ್ಟು ಆದಾಯ ಮತ್ತು ಸಂಪತ್ತನ್ನು ಸೃಷ್ಟಿಸಲಾಗಿದೆ ಎಂದು ನಂಬುವವರು ಇದ್ದಾರೆ. ದುಡಿಯುವ ಜನರ ಸಂಕಷ್ಟ ಹೆಚ್ಚಳದ ಇನ್ನೊಂದು ಮಗ್ಗುಲು ಕೂಡ ಇದಕ್ಕೆ ಇದೆಯಲ್ಲವೇ?

ನವಉದಾರವಾದಿ ಸುಧಾರಣೆಗಳಿಂದಾಗಿ ಆರ್ಥಿಕ ಅಸಮಾನತೆಗಳು ಹಲವು ಪಟ್ಟ ಹೆಚ್ಚಿವೆ. “ಹೊಳೆಯುವ ಭಾರತ”ವು ಸದಾ “ನರಳುವ ಭಾರತದ” ಹೆಗಲ ಮೇಲೆಯೇ ಸವಾರಿ ಮಾಡುವುದು. “ಹೊಳೆಯುವ ಭಾರತ” ಹೊಳಪು “ನರಳುವ ಭಾರತ” ಆಗುವ ವಂಚನೆಗಳು ವಿಲೋಮಾನುಪಾತ ಹೊಂದಿವೆ. ಮಾರ್ಚ್ 2020 ರ ನಂತರದಲ್ಲಿ ಭಾರತದ 100 ಬಿಲಿಯನೇರ್‌ಗಳು ತಮ್ಮ ಸಂಪತ್ತಿನಲ್ಲಿ ರೂ. 12,97,822 ಕೋಟಿ ಹೆಚ್ಚಳ ಕಂಡಿದ್ದಾರೆ. ಈ ಮೊತ್ತದಲ್ಲಿ 138 ಕೋಟಿ ಅತೀ ಬಡ ಭಾರತೀಯರಿಗೆ ತಲಾ ರೂ. 94,045 ಚೆಕ್ ನೀಡಬಹುದು.

ಆಕ್ಸ್ ಫಾಮ್ ಹೊರಡಿಸಿರುವ ‘ದಿ ಇನಿಕ್ವಾಲಿಟಿ ವೈರಸ್’ (ಅಸಮಾನತೆಯ ವಿಷಾಣು)ವರದಿಯು ಮುಕೇಶ್ ಅಂಬಾನಿ ಸಾಂಕ್ರಾಮಿಕದ ಕಾಲಘಟ್ಟದಲ್ಲಿ ಒಂದು ಗಂಟೆಯಲ್ಲಿ ಗಳಿಸಿದ್ದನ್ನು ಗಳಿಸಲು ಓರ್ವ ಅಕುಶಲ ಕಾರ್ಮಿಕನಿ/ಳಿಗೆ 10,000 ವರ್ಷಗಳು ಬೇಕು ಮತ್ತು ಒಂದು ಸೆಕೆಂಡ್‌ನಲ್ಲಿ ಗಳಿಸಿದ್ದನ್ನು ಗಳಿಸಲು ಮೂರು ವರ್ಷಗಳು ಬೇಕು ಎಂದು ಕಂಡುಹಿಡಿದಿದೆ. ಇನ್ನೊಂದೆಡೆ, ಏಪ್ರಿಲ್ 2020 ರ ತಿಂಗಳೊಂದರಲ್ಲಿ ಪ್ರತಿ ಒಂದು ಗಂಟೆಯಲ್ಲಿ 1,70,000 ಜನ ತಮ್ಮ ಉದ್ಯೋಗವನ್ನು ಕಳೆದುಕೊಂಡರು ಎಂದು ಅಂಕಿ-ಅಂಶಗಳು ತಿಳಿಸುತ್ತಿವೆ. ಭಾರತೀಯ ಬಿಲಿಯನೇರ್‌ಗಳ ಸಂಪತ್ತು ಲಾಕ್‌ಡೌನ್ ಅವಧಿಯಲ್ಲಿ ಶೇ. 35 ರಷ್ಟು ಹೆಚ್ಚಿದೆ ಮತ್ತು 2009 ರಿಂದೀಚೆಗೆ ಶೇ. 90 ರಷ್ಟು ಹೆಚ್ಚಿ 422.9 ಬಿಲಿಯನ್ ಡಾಲರ್ಸ್ ತಲುಪಿದೆ. ಸಾಂಕ್ರಾಮಿಕದ ಅವಧಿಯಲ್ಲಿ ಭಾರತದ ಅಗ್ರ 11 ಬಿಲಿಯನೇರ್‌ಗಳ ಸಂಪತ್ತಿನ ಹೆಚ್ಚಳದ ಪ್ರಮಾಣ ಎಷ್ಟಿದೆಯೆಂದರೆ ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು 10 ವರ್ಷಗಳವರೆಗೆ ಕಾಯ್ದುಕೊಳ್ಳಬಹುದು ಅಥವಾ ಆರೋಗ್ಯ ಸಚಿವಾಲಯ ಬಜೆಟ್‌ಅನ್ನು 10 ವರ್ಷಗಳವರೆಗೆ ಕಾಯ್ದುಕೊಳ್ಳಬಹುದು.

ಶೇ. 20 ರಷ್ಟು ಕಡುಬಡವರಲ್ಲಿ ಕೇವಲ ಶೇ. 6 ಜನರನ್ನು ಮಾತ್ರವೇ ಹಂಚಿಕೊಳ್ಳದ ಸುಧಾರಿತ ನೈರ್ಮಲ್ಯ ವ್ಯವಸ್ಥೆ ತಲುಪಿದೆ. ಅತ್ಯಂತ ಮೇಲಿನ ಶೇ. 20 ರಲ್ಲಿ ಈ ಪ್ರಮಾಣ ಶೇ. 93.4 ರಷ್ಟಿದೆ. ಭಾರತದ ಜನಸಂಖ್ಯೆಯ ಶೇ. 59.6 ರಷ್ಟು ಜನ ಒಂದು ಕೊಠಡಿ ಅಥವಾ ಅದಕ್ಕಿಂತ ಕಡಿಮೆ ವ್ಯವಸ್ಥೆ ಇರುವ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಸರಕಾರದ ಒಟ್ಟು ಖರ್ಚಿನಲ್ಲಿ ಆರೋಗ್ಯ ಬಜೆಟ್‌ನ ಪಾಲಿನ ದೃಷ್ಟಿಯಿಂದ ತಯಾರಿಸಿರುವ ಪಟ್ಟಿಯಲ್ಲಿ ಭಾರತದ ದೇಶವು ಅತೀ ಕಡಿಮೆ 4 ರ ಕ್ರಮಾಂಕ ಕೆಳಗಿನಿಂದ 4ನೇಯದು. ಭಾರತದ 11 ಬಿಲಿಯನೇರ್‌ಗಳ ಸಂಪತ್ತಿನಲ್ಲಿ ಸಾಂಕ್ರಾಮಿಕದ ಅವಧಿಯಲ್ಲಿ ಆಗಿರುವ ಹೆಚ್ಚಳದ ಮೇಲೆ ಕೇವಲ ಶೇ.1 ತೆರಿಗೆ ವಿಧಿಸಿದರೆ, ಬಡವರು ಮತ್ತು ಅವಕಾಶ ವಂಚಿತರಿಗೆ ಕಡಿಮೆ ದರದಲ್ಲಿ ಔಷಧಿ ನೀಡುವ ಜನೌಷಧಿ ಯೋಜನೆಗೆ ಮೀಸಲಿಡುವ ಮೊತ್ತವನ್ನು 140 ಪಟ್ಟು ಹೆಚ್ಚಿಸಬಹುದು.

(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವದು)



ಪುಟ 9 ರಿಂದ

ಎನ್ ಜಿ ಓ ಗಳು ಹಾಗೂ ಖಾಸಗಿ ಲಾಗುವಾಡು ಡೀಲರ್ ಗಳು ಸಂಪೂರ್ಣವಾಗಿ ತಮ್ಮ ವಶಕ್ಕೆ ತೆಗೆದು ಕೊಂಡಿವೆ. ಸಾರ್ವಜನಿಕ ಸಂಶೋಧನೆ ದುರ್ಬಲಗೊಂಡರೆ ಸಾರ್ವಜನಿಕ ವಿಸ್ತರಣೆ ಧ್ವಂಸಗೊಳ್ಳುತ್ತದೆ.

ಮುಕ್ತ ವ್ಯಾಪಾರದ ಅಪಾಯಗಳು

ಮುಕ್ತ ವ್ಯಾಪಾರ ಹಾಗೂ ಸಾರ್ವಜನಿಕ ವೆಚ್ಚ ಕಡಿತವು ಭಾರತದ ಆಹಾರ ಭದ್ರತೆಗೆ ಅಪಾಯವನ್ನು ತರಲಿದೆ ಎಂದು ಮ್ಯಾಕ್ರೋ ಅರ್ಥಶಾಸ್ತ್ರಜ್ಞರು ಪದೇ ಪದೇ ಹೇಳಿದ್ದಾರೆ ಅಲ್ಲವೇ?

ಒಂದು ವ್ಯವಸ್ಥೆಯಾಗಿ ಮುಕ್ತ ವ್ಯಾಪಾರವು ಜಗತ್ತಿನಾದ್ಯಂತ ಅಪಖ್ಯಾತಿಗೆ ಒಳಗಾಗಿದೆ. ಅಭಿವೃದ್ಧಿ ದೇಶಗಳು ಕೂಡ WTOವನ್ನು ಒಂದು ವಿಶ್ವಾಸಾರ್ಹ ಸಂಸ್ಥೆ ಎಂದು ಪರಿಗಣಿಸುತ್ತಿಲ್ಲ. ಆದ್ದರಿಂದಲೇ ಈ ದೇಶಗಳು ಹೆಚ್ಚು ಹೆಚ್ಚು ಪ್ರಾದೇಶಿಕ ಹಾಗೂ ದ್ವಿಪಕ್ಷೀಯ ಮುಕ್ತ ವ್ಯಾಪಾರ ಒಪ್ಪಂದಗಳಿಗೆ ಆದ್ಯತೆ ನೀಡುತ್ತಿವೆ. WTO ಎಂಬುದು ಕೆಲಸ ಮಾಡುವ ಹಾಗೂ ಪ್ರಯೋಜನಕಾರಿ ಸಂಸ್ಥೆ ಆಗಿದ್ದರೆ ಏಕೆ ಇಂತಹ ಹೊಸ ಒಪ್ಪಂದಗಳ ಅಗತ್ಯ ಬರುತ್ತದೆ? ಆಫ್ರಿಕಾ, ಲ್ಯಾಟಿನ್ ಅಮೆರಿಕ ಹಾಗೂ ಏಷ್ಯಾದಾದ್ಯಂತ ಮುಕ್ತ ವ್ಯಾಪಾರ ಒಪ್ಪಂದಗಳು ಕೃಷಿಕ ಸಮಾಜವನ್ನು ಹಾಳುಗೆಡವಿದೆ. ಅವುಗಳ ಮೇಲೆ ಅಗ್ಗದ ಆಮದುಗಳನ್ನು ತಂದು ಸುರಿಯಲಾಯಿತು. ಪರಿಣಾಮವಾಗಿ ದರಗಳು ಕುಸಿದು ಕೃಷಿಕ ಬಿಕ್ಕಟ್ಟು ಆಳಗೊಂಡಿತು.

ತಳಮಟ್ಟದ ಆಹಾರ ಧಾನ್ಯ ಉತ್ಪಾದನೆ ಇದ್ದ ದೇಶಗಳಲ್ಲಿ ಆಹಾರ ಭದ್ರತೆಯನ್ನು ಸಹ ಈ ಮುಕ್ತ ವ್ಯಾಪಾರ ಬಾಧಿಸಿದೆ. ವಾಣಿಜ್ಯ ಬೆಳೆಗಳನ್ನು ರಫ್ತು ಮಾಡಿ ಆಹಾರ ಧಾನ್ಯಗಳನ್ನು ಕೊಳ್ಳಲು ವಿದೇಶಿ ವಿನಿಮಯ ಗಳಿಸಲು ಈ ದೇಶಗಳು ಪ್ರಯತ್ನಿಸಿದವು. ಆದರೆ ವಾಣಿಜ್ಯ ಬೆಳೆಗಳ ಬೆಲೆಗಳು ಕುಸಿಯುತ್ತಿದ್ದಂತೆ ಅವುಗಳ ರಫ್ತು ಗಳಿಕೆಯೂ ಕುಸಿಯಿತು. ತತ್ಪರಿಣಾಮ, ಮೊದಲಿನಷ್ಟು ಪ್ರಮಾಣದ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಲು ಕಷ್ಟವಾಗತೊಡಗಿತು. ಹೀಗೆ ಇದು ಆ ದೇಶಗಳ ಆಹಾರ ಭದ್ರತೆಗೆ ಕಂಟಕವಾಗಿದೆ.

ಇದರ ಜೊತೆಗೆ ಸಾರ್ವಜನಿಕ ವೆಚ್ಚ ಕಡಿತವು, ಸಣ್ಣ ಮತ್ತು ಅತಿ ಸಣ್ಣ ರೈತರ ತೃಪ್ತಿಕರ ಲಾಭಾಂಶದೊಂದಿಗೆ ಉತ್ಪಾದನೆ ಮಾಡುವ ಸಾಮರ್ಥ್ಯ ವನ್ನು ತೀವ್ರವಾಗಿ ಬಾಧಿಸಿದೆ. ಸಬ್ಸಿಡಿಗಳ ಕಡಿತದಿಂದಾಗಿ ಹಾಗೂ ಕಾರ್ಪೋರೇಟ್ ಗಳ ಲಾಭಕೋರತನದಿಂದಾಗಿ ಕೃಷಿ ಲಾಗುವಾಡು ದರಗಳು ಗಗನಕ್ಕೇರಿದವು. ರೈತರು ಬಹುರಾಷ್ಟ್ರೀಯ ಕಂಪನಿಗಳ ಮೇಲೆ ಅವಲಂಬಿತರಾದರು. ಇವೆಲ್ಲವೂ ಸಣ್ಣ ಮತ್ತು ಅತಿ ಸಣ್ಣ ರೈತರು ತೀವ್ರವಾಗಿ ಹಿಂಡಲ್ಪಡಲು ಕಾರಣಗಳಾಗಿವೆ.

ಒಂದು ವೇಳೆ ಕೃಷಿ ವಲಯವು ಸುಧಾರಣೆಗಳ ಕಾರಣದಿಂದ ಬೆಳೆದಿದ್ದರೆ ಭಾರತದ ಬೆಳವಣಿಗೆ ದರಗಳು ಇನ್ನೂ ಹೆಚ್ಚಿನದಾಗಿರಬೇಕಿತ್ತು ಎಂಬುದನ್ನು ನೀವು ಒಪ್ಪುತ್ತೀರಾ?

ನವ ಉದಾರೀಕರಣ ಧೋರಣೆಗಳ ಕಳೆದ 30 ವರ್ಷಗಳಲ್ಲಿನ ಕೃಷಿ ಬೆಳವಣಿಗೆ ದರಕ್ಕಿಂತ, 1980 ರ ದಶಕದ ಭಾರತದ ಕೃಷಿ ಬೆಳವಣಿಗೆ ದರ ಹೆಚ್ಚು ಇತ್ತು ಎಂಬುದು ಒಂದು ಸರಳವಾಗಿ ಕಾಣುವ ವಾಸ್ತವ. ಕೃಷಿಯಲ್ಲಿ ಯಾವುದೇ ಬೆಳವಣಿಗೆ ಸಾಧಿಸಲು ಸುಧಾರಣೆಗಳು ವಿಫಲವಾಗಿವೆ ಎಂದು ವಾದಿಸಲು ಇದೊಂದೇ ಸೂಚಕ ಸಾಕು.

ಆದರೆ ಮತ್ತೊಂದು ಅಂಶ ಇದೆ. 2015 ಹಾಗೂ 2022 ರ ಮಧ್ಯೆ ಕೃಷಿ ಆದಾಯವನ್ನು ದುಪ್ಪಟ್ಟು ಮಾಡುತ್ತೇವೆ ಎಂದು ನರೇಂದ್ರ ಮೋದಿ ಸರ್ಕಾರವು ಹೇಳುತ್ತಿದೆ. ಇದೊಂದು ಪ್ರಸ್ತುತ ಬಿಜೆಪಿ ಆಳ್ವಿಕೆಯ ಅತಿ ದೊಡ್ಡ ವೈಫಲ್ಯವಾಗಿದೆ. ವಾಸ್ತವವಾಗಿ ಈ ಅವಧಿಯ ರೈತರ ಆದಾಯ ನಿಜ ಅರ್ಥದಲ್ಲಿ ಕುಸಿತ ಆಗಿರುವ ಸಾಧ್ಯತೆ ಇದೆ. ವಿನಾಶಕಾರಿ ನೋಟು ರದ್ದತಿ ದೂರಾಲೋಚನೆ ಇಲ್ಲದ ಸರಕು ಹಾಗೂ ಸೇವೆಗಳ ತೆರಿಗೆ (GST) ವ್ಯವಸ್ಥೆ, ಕೋವಿಡ್–19 ಬಿಕ್ಕಟ್ಟಿಗೆ ಅಮಾನವೀಯ ಪ್ರತಿಕ್ರಿಯೆ ಯಾಗಿ ಈ ಅವಧಿ ಉದ್ದಕ್ಕೂ ಹೇರಿದ ಕರಾಳ ಲಾಕ್ ಡೌನ್ ಈ ಎಲ್ಲವೂ ರೈತರನ್ನು ಜರ್ಝರಿತಗೊಳಿಸಿವೆ. ರೈತರು ಆಕ್ರೋಶಗೊಂಡಿದ್ದಾರೆ. ಖಂಡಿತವಾಗಿ ಸುಧಾರಣೆಗಳು ತಮ್ಮ ಜೀವನದ ಸ್ಥಿತಿಯನ್ನು ಹದಗೆಡಿಸಿವೆ ಎಂದೇ ಅವರು ಭಾವಿಸಿದ್ದಾರೆ.

ರೈತ ಚಳುವಳಿಯ ವಿಕಾಸ

ಕಳೆದ ಮೂವತ್ತು ವರ್ಷಗಳಿಂದ ರೈತಾಪಿ ಹೋರಾಟಗಳ ಚಳುವಳಿಯನ್ನು ಮುನ್ನೆಡೆಸುತ್ತಿದ್ದೀರಾ, ಈ ಪ್ರಚಾರಾಂದೋಲನದ ಕೇಂದ್ರ ಪ್ರಶ್ನೆ ಯಾವುದು ಮತ್ತು ರೈತರು ಆಣಿನೆರೆಯುವಿಕೆಯ ವಿಕಾಸವನ್ನು ನೀವು ಹೇಗೆ ನೋಡುತ್ತೀರಾ?

ಕಳೆದ ಮೂವತ್ತು ವರ್ಷಗಳ ನವ ಉದಾರೀಕರಣ ಧೋರಣೆಗಳು ಉಂಟು ಮಾಡಿರುವ ಆಳವಾದ ಕೃಷಿಕ ಬಿಕ್ಕಟ್ಟು ಮತ್ತು ಈ ಬಿಕ್ಕಟ್ಟಿನ ಪರಿಣಾಮವು ಕಳೆದ 25 ವರ್ಷಗಳಲ್ಲಿ (1995 ರಿಂದ) 4 ಲಕ್ಷ ಕ್ಕೂ ಹೆಚ್ಚು ರೈತರ ಆತ್ಮಹತ್ಯೆಗಳಿಗೆ ಕಾರಣವಾಗಿದೆ. ಈ ಅವಧಿಯ ರೈತ ಚಳುವಳಿಯ ಕೇಂದ್ರ ವಿಷಯ ಇದೇ ಎಂದು ನಾನು ಪರಿಗಣಿಸುತ್ತೇನೆ.

ಮೂರು ಕೃಷಿ ಕಾನೂನುಗಳನ್ನು ರದ್ದುಪಡಿಸಬೇಕು ಎಂಬ ಮೂಲಭೂತ ವಿಷಯದ ಜೊತೆಗೆ ಇನ್ನೂ ಹಲವು ವಿಷಯಗಳು ಇವೆ. ಅವುಗಳೆಂದರೆ, ಸಮಗ್ರ ಕೃಷಿ ವೆಚ್ಚದ ಒಂದೂವರೆ ಪಟ್ಟು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ)ಯನ್ನು ಖಾತರಿ ಪಡಿಸುವ ಕೇಂದ್ರೀಯ ಶಾಸನ (ಸ್ವಾಮಿನಾಥನ್ ಆಯೋಗದ ಸೂತ್ರ ಅ2+50% ಪ್ರಕಾರ) ಜಾರಿ ಮಾಡುವುದು, ವಿದ್ಯುತ್ ರಂಗವನ್ನು ಖಾಸಗೀಕರಣ ಗೊಳಿಸುವ ಹಾಗೂ ಎಲ್ಲರಿಗೂ ವಿದ್ಯುತ್ ದರವನ್ನು ದುಬಾರಿಗೊಳಿಸುವ ವಿದ್ಯುತ್ ತಿದ್ದುಪಡಿ ಮಸೂದೆಯನ್ನು ವಾಪಸ್ಸು ಪಡೆಯಬೇಕು. ಡೀಸೆಲ್, ಪೆಟ್ರೋಲ್, ಅಡುಗೆ ಅನಿಲದ ಅಗಣಿತ ಏರಿಕೆಯನ್ನು ತಡೆಗಟ್ಟುವುದು; ರೈತರು ಮತ್ತು ಕೃಷಿ ಕೂಲಿಕಾರರಿಗೆ ಸಂಪೂರ್ಣ ಸಾಲಮನ್ನಾ ಮಾಡುವುದು (ಈಗಿನ ಕೇಂದ್ರ ಸರ್ಕಾರ ಏಳು ವರ್ಷಗಳಲ್ಲಿ ಕಾರ್ಪೊರೇಟ್‌ಗಳಿಗೆ ಲಕ್ಷಾಂತರ ಕೋಟಿ ರೂಗಳನ್ನು ಮನ್ನಾ ಮಾಡಿದೆ). ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾ (PMFBY) ಯಡಿಯಲ್ಲಿ ಈಗಿರುವ ವಿಮಾ ಕಂಪನಿಗಳಿಗೆ ನೆರವು ನೀಡುವ ಬದಲು ಸಂತ್ರಸ್ತ ರೈತರಿಗೆ ನೆರವಾಗುವಂತಹ ಬೆಳೆ ವಿಮಾ ಯೋಜನೆ ಯನ್ನು ಸಂಪೂರ್ಣ ಪುನರ್‌ರಚನೆ ಮಾಡುವುದು. ಎಲ್ಲಾ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಸಮರ್ಪಕ ಪ್ರಮಾಣದಲ್ಲಿ ಸುಲಭ ಸಾಲ ವ್ಯವಸ್ಥೆ; ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯಡಿಯಲ್ಲಿ ಕೆಲಸದ ದಿನಗಳನ್ನು ಹಾಗೂ ಕೃಷಿ ಕೂಲಿಕಾರರ ವೇತನವನ್ನು ದುಪ್ಪಟ್ಟು ಗೊಳಿಸುವುದು. ಆದಿವಾಸಿ ರೈತರಿಗೆ ಅರಣ್ಯ ಹಕ್ಕುಗಳ ಕಾಯ್ದೆಯನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸುವುದು .ರೈತರನ್ನು ಅವರ ಭೂಮಿಯಿಂದ ಬಲವಂತದ ಒಕ್ಕಲೆಬ್ಬಿಸುವಿಕೆಗೆ ತಡೆ; ಹಾಗೂ ನೈಜ ಭೂ ಸುಧಾರಣೆ ಕಡೆ ಸಾಗುವುದು. ಇದರ ಜೊತೆಗೆ 4 ಕಾರ್ಮಿಕ ಸಂಹಿತೆಗಳನ್ನು ರದ್ದು ಪಡಿಸುವ ಕಾರ್ಮಿಕ ವರ್ಗದ ಆಗ್ರಹ ಮತ್ತು ಬಿಜೆಪಿ ತನ್ನ ಆಳ್ವಿಕೆಯಲ್ಲಿ ನಡೆಸುತ್ತಿರುವ ಖಾಸಗೀಕರಣದ ಮೂಲಕ ದೇಶ ಮಾರುವುದು ನಿಲ್ಲಿಸಬೇಕು ಎಂಬ ಜನರ ಒತ್ತಾಯವೂ ಕೂಡ ನಮ್ಮ ಆಗ್ರಹದಲ್ಲಿ ಸೇರಿದೆ.

ನವ ಉದಾರೀಕರಣ ಧೋರಣೆಗಳ ಕಳೆದ ಮೂವತ್ತು ವರ್ಷಗಳಿಗೂ ಹೆಚ್ಚು ಕಾಲದ ಈ ರೈತ ಚಳುವಳಿಯ ವಿಕಾಸವು ಮೇಲೆ ಪಟ್ಟಿ ಮಾಡಿದ ವಿಷಯಗಳ ಮೇಲೆ ಏರಿಕೆಯ ಪ್ರವೃತ್ತಿ ಹೊಂದಿರುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಆದರೆ ತನ್ನ ಕಾರ್ಪೊರೇಟ್ ಪರ ಧೋರಣೆಗಳನ್ನು ಜಾರಿ ಮಾಡಲು ಅತಿರೇಕದಿಂದ ವರ್ತಿಸುತ್ತಿರುವ ಮೋದಿ ಸರ್ಕಾರದ ಈ ಏಳು ವರ್ಷಗಳಲ್ಲಿ ರೈತ ಚಳುವಳಿ ಸಹಜವಾಗಿ ಮತ್ತಷ್ಟು ತೀವ್ರಗೊಂಡಿದೆ.

2017 ರಲ್ಲಿ 11 ದಿನಗಳ ರೈತರ ಮುಷ್ಕರವು ಸೇರಿ ರಾಜಾಸ್ಥಾನ ಮತ್ತು ಮಹಾರಾಷ್ಟ್ರದ ದೊಡ್ಡ ಹೋರಾಟಗಳು ಹಾಗೂ 2018 ರ ಎಐಕೆಎಸ್ ಮುನ್ನಡೆಸಿದ ಕಿಸಾನ್ ಲಾಂಗ್ ಮಾರ್ಚ್‌ನಲ್ಲಿ ಕಂಡಂತೆ ಈ ಧೋರಣೆಗಳಿಗೆ ರೈತರು ಬಲವಾದ ಪ್ರತಿರೋಧ ತೋರಿದ್ದಾರೆ. ನಂತರ 2018 ರಲ್ಲಿ ದೇಶದ ರಾಜಧಾನಿ ಯಲ್ಲಿ ಎರಡು ಬೃಹತ್ ಮೆರವಣಿಗೆ ನಡೆದಿವೆ.

(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವದು)

ವಿದ್ಯಾರ್ಥಿನಿಯರ ಮೇಲೆ ಹಲ್ಲೆ: ಮಾನವ ಸರಪಳಿ ನಿರ್ಮಿಸಿ ಆಕ್ರೋಶ



ತಾಲ್ಲೂಕಿನ ತಾಡಿಗೊಳ್ ಕ್ರಾಸ್‌ನಲ್ಲಿ ಇತ್ತೀಚೆಗೆ ನಡೆದ ವಿದ್ಯಾರ್ಥಿನಿಯರ ಮೇಲಿನ ದೌರ್ಜನ್ಯ ಖಂಡಿಸಿ ಎಸ್‌ಎಫ್‌ಐ, ಜೆಎಂಎಸ್, ಡಿಹೆಚ್‌ಎಸ್ ಮತ್ತು ಜನಪರ ಸಂಘಟನೆಗಳ ನೂರಾರು ವಿದ್ಯಾರ್ಥಿಗಳು, ಮಹಿಳೆಯರು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ, ಬಸ್ ನಿಲ್ದಾಣದ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿದರು. ನಂತರ ತಾಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಆರೋಪಿಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕೆಂದು ಮನವಿ ಸಲ್ಲಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ರಾಜ್ಯ ಕಾರ್ಯದರ್ಶಿ ಕೆ. ವಾಸುದೇವರೆಡ್ಡಿ ಮಾತನಾಡಿ "ಈ ಘಟನೆ ನಡೆದು ವಾರ ಕಳೆದರೂ ಪ್ರಮುಖ ಆರೋಪಿಗಳನ್ನು ಪೋಲಿಸರು ಬಂಧಿಸದೇ ಇರುವುದು ಖಂಡನೀಯ. ವಿದ್ಯಾರ್ಥಿನೀಯರ ಮೇಲಿನ ಮಾರಣಾಂತಿಕ ಹಲ್ಲೆಯನ್ನು ನಾವೆಲ್ಲ ಒಟ್ಟಾಗಿ ವಿರೋಧಿಸುತ್ತೇವೆ. ಪೊಲೀಸರು ವಿಳಂಬ ಧೋರಣೆಯನ್ನು ಅನುಸರಿಸದೆ ಕೂಡಲೇ ಆರೋಪಿಗಳನ್ನು ಬಂಧಿಸಿ ಕ್ರಮಜರುಗಿಸಬೇಕೆಂದು" ಆಗ್ರಹಿಸಿದರು.

ಜನವಾದಿ ಮಹಿಳಾ ಸಂಘಟನೆ(ಜೆಎಂಎಸ್)ಯ ಜಿಲ್ಲಾಧ್ಯಕ್ಷರಾದ ಸೌಭಾಗ್ಯಮ್ಮ ಮಾತನಾಡಿ "ದೌರ್ಜನ್ಯಕ್ಕೆ ಒಳಗಾದ ವಿದ್ಯಾರ್ಥಿನಿಯರು, ಅವರ ಪೋಷಕರ ಮೇಲೆಯೇ ಪೊಲೀಸರು ಕೇಸು ದಾಖಲಿಸಿರುವುದು ಅಮಾನವೀಯ, ಕೂಡಲೇ ಕೇಸು ವಾಪಸ್ ಪಡೆದು ಗೂಂಡಾಗಿರಿ ಹಲ್ಲೆ ದೌರ್ಜನ್ಯ ನಡೆಸಿದವರನ್ನು ಬಂಧಿಸಬೇಕು" ಎಂದು ಆಗ್ರಹಿಸಿದರು.

ರಾಜ್ಯ ಗೃಹಮಂತ್ರಿಗಳಿಗೆ ಸಲ್ಲಿಸಲಾಗುವ ಮನವಿ ಪತ್ರವನ್ನು ತಹಶೀಲ್ದಾರ್ ಎಸ್.ಎಂ.ಶ್ರೀನಿವಾಸ್ ಅವರ ಮೂಲಕ ಸಲ್ಲಿಸಿ ಕೂಡಲೇ ಕ್ರಮವಹಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಎಸ್.ಎಫ್.ಐ. ಜಿಲ್ಲಾ ಉಪಾಧ್ಯಕ್ಷ ಶ್ರೀಕಾಂತ್, ಅಂಕಿತಾ, ತಾಲೂಕು ಅಧ್ಯಕ್ಷ ಉದಯ್ ಕುಮಾರ್, ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿ ನವೀನ್ ಕುಮಾರ್, ಜೆಎಂಎಸ್ ಜಿಲ್ಲಾ ಉಪಾಧ್ಯಕ್ಷೆ ಮಂಜುಳಾ, ಮುಖಂಡರಾದ ಸುಜಾತಾ, ಸುರೇಶ್‌ಬಾಬು, ಮೇನಶ್ರೀ, ದಲಿತ ಹಕ್ಕುಗಳ ಸಮಿತಿ(ಡಿ.ಎಚ್.ಎಸ್.) ಸಂಘಟನೆಯ ಪಿ.ತಂಗರಾಜ್, ವೆಂಕರಮಣ, ಡಿ.ವಿ.ಅಮರ್ ಇತರರು ಭಾಗವಹಿಸಿದ್ದರು.

‘ವಿಜ್ಞಾನ ಎಂಬ ಅಹಂಕಾರ’ ಮತ್ತು ಅಜ್ಞಾನದ ಬಲೆ...............

ಪುಟ 6 ರಿಂದ

ಸಾಮಾನ್ಯವ್ಯಕ್ತಿಯಷ್ಟೇ, ಅಥವಾ ಅವರಿಗಿಂತಲೂ ಹೆಚ್ಚು ಅವೈಜ್ಞಾನಿಕವಾಗಿ ಯೋಚಿಸುವ, ತೀರ್ಮಾನಿಸುವ, ವಿಜ್ಞಾನದ ಹೆಸರಿನಲ್ಲಿ ಅಂಥ ತೀರ್ಮಾನಗಳಿಂದ ಜನರನ್ನು ಪ್ರಭಾವಿಸುವ 'ವಿಜ್ಞಾನಿ'ಗಳು ವಿಜ್ಞಾನಪ್ರಪಂಚದಲ್ಲಿ ಹೇರಳವಾಗಿದ್ದಾರೆ. ಹಾಗೆಯೇ ವೈಜ್ಞಾನಿಕ ವಿಧಾನವನ್ನು 'ಮಾನವೀಯ ಶಾಸ್ತ್ರ'ಗಳಲ್ಲಿ ಅವು ಸಾಧ್ಯಮಾಡುವಷ್ಟು ವೈಜ್ಞಾನಿಕ ವಿಧಾನವನ್ನು ಬಳಸಿ ಆ ಮಟ್ಟಿನ ನಿಖರ ತೀರ್ಮಾನಗಳನ್ನು ಕೊಡುವ ವೈಜ್ಞಾನಿಕ ಚಿಂತಕರು ನಮ್ಮ ನಡುವೆ ಇದ್ದರೂ ಅವರನ್ನು ಸಾಮಾನ್ಯವಾಗಿ ವಿಜ್ಞಾನಿಗಳೆಂದು ಬಹುಶಃ ನಡಹಳ್ಳಿಯಂಥ ಜನರು ಸೇರಿದಂತೆ ಗುರುತಿಸುವುದಿಲ್ಲ.

ಈ ಮೊದಲು ಹೇಳಿದ್ದನ್ನು ಮತ್ತೊಮ್ಮೆ ಸಂಗ್ರಹಿಸಿ ಹೇಳುವುದಾದರೆ, ಮನುಷ್ಯರು ಪ್ರಕೃತಿಯನ್ನು ವಸ್ತುವಾಗಿ ಪರಿಗಣಿಸಿ ಮಾಡುವ ವೈಜ್ಞಾನಿಕ ಅಧ್ಯಯನ ಶಿಸ್ತುಗಳನ್ನು ಒಟ್ಟಾರೆಯಾಗಿ 'ನಿಸರ್ಗ ವಿಜ್ಞಾನ' ಅಥವಾ ವಸ್ತು ವಿಜ್ಞಾನವೆಂದೂ, ಮನುಷ್ಯರನ್ನೇ ಅಧ್ಯಯನವಸ್ತುವಾಗಿ ಪರಿಗಣಿಸಿ ಅವರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂಬಂಧಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಜ್ಞಾನಶಿಸ್ತುಗಳನ್ನು ಒಟ್ಟಾರೆಯಾಗಿ ‘ಮಾನವ ವಿಜ್ಞಾನ’ವೆಂದೂ ಕರೆಯುತ್ತಾರೆ. ವಿಜ್ಞಾನವೆಂದಾಗ ಇವೆರಡೂ ಅದರಲ್ಲಿ ಸೇರಿವೆ ಎಂದು ತಿಳಿದರೆ ಅದು ಪೂರ್ಣಾರ್ಥದಲ್ಲಿ ವಿಜ್ಞಾನವಾಗುತ್ತದೆ. ನಡಹಳ್ಳಿಯವರು ತಮ್ಮ ಲೇಖನಕ್ಕೆ ಕೊಟ್ಟಿರುವ 'ವಿಜ್ಞಾನದ ಅಹಂಕಾರ' ಎಂಬ ಶೀರ್ಷಿಕೆಯು ಅವೈಜ್ಞಾನಿಕ ದೃಷ್ಟಿಯ ‘ವಿಜ್ಞಾನಿಗಳು’ ಅನುಸರಿಸುವ ‘ವಿಜ್ಞಾನ’ವನ್ನೇ ನಿಜವಾದ ವಿಜ್ಞಾನವೆಂದು ತಪ್ಪಾಗಿ ಗ್ರಹಿಸಿ ಕೊಟ್ಟ ಶೀರ್ಷಿಕೆಯಾಗಿದೆ.

ತಂತ್ರಜ್ಞಾನದ ಬಗ್ಗೆ ನಡಹಳ್ಳಿಯವರು ಎತ್ತುವ ಆಕ್ಷೇಪದಲ್ಲಿ ಅವರು ಗಣನೆಗೆ ತೆಗೆದುಕೊಳ್ಳದ ಮತ್ತೊಂದು ಬಹು ಮುಖ್ಯ ಅಂಶವಿದೆ. ಬಲಿಷ್ಠರು ದುರ್ಬಲರನ್ನು ತಮ್ಮ ಗುಲಾಮರನ್ನಾಗಿಸಿ ತಮ್ಮ ಬದುಕಿನ ಆಧಾರಗಳಿಗಾಗಿ ಅವರ ಸೃಜನಶಕ್ತಿಯನ್ನು ದುಡಿಸಿಕೊಳ್ಳಲು ಆರಂಭಿಸಿದ ಕಾಲದಿಂದಲೂ ಕಂಡುಬರುವ ಅಂಶ ಅದು. ಯಾವುದೇ ಸೃಷ್ಟಿಯು ಭೂಮಿಯನ್ನು ಬಳಸಿಕೊಂಡು ಮನುಷ್ಯರು ತಮ್ಮ ಸೃಜನಶಕ್ತಿಯನ್ನು ವಸ್ತು–ಚಿಂತನೆಗಳನ್ನಾಗಿ ಪರಿವರ್ತಿಸುವ ಕ್ರಿಯೆಗಳ ಫಲವೇ ಆಗಿದೆ. ಆದರೆ ಬಲಿಷ್ಠರು ಭೂಮಿಯನ್ನು ಆಯಾ ಕಾಲದ ದುರ್ಬಲರ ಸೃಜನಶಕ್ತಿಯನ್ನು, ಅವರು ಸೃಷ್ಟಿಸಲು ಬಳಸುವ ಉಪಕರಣಗಳನ್ನು ತಮ್ಮ ವಶದಲ್ಲಿರಿಸಿಕೊಂಡು ದುರ್ಬಲರನ್ನು ಆಳುವುದರಿಂದ ಚರಿತ್ರೆಯುದ್ದಕ್ಕೂ ಬಲಿಷ್ಠರ ಧೋರಣೆ–ಆಲೋಚನೆಗಳೇ ದುರ್ಬಲರ ಧೋರಣೆ–ಆಲೋಚನೆಗಳು ಎಂಬಂತಾಗಿದೆ. ಭೂಮಿ ಹಾಗೂ ದುರ್ಬಲರ ಸೃಜನಶಕ್ತಿಯ ಫಲಗಳಾದ ವಸ್ತು, ಚಿಂತನೆ, ಹಾಗೂ ಆವಿಷ್ಕಾರಗಳನ್ನು ತಮ್ಮ ವಶದಲ್ಲಿರಿಸಿಕೊಂಡು, ಅವುಗಳ ಬಳಕೆ–ಪ್ರಯೋಜನಗಳನ್ನು ಬಳಸಿಕೊಂಡು ದುರ್ಬಲರ ಜೀವನ ಹಸನಾಗುವಂತೆ ಮಾಡುವ ಬದಲು, ವಾಣಿಜ್ಯ–ವ್ಯಾಪಾರಗಳನ್ನು ಆಧರಿಸಿದ ತಮ್ಮ ಸುಖ–ಲೋಲುಪತೆಗಾಗಿ ಬಳಸಿಕೊಳ್ಳುವುದು ಇಂದಿಗೂ ನಡೆದಿದೆ. ಹೀಗೆ ವಿಜ್ಞಾನ–ತಂತ್ರಜ್ಞಾನಗಳ ಲಾಭಗಳು ಎಲ್ಲರಿಗೂ ಸಿಗುವ ಬದಲು, ಅವುಗಳ ಮೇಲಿನ ಬಲಿಷ್ಠರ ಹಿಡಿತದಿಂದಾಗಿ ವಿಜ್ಞಾನ–ತಂತ್ರಜ್ಞಾನಗಳೇ ಜನವಿರೋಧಿಯಾಗಿರುವಂತೆ, ಮಾನವೀಯತೆಗೆ ಕುರುಡಾಗಿರುವಂತೆ ತೋರುತ್ತವೆ. ಜನವಿರೋಧಿಯಾಗಿರುವುದು ವಿಜ್ಞಾನ–ತಂತ್ರಜ್ಞಾನಗಳಲ್ಲ, ಅವುಗಳನ್ನು ತಮ್ಮ ವಶದಲ್ಲಿರಿಸಿಕೊಂಡು, ನಿಯಂತ್ರಿಸುವ ಬಲಿಷ್ಠರು.

ಒಂದು ಕಾಲದಲ್ಲಿ ನಗ್ನವಾಗಿದ್ದ ದುರ್ಬಲರ ಮೇಲಿನ ದಮನಕಾರೀ ಭೌತಿಕ ಬಲಾತ್ಕಾರ ಆಧುನಿಕ ಕಾಲಗಳಲ್ಲಿ ಪ್ರಭುತ್ವ, ಸಂವಿಧಾನ, ಕಾನೂನು, ಕಟ್ಟಳೆ ಮುಂತಾದ ರೂಪಗಳ ಹಿಂದೆ ಮುಖ ಮರೆಸಿಕೊಂಡಿದೆ. ಇತರ ಸೃಜನಶೀಲ ಮನುಷ್ಯರಂತೆ ವಿಜ್ಞಾನಿಗಳೂ ದುರ್ಬಲರ ಗುಂಪಿಗೆ ಸೇರಿರುವುದರಿಂದ ಅವರ ಆಲೋಚನೆ–ಅಭಿಪ್ರಾಯಗಳು, ಬಲಿಷ್ಠರ ಧೋರಣೆ–ನಿಲುವುಗಳಿಗೆ ಅನುಸಾರವಾಗಿ ಇಲ್ಲದಿದ್ದರೆ, ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳು ಅವನ್ನು ತಮ್ಮದಾಗಿಸಿಕೊಳ್ಳದಿದ್ದರೆ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೆಂಬಲಿಸದಿದ್ದರೆ ಅವರಿಗೆ ಉಳಿಗಾಲವಿರುವುದಿಲ್ಲ. ಬಲಿಷ್ಠರ ಧೋರಣೆಯನ್ನು ಬೆಂಬಲಿಸಿ ಅವರ ದಾರಿಯನ್ನು ತುಳಿಯುವ ವಿಜ್ಞಾನಿ–ತಂತ್ರಜ್ಞಾನಿಗಳಿಗೆ ಹಣಸಹಾಯ, ಪದವಿ, ಬಿರುದು ಬಾವಲಿಗಳು, ಸ್ಥಾನಮಾನಗಳು ಸಿಗುತ್ತವೆ. ವಿರೋಧಿಸಿದರೆ ಹಣಸಹಾಯದ ನಿರಾಕರಣೆಯ ಜೊತೆಗೆ ನಾನಾ ಬಗೆಯ ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಪ್ರತಿಭಾವಂತರಾಗಿದ್ದೂ ಅವಕಾಶವಂಚಿತರಾಗಿ ಮೂಲೆಗುಂಪಾಗಬೇಕಾಗುತ್ತದೆ. ಈ ಕಾರಣಕ್ಕಾಗಿಯೇ, ದುರ್ಬಬಲರಲ್ಲಿನ ಬಹಳಷ್ಟು ಜನ ಚಿಂತಕರು, ಸಾಹಿತಿಗಳು, ಕಲಾವಿದರು ಮತ್ತು ವಿಜ್ಞಾನಿ–ತಂತ್ರಜ್ಞಾನಿಗಳು, ಬಲಿಷ್ಠರನ್ನು ಬೆಂಬಲಿಸುತ್ತಾರೆ. ಸದಾ ಅವರ ಕೃಪಾದೃಷ್ಟಿಯಲ್ಲಿರಲು ಬಯಸುತ್ತಾರೆ. ಅವರು ಕೊಡಮಾಡುವ ಹಣ–ಸಾಧನ–ಸೌಲಭ್ಯಗಳನ್ನು ಬಳಸಿಕೊಂಡು ಅವರ ಆಣತಿ–ನಿರೀಕ್ಷೆ–ನಿರ್ಧಾರಗಳಿಗನುಸಾರವಾಗಿ ದುರ್ಬಲರಿಗೆ ಮಾರಕವಾದ ಆವಿಷ್ಕಾರ–ಸಂಶೋಧನೆಗಳಲ್ಲಿ ತೊಡಗುತ್ತಾರೆ. ಜೀವಮಾರಕವಾದ ಯಾವುದೇ ಕಾಲದ ಯುದ್ಧಗಳು, ವಾಣಿಜ್ಯ–ವ್ಯಾಪಾರಗಳ ಶಿಷ್ಟ ರೂಪಗಳು ಆಯಾ ಕಾಲದ ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳ ಸಹಯೋಗವಿಲ್ಲದೆ ನಡೆಯುವುದು ಸಾಧ್ಯವೇ ಇಲ್ಲ. ಬಲಿಷ್ಠರು ಮತ್ತು ವಿಜ್ಞಾನ–ತಂತ್ರಜ್ಞಾನಗಳ ನಡುವೆ ಇರುವ ಒಳಸಂಬಂಧಗಳ ಯಾವ ಪರಿಚಯವೂ ಇಲ್ಲದೆ ಹೊರಗಿನಿಂದ ನೋಡುವವರಿಗೆ ವಿಜ್ಞಾನ–ತಂತ್ರಜ್ಞಾನಗಳೇ ಸಗಟಾಗಿ ಮಾನವತೆಗೆ ಮಾರಕವಾಗಿರುವಂತೆ, ಜನವಿರೋಧಿಯಾಗಿರುವಂತೆ ತೋರುತ್ತವೆ.

ಮನುಷ್ಯರ ಜೀವನಾಧಾರ ಅಗತ್ಯಗಳಾದ ಆಹಾರ, ವಸ್ತ್ರ, ವಸತಿ, ವಿದ್ಯೆ, ಔಷಧಿ ಮತ್ತು ನಾನಾ ವಿಧದ ಸೌಲಭ್ಯಗಳ ಸೃಷ್ಟಿಯ ಹಿಂದೆ ಮತ್ತು ನಿತ್ಯನೂತನವಾದ ಆವಿಷ್ಕಾರಗಳ ಹಿಂದೆ ವಿಜ್ಞಾನ ಮತ್ತು ತಂತ್ರಜ್ಞಾನಗಳ ಮಹತ್ತರ ಪಾತ್ರವಿದೆ. ವಸ್ತು ಮತ್ತು ಸೌಲಭ್ಯಗಳನ್ನು ಎಲ್ಲಾ ಮನುಷ್ಯರ ಬಳಕೆಗಾಗಿ, ಪ್ರಯೋಜನಗಳಿಗಾಗಿ ಸೃಷ್ಟಿಸದೆ, ವ್ಯಾಪಾರಕ್ಕಾಗಿ, ಲಾಭಗಳಿಕೆಗಾಗಿ ಸೃಷ್ಟಿಸುವಂತೆ ಸೃಜನಶೀಲರ ಮೇಲೆ ಬಲಿಷ್ಠರು ಹಾಕುವ ಒತ್ತಡದಿಂದಾಗಿ, ಸೃಜನಕ್ರಿಯೆಯ ಮೇಲಿನ ಬಲಿಷ್ಠರ ಹಿಡಿತದಿಂದಾಗಿ ವಿಜ್ಞಾನ–ತಂತ್ರಜ್ಞಾನಗಳೇ ಆಧುನಿಕ ಕಾಲದ ದುರ್ಬಲರ, ಅಥವಾ ಜನಸಾಮಾನ್ಯರ ಬದುಕಿಗೆ ಮಾರಕವಾದ, ಅಥವಾ ಅನಪೇಕ್ಷಿತವಾದ ಚಟುವಟಿಕೆಗಳಲ್ಲಿ ತೊಡಗಿರುವಂತೆ ಭಾಸವವಾಗುತ್ತದೆ.

ಬಲಿಷ್ಠರ ನಿಯಂತ್ರಣದ ಹೊರತಾಗಿಯೂ ನಮ್ಮ ಪೂರ್ವಿಕರಿಗೆ ಹೋಲಿಸಿದರೆ, ವಿಜ್ಞಾನ ತಂತ್ರಜ್ಞಾನಗಳ ಆವಿಷ್ಕಾರಗಳಿಂದಾಗಿ ಆಧುನಿಕ ಕಾಲದ ಜನಸಾಮಾನ್ಯರ ಸರಾಸರಿ ಆಯಸ್ಸು ಹೆಚ್ಚಾಗಿದೆ. ಯಾವ ಚಕ್ರವರ್ತಿಯೂ ಅನುಭವಿಸಲಾಗದಿದ್ದ ನವಿರಾದ ವಸ್ತ್ರಗಳು, ತಿನಿಸುಗಳು, ಹಣ್ಣು ತರಕಾರಿಗಳು ಇಂದು ವಿಶ್ವದ ಯಾವ ಭಾಗಕ್ಕೆ ಹೋದರೂ ಬಲಿಷ್ಠರಿಗೆ ಸಿಗುತ್ತವೆ. ವಾಣಿಜ್ಯ–ವ್ಯಾಪಾರದಿಂದಾಗಿ ಮರಳುಗಾಡಿನಲ್ಲೂ ಶುದ್ಧೀಕರಿಸಿದ ನೀರು ದೊರೆಯುತ್ತದೆ. ಆಹಾರದ ವೈವಿಧ್ಯ ಮತ್ತು ಸಮೃದ್ಧಿ ಯಾವ ಕಾಲದಲ್ಲೂ ಇಷ್ಟು ಅಗಾಧ ಪ್ರಮಾಣದಲ್ಲಿರಲಿಲ್ಲ. ಮಕ್ಕಳ ಹೆರಿಗೆಯಲ್ಲಿ ಸಾಯುತ್ತಿದ್ದ ಎಳೆ ಪ್ರಾಯದ ಹೆಣ್ಣುಮಕ್ಕಳ ಸಂಖ್ಯೆ ತುಂಬಾ ಗಣನೀಯವಾಗಿ ಕಡಿಮೆಯಾಗಿದೆ. ನೆಗಡಿಯಾದರೆ ಸಾವನ್ನಪ್ಪುತ್ತಿದ್ದ ಕಾಲ ಹೋಗಿದೆ. ವರ್ಷಕ್ಕೊಂದು ಸಲ ತಪ್ಪದೆ ದಾಳಿಯಿಟ್ಟು ನೂರಾರು ಜನರ ಪ್ರಾಣತೆಗೆದುಕೊಳ್ಳುತ್ತಿದ್ದ, ಹಣವಿದ್ದವರನ್ನೂ ಅಂಗವಿಕಲರನ್ನಾಗಿ ಮಾಡುತ್ತಿದ್ದ ಸಿಡುಬು, ಪ್ಲೇಗು, ಮಲೇರಿಯಾ, ಕಾಲರಾ ಮುಂತಾದ ಸಾಂಕ್ರಾಮಿಕ ಮತ್ತು ಮಾರಣಾಂತಿಕ ಜಾಡ್ಯಗಳು ಇಂದು ಇಲ್ಲವೇ ಇಲ್ಲವೆನ್ನುವಷ್ಟು ಕಾಣದಾಗಿವೆ. ಶ್ರೀಮಂತರನ್ನೂ ಬಿಡದೆ ಕೊಲ್ಲುತ್ತಿದ್ದ ಕ್ಷಯರೋಗವು ಇಂದು ಕಡುಬಡವರನ್ನು ಮಾತ್ರ ಬಲಿ ತೆಗೆದುಕೊಳ್ಳುವ ಆರೋಗ್ಯ ಸಮಸ್ಯೆಯಾಗಿದೆ. ಕೆಲವರಿಗೆ ಮಾತ್ರ ಸಿಗುತ್ತಿದ್ದ ಶಿಸ್ತುಬದ್ಧ ಜ್ಞಾನ ಬಲಿಷ್ಠರ ಧೋರಣೆಯ ಹೊರತಾಗಿಯೂ ಇಂದು ಬಹುಜನರಿಗೆ ಲಭ್ಯವಿದೆ. ಇವೆಲ್ಲದರ ಹಿಂದೆ ವಿಜ್ಞಾನ–ತಂತ್ರಜ್ಞಾನಗಳ ಆವಿಷ್ಕಾರಗಳಿವೆ. ಆದರೆ, ಇವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಬಲಿಷ್ಠರ ಹಿಡಿತದಲ್ಲಿರುವುದರಿಂದ, ವಾಣಿಜ್ಯ–ವ್ಯಾಪಾರದ ಸರಕುಗಳಾಗಿರುವುದರಿಂದ, ವಿಜ್ಞಾನ–ತಂತ್ರಜ್ಞಾನಗಳ ಜೀವಪೋಷಕ ಫಲಗಳು ದುರ್ಬಲರಿಗೆ ದೊರೆಯುತ್ತಿಲ್ಲ. ಇದಕ್ಕಾಗಿ ಇವುಗಳ ಮೇಲೆ ಹಿಡಿತವಿಟ್ಟುಕೊಂಡಿರುವ ಬಲಿಷ್ಠರನ್ನು ಹೊಣೆಮಾಡುವ ಬದಲು ವಿಜ್ಞಾನ–ತಂತ್ರಜ್ಞಾನಗಳನ್ನು ಹೊಣೆಮಾಡುವ ಕ್ರಮ ನಾವು ಬದುಕುವ ಸಮಾಜವು ಹೇಗೆ ಸಂಘಟಿತವಾಗಿದೆ, ಮತ್ತು ಅದರ ಬದಲಾವಣೆಯ ಚುಕ್ಕಾಣಿ ಯಾರ ನಿಯಂತ್ರಣದಲ್ಲಿದೆ ಎಂಬುದರ ಬಗ್ಗೆ ಇರುವ ಅಜ್ಞಾನದ ಫಲ.

ಇತ್ತೀಚಿನ ಉದಾಹರಣೆಯನ್ನೇ ತೆಗೆದು ಕೊಳ್ಳುವುದಾದರೆ, ಕೋವಿಡ್ ಜಾಡ್ಯದ ಮಾರಕ ಶಕ್ತಿಯ ಬಗೆಗಿನ ಜ್ಞಾನ ನೇರವಾಗಿ ವಿಜ್ಞಾನದ ಫಲ. ಕೋವಿಡ್ ಸೂಕ್ಷ್ಮಾಣುಗಳನ್ನು ಮನುಷ್ಯರ ಜೀವನಕ್ಕೆ ಮಾರಕವಾದ ಮತ್ತೊಂದು ಜೀವಿಯೆಂದು ಪರಿಶೋಧಿಸಿ, ತಮ್ಮ ಪ್ರಾಣವನ್ನೇ ಒತ್ತೆಯಾಗಿರಿಸಿ, ವೈದ್ಯಕೀಯ ಪರಿಹಾರಕ್ಕಾಗಿ ಹೆಣಗುತ್ತಿರುವ ಪರಿಣಿತರ ದೃಷ್ಟಿಕೋನ ಮತ್ತು ಆಲೋಚನಾ ಕ್ರಮಗಳನ್ನು ರೂಪಿಸಿರುವುದು ವಿಜ್ಞಾನ–ತಂತ್ರಜ್ಞಾನಗಳು. ಈ ಜಾಡ್ಯವನ್ನು ಹತೋಟಿಗೆ ತರಲು ಈವರೆಗೆ ಆವಿಷ್ಕರಿಸಲಾಗಿರುವ ಲಸಿಕೆಗಳು ವಿಜ್ಞಾನ–ತಂತ್ರಜ್ಞಾನಗಳ ನೇರ ಕೊಡುಗೆ. ಇವೆಲ್ಲದರ ನಡುವೆ ಈಗಲೂ ನಡೆಯುತ್ತಿರುವ ದುರ್ಬಲರ ನರಳಿಕೆ, ಸಾವು–ನೋವುಗಳು, ಜೀವನ ಮಟ್ಟದ ಕುಸಿತ, ಆರ್ಥಿಕ ಕಷ್ಟನಷ್ಟಗಳು, ಬಡತನ–ಹಸಿವು–ನಿರುದ್ಯೋಗಗಳ ಹಿಂದೆ, ಬಲಿಷ್ಠರ ಧೋರಣೆಗಳನ್ನು ಬೆಂಬಲಿಸುವ, ನಡಹಳ್ಳಿಯವರು ಹೇಳುವ ‘ವೈಜ್ಞಾನಿಕವಾಗಿ ಯೋಚಿಸುವವರ’ ಪರದೆಯೆಂದು ಕರೆಯುವ ಜಾಗತೀಕರಣ, ಕಾರ್ಪೊರೇಟೀಕರಣಗಳ ಅಮಾನುಷತೆ ಮತ್ತು ಅವೈಜ್ಞಾನಿಕತೆಗಳಿವೆ. ಕೋವಿಡ್‌ನ ಪರದೆಯ ಹಿಂದೆ ಬಲಿಷ್ಠರು ಮರೆಮಾಚುತ್ತಿರುವ ಜನರ ತೀರದ ಬವಣೆಗಳಿಗೆ ನೇರ ಕಾರಣ ವಿಜ್ಞಾನ–ತಂತ್ರಜ್ಞಾನಗಳಲ್ಲ. ಕೋವಿಡ್ ಜಾಡ್ಯವೂ ಅಲ್ಲ. ಬದಲು, ಕೋವಿಡ್ ಜಾಡ್ಯವನ್ನೂ, ಅದರ ಪರಿಹಾರೋಪಾಯಗಳ ಲಭ್ಯತೆ–ಅಲಭ್ಯತೆಗಳನ್ನು ಈ ಸಂಕಷ್ಟದ ಕಾಲದಲ್ಲೂ ತಮ್ಮ ಲಾಭಕ್ಕಾಗಿ ನಿಯಂತ್ರಿಸುತ್ತಿರುವ ಅಮಾನುಷ ಬಲಿಷ್ಠರು, ಮತ್ತು ಅವರ ಆರ್ಥಿಕ ಹಾಗೂ ರಾಜಕೀಯ ಹಿತಾಸಕ್ತಿಗಳು. ಇವನ್ನು ನಡಹಳ್ಳಿಯಂಥವರು ನೋಡಲಾಗದಿರುವುದಕ್ಕೆ ಕಾರಣ ವಿಜ್ಞಾನದ ಅಹಂಕಾರವಲ್ಲ, ಅವರ ಚಿಂತನಾಕ್ರಮಕ್ಕೆ ಬಲಿಷ್ಠರು ಹೊದ್ದಿಸಿರುವ ನವಿರಾದ ಬಲೆಯಾದ ಸಾಮಾಜಿಕ ಮತ್ತು ರಾಜಕೀಯ ಅಜ್ಞಾನ. ●

ಸ್ವತಂತ್ರ ವೆಬ್ ಪತ್ರಿಕೆಗಳ ಮೇಲೆ ಆದಾಯ ತೆರಿಗೆ 'ಸರ್ವೆ' ಹೆಸರಿನಲ್ಲಿ ದಾಳಿ ಸಂಪಾದಕರ ಗಿಲ್ಡ್ ಖಂಡನೆ- "ಇಂತಹ ಅಪಾಯಕಾರೀ ಪ್ರವೃತ್ತಿ ನಿಲ್ಲಬೇಕು"



ಭಾರತದ ಸಂಪಾದಕರ ವೃತ್ತಿಸಂಘ(ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯ – ಇಜಿಐ) ಸಪ್ಟಂಬರ್ 10 ರಂದು ವೆಬ್ ಸುದ್ದಿಪತ್ರಿಕೆಗಳಾದ 'ನ್ಯೂಸ್ ಕ್ಲಿಕ್' ಮತ್ತು 'ನ್ಯೂಸ್ ಲಾಂಡ್ರಿ'ಯ ಕಚೇರಿಗಳ ಮೇಲೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು 'ಸರ್ವೆ' ಎಂಬ ಹೆಸರಿನಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದೆ. ಸ್ವತಂತ್ರ ಮಾಧ್ಯಮಗಳನ್ನು ಬೆದರಿಸುವ, ಅವುಗಳಿಗೆ ಕಿರುಕುಳ ಕೊಡುವ ಒಂದು ಅಪಾಯಕಾರೀ ಪ್ರವೃತ್ತಿ ಆರಂಭವಾಗಿದೆ. ಇದು ನಿಲ್ಲಬೇಕು, ಏಕೆಂದರೆ ಇದು ಸಂವಿಧಾನಿಕ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುತ್ತದೆ ಎಂದು ಅದು ಭೀತಿ ವ್ಯಕ್ತಪಡಿಸಿದೆ. ಇವೆರಡೂ ಪತ್ರಿಕೆಗಳು ಕೇಂದ್ರ ಸರಕಾರದ ಕಾರ್ಯಪ್ರಣಾಲಿಯ ಬಗ್ಗೆ ವಿಮರ್ಶಾತ್ಮಕವಾಗಿ ವರದಿ ಮಾಡುತ್ತಿರುವ ಮಾಧ್ಯಮಗಳು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಆದಿನ ಆದಾಯ ತೆರಿಗೆ ಅಧಿಕಾರಿಗಳ ತಂಡಗಳು ಈ ಪತ್ರಿಕೆಗಳ ಕಚೇರಿಗಳಿಗೆ ಹೋಗಿ ಅಲ್ಲಿ ಇದ್ದ ಎಲ್ಲ ಪತ್ರಕರ್ತರ, ಉದ್ಯೋಗಿಗಳ ಮೊಬೈಲುಗಳು, ಲ್ಯಾಪ್‌ಟಾಪ್‌ಗಳು ಇತ್ಯಾದಿಗಳನ್ನು ತಾತ್ಕಾಲಿಕವಾಗಿ ವಶಕ್ಕೆ ತೆಗೆದುಕೊಂಡರು, ಅವರನ್ನು ಕೆಲಸ ಮಾಡಲು ಬಿಡಲಿಲ್ಲ, ಅಲ್ಲಿರುವ ಯಾರೂ ಹೊರಗೆ ಯಾರನ್ನೂ ಸಂಪರ್ಕಿಸಬಾರದು ಎಂದೂ ತಾಕೀತು ಮಾಡಿದರು. ಇಡೀ ದಿನ ತನಿಖೆ ನಡೆಸಿದರು; ನ್ಯೂಸ್ ಲಾಂಡ್ರಿಯ ಸಹಸಂಸ್ಥಾಪಕ ಅಭಿನಂದನ್ ಸೆಖ್ರಿಯವರ ಲ್ಯಾಪ್‌ಟಾಪ್‌ಗಳು ಮುಂತಾದವುಗಳಲ್ಲಿ ಇದ್ದ ಮಾಹಿತಿಗಳು, ದತ್ತಾಂಶಗಳ ಪ್ರತಿಗಳನ್ನು ತಯಾರಿಸಿಕೊಂಡರು. ಆದರೆ ನಿಯಮಗಳ ಪ್ರಕಾರ ಇವುಗಳ ಪ್ರತಿಗಳನ್ನು ಅವರಿಗೆ ನೀಡಲಿಲ್ಲ. ಅವರು ತಮ್ಮ ವಕೀಲರನ್ನು ಸಂಪರ್ಕಿಸಲೂ ಬಿಡಲಿಲ್ಲ ಎಂದು ತಿಳಿದುಬಂದಿದೆ.

ಈ ಬಗ್ಗೆ ಕೇಳಿದಾಗ ಇವು ಆದಾಯ ತೆರಿಗೆ ದಾಳಿಗಳಲ್ಲ, 'ಸರ್ವೆ'ಗಳು ಎಂದು ಆದಾಯ ತೆರಿಗೆ ಇಲಾಖೆ 'ಸ್ಪಷ್ಟೀಕರಣ' ನೀಡಿರುವುದಾಗಿ ವರದಿಯಾಗಿದೆ. ಈ ಸರ್ವೆಗಳು "ತೆರಿಗೆಗಳ್ಳತನದ ಆರೋಪಗಳ' ತನಿಖೆಗಾಗಿ, ಲೆಕ್ಕ ಪುಸ್ತಕಗಳನ್ನು ಪರೀಕ್ಷಿಸುವ ಕೆಲಸ ಎಂದು ಅವರು ಹೇಳಿದ್ದಾರೆ. ಆದರೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರಲ್ಲಿ ನಿರೂಪಿಸಿರುವ 'ಸರ್ವೆ'ಯ ವ್ಯಾಪ್ತಿಗೆ ಇವೆಲ್ಲ ಬರುವುದಿಲ್ಲ, ಇದು ಮಾಹಿತಿ ತಂತ್ರಜ್ಞಾನ ಕಾಯ್ದೆ, 2000ರ ಉಲ್ಲಂಘನೆಯೂ ಆಗುತ್ತದೆ ಎಂದು ಗಿಲ್ಡ್ ಹೇಳಿದೆ. ಪತ್ರಕರ್ತರ ಬಳಿಯಿರುವ ದತ್ತಾಂಶಗಳನ್ನು ಈ ರೀತಿಯಾಗಿ ಬೇಕಾಬಿಟ್ಟಿಯಾಗಿ ವಶಪಡಿಸಿಕೊಳ್ಳುವುದು ಅತ್ಯಂತ ಕಳವಳಕಾರಿ, ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಮತ್ತು ಪತ್ರಿಕಾ ಸ್ವಾತಂತ್ರ್ಯದ ಹರಣವೂ ಆಗುತ್ತದೆ ಎಂದೂ ಸಂಪಾದಕರ ಗಿಲ್ಡ್ ಹೇಳಿದೆ.

ಈ ಎರಡು ಪತ್ರಿಕೆಗಳ ಕಚೇರಿಗಳ ಮೇಲೆ ಕೇಂದ್ರೀಯ ಏಜೆನ್ಸಿಗಳ 'ಭೇಟಿ' ಅಥವ ದಾಳಿ ಇದೇ ಮೊದಲಲ್ಲ. ನ್ಯೂಸ್ ಕ್ಲಿಕ್‌ನ ಕಚೇರಿ ಮತ್ತು ಅದರ ಸಂಸ್ಥಾಪಕರ ನಿವಾಸಗಳಿಗೆ ಕಳೆದ ಫೆಬ್ರುವರಿಯಲ್ಲಷ್ಟೇ ಜಾರಿ ನಿರ್ದೇಶನಾಲಯ(ಇ.ಡಿ.) ದಾಳಿ ಮಾಡಿತ್ತು. ಅದು ಹಲವು ಗಂಟೆಗಳ ಕಾಲ ನಡೆಯಿತು. ಜೂನ್ ತಿಂಗಳಲ್ಲಿ ಆದಾಯ ತೆರಿಗೆ ಅಧಿಕಾರಿಗಳ ತಂಡಗಳು ನ್ಯೂಸ್ ಲಾಂಡ್ರಿ ಮತ್ತು ನ್ಯೂಸ್ ಕ್ಲಿಕ್ ಕಚೇರಿಗಳಿಗೆ 'ಭೇಟಿ' ನೀಡಿದ್ದವು.

ಇಂತಹ ಬೆದರಿಕೆಗಳಿಗೆ ತಾವು ಜಗ್ಗುವುದಿಲ, ಎಲ್ಲ ಕಾನೂನುಗಳನ್ನು ಗೌರವಯುತವಾಗಿ, ಪ್ರಾಮಾಣಿಕವಾಗಿ ಪಾಲಿಸುತ್ತಲೇ, ತಮ್ಮ ಕೆಲಸವನ್ನು ಮುಂದುವರೆಸುವುದಾಗಿ ಈ ಎರಡೂ ಪತ್ರಿಕೆಗಳ ಸಂಸ್ಥಾಪಕ ಸಂಪಾದಕರುಗಳು ಪುನರುಚ್ಚರಿಸಿದ್ದಾರೆ. "ನಾವು ನಮ್ಮ ಕೆಲಸವನ್ನು ಮುಂದುವರೆಸುತ್ತೇವೆ, ಅಧಿಕಾರಸ್ಥರ ಮುಖಕ್ಕೆ ಸತ್ಯವನ್ನು ಹಿಡಿಯುತ್ತೇವೆ" ಎಂದು ನ್ಯೂಸ್ ಕ್ಲಿಕ್‌ನ ಮುಖ್ಯ ಸಂಪಾದಕ ಪ್ರಬೀರ್ ಪುರಕಾಯಸ್ಥ ಹೇಳಿದರೆ, ನ್ಯೂಸ್ ಲಾಂಡ್ರಿಯ ಅಭಿನಂದನ್ ಸೇಖ್ರಿ "ನಮ್ಮ ಸಾರ್ವಜನಿಕ ಹಿತಾಸಕ್ತಿಯ ಪತ್ರಕಾರಿತೆಯನ್ನು ಮುಂದುವರೆಸುತ್ತೇವೆ, ನಾವು ಆರಿಸಿಕೊಂಡ, ಪ್ರತಿಪಾದಿಸುತ್ತಿರುವ ಮಾದರಿಗಳ ಬಗ್ಗೆ ನಮಗೆ ಹೆಮ್ಮೆಯಿದೆ" ಎಂದು ಹೇಳಿದ್ದಾರೆ.

ಈ ಎರಡು ಪತ್ರಿಕೆಗಳ ಮೇಲೆ ಮಾತ್ರವಲ್ಲ, ಕಳೆದ ಜೂನ್‌ನಲ್ಲಿ ಹಿಂದಿಯ ಪ್ರಮುಖ ಪತ್ರಿಕೆ 'ದೈನಿಕ್ ಭಾಸ್ಕರ್" ಮತ್ತು ಲಕ್ನೌನ ದೈನಿಕ 'ಭಾರತ್ ಸಮಾಚಾರ್' ಮೇಲೂ ಆದಾಯ ತೆರಿಗೆ ದಾಳಿಗಳು ನಡೆದವು ಎಂಬುದನ್ನೂ ಎಡಿಟರ್ಸ್ ಗಿಲ್ಡ್ ಗಮನಿಸಿದೆ. ಅವು ಸರಕಾರದ ಕೊವಿಡ್ ನಿರ್ವಹಣೆಯ ಬಗ್ಗೆ ಪ್ರಕಟಿಸಿದ ವಿಮರ್ಶಾತ್ಮಕ ವರದಿಗಳ ಹಿನ್ನೆಲೆಯಲ್ಲಿ ಈ ದಾಳಿಗಳು ನಡೆದಿದ್ದವು.

ಈ ಎಲ್ಲ ತನಿಖೆಗಳಲ್ಲಿ ಪತ್ರಕರ್ತರು ಮತ್ತು ಮಾಧ್ಯಮ ಸಂಸ್ಥೆಗಳ ಹಕ್ಕುಗಳನ್ನು ಬುಡಮೇಲು ಮಾಡದಂತೆ ಹೆಚ್ಚಿನ ಜಾಗರೂಕತೆ ಮತ್ತು ಸೂಕ್ಷ್ಮತೆಯಿಂದ ವರ್ತಿಸಬೇಕಾಗುತ್ತದೆ ಎಂದು ಆಗ್ರಹಿಸಿರುವ ಗಿಲ್ಡ್, ಇಂತಹ ತನಿಖೆಗಳನ್ನು ನಿರೂಪಿತ ನಿಯಮಗಳ ವ್ಯಾಪ್ತಿಯೊಳಗೇ ಮಾಡಬೇಕು, ಅವು ಸ್ವತಂತ್ರ ಮಾಧ್ಯಮಗಳನ್ನು ಬೆದರಿಸುವ, ಅವುಗಳಿಗೆ ಕಿರುಕುಳ ಕೊಡುವ ಮಟ್ಟಕ್ಕೆ ಇಳಿಯಬಾರದು ಎಂದು ಹೇಳಿದೆ.

ದಿಲ್ಲಿ ಪತ್ರಕರ್ತರ ಸಂಘದ ಖಂಡನೆ

ದಿಲ್ಲಿ ಪತ್ರಕರ್ತರ ಸಂಘ (ಡಿಯುಜೆ)ವೂ ಈ ಕುರಿತು ಒಂದು ಹೇಳಿಕೆಯನ್ನು ನೀಡಿ ಆನ್‌ಲೈನ್ ಮಾಧ್ಯಮಗಳನ್ನು ಬೆದರಿಸುವ, ತಲೆಬಾಗುವಂತೆ ಮಾಡುವ ನಾಚಿಕೆಗೇಡಿ ಪ್ರಯತ್ನಗಳಿವು ಎಂದು ಖಂಡಿಸಿದೆ.

ಈ ಮೊದಲು ದೈನಿಕ್ ಭಾಸ್ಕರ್ ಮತ್ತು ಭಾರತ್ ಸಮಾಚಾರ್ ಮೇಲಿನ ಆದಾಯ ತೆರಿಗೆ ಇಲಾಖೆಯ ದಾಳಿಗಳನ್ನು ಮತ್ತು ಇತ್ತೀಚೆಗೆ ಉತ್ತರಪ್ರದೇಶದಲ್ಲಿ ಪ್ರಶಸ್ತಿ ವಿಜೇತ ಪತ್ರಕರ್ತೆ ರಾನಾ ಅಯ್ಯೂಬ್ ಮೇಲೆ ಕೊವಿಡ್ ಪರಿಹಾರಕ್ಕೆ ಧನಸಂಗ್ರಹ ನಡೆಸಿದ್ದಕ್ಕೆ ಎಫ್‌ಐಆರ್ ಹಾಕಿರುವುದು, ಈ ವಾರವೇ ತ್ರಿಪುರಾದಲ್ಲಿ ಬಿಜೆಪಿ ಕಾರ್ಯಕರ್ತರು ಸಿಪಿಐ(ಎಂ) ಕಚೇರಿಗಳ ಮೇಲೆ ಮಾತ್ರವಲ್ಲ, ಪಿಬಿ24, ಪ್ರತಿಬಾದಿ ಕಲಮ್, ಕಲಮೇರ್ ಶಕ್ತಿ, ಡೈಲಿ ದೇಶೇರ್ ಕಥಾ ಮತ್ತು ದುರಂತ್ ಟಿವಿ ಈ ಮಾಧ್ಯಮಗಳ ಮೇಲೆ ಹಿಂಸಾತ್ಮಕ ದಾಳಿಗಳನ್ನು ನಡೆಸಿರುವುದನ್ನು ಕೂಡ ಡಿಯುಜೆಯ ಅಧ್ಯಕ್ಷ ಎಸ್.ಕೆ.ಪಾಂಡೆ ಮತ್ತು ಪ್ರಧಾನ ಕಾರ್ಯದರ್ಶಿ ಸುಜಾತಾ ಮಧೋಕ್ ನೀಡಿರುವ ಹೇಳಿಕೆ ಖಂಡಿಸಿದೆ. ಅಪಾಯಕಾರಿ ಪ್ರವೃತ್ತಿಯನ್ನು ಪ್ರದರ್ಶಿಸಿರುವ ಈ ದೊಂಬಿಕಾರರ ವಿರುದ್ಧ ಕಾನೂನು ಕ್ರಮಗಳನ್ನು ಕೈಗೊಳ್ಳುವುದಲ್ಲದೆ, ಈ ಮಾಧ್ಯಮಗಳಿಗೆ ಆಗಿರುವ ಭೌತಿಕ ಹಾನಿಗಳಿಗೆ ಸೂಕ್ತ ಪರಿಹಾರ ಕೊಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಕೊವಿಡ್‌ನಿಂದಾಗಿ ಮಕ್ಕಳಿಗೆ ಕಲಿಕೆ ನಷ್ಟ, ಕಲಿಕೆಯ ಸಾಮರ್ಥ್ಯದಲ್ಲಿ ಇಳಿಕೆ

ಕೊವಿಡ್–19 ಶಾಲಾ ಶಿಕ್ಷಣ ರಂಗದ ಮೇಲೆ ಭಾರೀ ದುಷ್ಪರಿಣಾಮ ಉಂಟು ಮಾಡಿದೆ, ಈ ಅವಧಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕೇವಲ 8% ಮತ್ತು ನಗರ ಪ್ರದೇಶಗಳಲ್ಲಿ 25% ವಿದ್ಯಾರ್ಥಿಗಳಿಗೆ ಮಾತ್ರ ನಿಯಮಿತ ಶಿಕ್ಷಣ ಲಭ್ಯವಾಗಿದ್ದು, ಒಟ್ಟಾರೆಯಾಗಿ, ಸುಮಾರು ಒಂದು ವರ್ಷದ 'ಕಲಿಕೆ ನಷ್ಟ' ಮತ್ತು ಇದರಿಂದಾಗಿ ವಿದ್ಯಾರ್ಥಿಗಳ ಅಕ್ಷರ ಮತ್ತು ಅಂಕ ಕಲಿಕೆ ಎರಡೂ ಮಟ್ಟಗಳಲ್ಲಿ ತೀವ್ರ ಇಳಿಕೆಯಾಗಿದೆ ಎಂದು ಕಂಡು ಬಂದಿದೆ.

ಸುಮಾರು ಒಂದೂವರೆ ವರ್ಷದಿಂದ ಮುಚ್ಚಿದ್ದ ಶಾಲೆಗಳನ್ನು ಹಂತ-ಹಂತವಾಗಿ ತೆರೆಯಲಾಗುತ್ತಿದೆ. ಈ ವೇಳೆಗೆ ಇದರಿಂದಾಗಿರುವ ದುಷ್ಪರಿಣಾಮದ ಕುರಿತ ಎರಡು ಸರ್ವೆ ವರದಿಗಳು ಈಗ ಪ್ರಕಟವಾಗಿವೆ: ಒಂದು, ಪ್ರಥಮ್ ಎಂಬ ಸಂಸ್ಥೆ ನಡೆಸುವ ಶಿಕ್ಷಣದ ವಾರ್ಷಿಕ ಸ್ಥಾನಮಾನ ವರದಿ (ASER- ಏಸರ್) ಇದು ಕರ್ನಾಟಕದಲ್ಲಿ ನಡೆಸಿರುವ ಸರ್ವೆ. ಇನ್ನೊಂದು ಕರ್ನಾಟಕವೂ ಸೇರಿದಂತೆ 15 ರಾಜ್ಯಗಳಲ್ಲಿ ಸಂಶೋಧಕರು ಪ್ರಖ್ಯಾತ ಅರ್ಥಶಾಸ್ತ್ರಜ್ಞ ಜೀನ್ ಡ್ರೇಝ್‌ರೊಂದಿಗೆ ನಡೆಸಿರುವ ಅಧ್ಯಯನ– ಶಾಲಾಮಕ್ಕಳ ಆನ್‌ಲೈನ್ ಮತ್ತು ಆಫ್ ಲೈನ್ ಕಲಿಕೆ(ಇಂಗ್ಲಿಷ್ ನಲ್ಲಿ ಸಂಕ್ಷಿಪ್ತವಾಗಿ SCHOOL- 'ಸ್ಕೂಲ್').

ಕರ್ನಾಟಕದಲ್ಲಿ ಈ ವರ್ಷ ಪ್ರಾಥಮಿಕ ತರಗತಿಗಳಲ್ಲಿ ವಿದ್ಯಾರ್ಥಿಗಳ ಅಕ್ಷರ ಮತ್ತು ಅಂಕ ಕಲಿಕೆ ಮಟ್ಟಗಳಲ್ಲಿ ತೀವ್ರ ಇಳಿಕೆಯಾಗಿದೆ ಎಂದು ಏಸರ್ ವರದಿ ಹೇಳುತ್ತದೆ. ಮೊದಲನೆ ತರಗತಿಯ 42.6% ವಿದ್ಯಾರ್ಥಿಗಳಲ್ಲಿ ಅಂಕೆಗಳನ್ನು ಗುರುತಿಸುವ ಸಾಮರ್ಥ್ಯದ ಕೊರತೆ ಕಂಡು ಬಂದರೆ 56.8% ವಿದ್ಯಾರ್ಥಿಗಳಲ್ಲಿ ಅಕ್ಷರಗಳನ್ನು ಗುರುತಿಸುವ ಸಾಮರ್ಥ್ಯದ ಕೊರತೆ ಕಂಡು ಬಂದಿದೆ. ಇದು 2018ರಲ್ಲಿ 40% ಇತ್ತು. ಇನ್ನೂ ಆತಂಕದ ಸಂಗತಿಯೆಂದರೆ ರಾಜ್ಯಾದ್ಯಂತ ವಿದ್ಯಾರ್ಥಿಗಳ ನಡುವೆ ಸುಮಾರು ಒಂದು ವರ್ಷದ 'ಕಲಿಕೆ ನಷ್ಟ' ಕಂಡು ಬರುತ್ತಿದೆ.

ಬುನಾದಿ ಮಟ್ಟದ ಕೌಶಲ್ಯಗಳಲ್ಲಿ ಇಂತಹ ಇಳಿಕೆ ಪ್ರಾಥಮಿಕ ಶಿಕ್ಷಣದ ಎಲ್ಲ ಹಂತಗಳಲ್ಲೂ ಕಂಡು ಬಂದಿದೆ.

ಕೊವಿಡ್–19 ಬಾಧಿಸಿದ ನಂತರ ಈ ವರ್ಷದ ಆರಂಭದಲ್ಲಿ ಪ್ರಥಮ್ ಎಂಬ ಸಂಸ್ಥೆ ನಡೆಸಿದ ಈ ಸರ್ವೆಯಲ್ಲಿ ರಾಜ್ಯದ 24 ಜಿಲ್ಲೆಗಳಲ್ಲಿ 13,365 ಕುಟುಂಬಗಳ 5ರಿಂದ 16 ವಯೋಗುಂಪಿನ 18,385 ಸರಕಾರಿ ಮತ್ತು ಖಾಸಗಿ ಶಾಲೆಗಳ ವಿದ್ಯಾರ್ಥಿಗಳನ್ನು ಸಂಪರ್ಕಿಸಲಾಗಿತ್ತು.

2018ರಲ್ಲಿ ಎರಡನೇ ತರಗತಿಯ ಪಠ್ಯವನ್ನು ಓದಬಲ್ಲ 8ನೇ ತರಗತಿಯ ವಿದ್ಯಾರ್ಥಿಗಳ ಪ್ರಮಾಣ 70% ಇದ್ದರೆ, ಈಗ 2021ರಲ್ಲಿ ಅದು 66%ಕ್ಕೆ ಇಳಿದಿದೆ. ಕೇವಲ 9.8% 3ನೇ ತರಗತಿ ವಿದ್ಯಾರ್ಥಿಗಳು 2ನೇ ತರಗತಿ ಪಠ್ಯವನ್ನು ಓದಬಲ್ಲವರಾಗಿದ್ದಾರೆ. 2018ರಲ್ಲಿ ಇದು 19.2% ಇತ್ತು. 5ನೇ ತರಗತಿ ಮತ್ತು 8ನೇ ತರಗತಿಯ ಮಟ್ಟಗಳಲ್ಲೂ ಕಲಿಕೆಯ ಕೌಶಲದ ಮಟ್ಟಗಳಲ್ಲಿ ಇಂತಹ ಇಳಿಕೆ ಕಂಡುಬಂದಿದೆ ಎಂದು ಈ ವರದಿ ಹೇಳುತ್ತದೆ.

ಅಂಕಾ ಜ್ಞಾನದಲ್ಲಂತೂ ಕಲಿಕೆಯ ಮಟ್ಟದಲ್ಲಿ ಇಳಿಕೆ ಇನ್ನೂ ಹೆಚ್ಚು. ಒಂದನೇ ತರಗತಿಯಲ್ಲಿ ಅಂಕೆಗಳನ್ನು ಗುರುತಿಸಲಾರದ ವಿದ್ಯಾರ್ಥಿಗಳ ಪ್ರಮಾಣ 2018ರಲ್ಲಿ 29.7%ವಿತ್ತಷ್ಟೇ. ಈಗ ಅದು 42.6%ಕ್ಕೇ ಏರಿದೆ.

ಮೂರನೇ ತರಗತಿಯ 17.3% ವಿದ್ಯಾರ್ಥಿಗಳು ಮಾತ್ರವೇ ಕಳೆಯುವ ಲೆಕ್ಕ ಮಾಡಬಲ್ಲರು. 2018ರಲ್ಲಿ ಇದು 26.3% ಇತ್ತು. 8ನೇ ತರಗತಿ ವಿದ್ಯಾರ್ಥಿಗಳಲ್ಲೂ ಭಾಗಾಕಾರ ಮಾಡಬಲ್ಲವರ ಪ್ರಮಾಣ 38.9% ಮಾತ್ರ.

'ಕಲಿಕೆ ನಷ್ಟ'ದೊಂದಿಗೆ ಕಲಿಕಾ ಸಾಮರ್ಥ್ಯದಲ್ಲಿ ಹಿನ್ನಡೆಯೂ ಉಂಟಾಗುತ್ತದೆ ಎಂಬುದು ಬಹಳಷ್ಟು ಶಾಲಾ ವರದಿಗಳಲ್ಲಿ ಕಂಡು ಬಂದಿದೆ ಎಂದು ಶಿಕ್ಷಣ ತಜ್ಞರು ಹೇಳುತ್ತಾರೆ. ಆದ್ದರಿಂದ ಕೊವಿಡ್ ನಂತರ ಶಾಲೆಗಳು ಪುನರಾರಂಭದ ನಂತರ ಶಿಕ್ಷಕರ ಮೇಲೆ ಎಂದಿನ ಪಠ್ಯಕ್ರಮವನ್ನು ಪೂರ್ಣಗೊಳಿಸಲೇ ಬೇಕೆಂಬ ಒತ್ತಡ ಹಾಕಬಾರದು, ಬದಲಿಗೆ ಮುಂದಿನ ಎರಡು ವರ್ಷಗಳಿಗೆ ಪಠ್ಯಕ್ರಮವನ್ನು ಮರುಯೋಜಿಸುವ ತುರ್ತು ಅಗತ್ಯವಿದೆ ಎಂದು ಅವರು ಹೇಳುತ್ತಾರೆ.


'ಆನ್‌ಲೈನ್' ಪ್ರಶ್ನೆಗಳು

'ಸ್ಕೂಲ್' ಅಧ್ಯಯನದ ಪ್ರಕಾರ ನಗರಪ್ರದೇಶಗಳಲ್ಲಿ 25% ಮಕ್ಕಳಿಗೆ ನಿಯಮಿತವಾಗಿ ಆನ್‌ಲೈನ್ ತರಗತಿಗಳು ಲಭ್ಯವಾಗಿದ್ದರೆ, 16%ಕ್ಕೆ ಕೆಲವೊಮ್ಮೆ ಇದು ಲಭ್ಯವಾಗುತ್ತಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ಕೇವಲ 8% ಮಕ್ಕಳಿಗೆ ನಿಯಮಿತವಾಗಿ, ಇನ್ನು 8% ಮಕ್ಕಳಿಗೆ ಕೆಲವೊಮ್ಮೆ ಆನ್ ಲೈನ್ ತರಗತಿಗಳು ಲಭ್ಯವಾಗಿದೆ. ನಿಯಮಿತವಾಗಿ ಖಾಸಗಿ ಟ್ಯೂಷನ್ ಪಡೆದವರ ಪ್ರಮಾಣ ನಗರಪ್ರದೇಶಗಳಲ್ಲಿ 24%ವಿದ್ದರೆ, ಗ್ರಾಮೀಣ ಪ್ರದೇಶಗಳಲ್ಲಿ 14%. ಒಟ್ಟಾರೆಯಾಗಿ ನಗರಪ್ರದೇಶಗಳಲ್ಲಿ 47% ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 28% ಮಕ್ಕಳು ಮಾತ್ರ ನಿಯಮಿತ ತರಗತಿಗಳ ಪ್ರಯೋಜನ ಪಡೆಯಲು ಆನ್‌ಲೈನ್ ಮೂಲಕ ಸಾಧ್ಯವಾಗಿದೆ. ನಗರಪ್ರದೇಶಗಳಲ್ಲಿ 19% ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 37% ಈ ಕೊವಿಡ್ ಕಾಲದಲ್ಲಿ ಯಾವುದೇ ಶಿಕ್ಷಣವನ್ನು ಪಡೆಯಲಿಲ್ಲ. ಆನ್‌ಲೈನ್ ತರಗತಿಗಳಿಗೆ ಹಾಜರಾದವರಲ್ಲಿಯೂ ಬಹುಪಾಲು ಮಕ್ಕಳಿಗೆ ಸಂಪರ್ಕದ ಸಮಸ್ಯೆಗಳು ಎದುರಾದವು, ಅದರಿಂದಾಗಿ ತರಗತಿಗಳಿಂದ ಪ್ರಯೋಜನ ಪಡೆಯುವುದು ಕಷ್ಟಕರವಾಗಿತ್ತು.

ದಲಿತ ಮತ್ತು ಆದಿವಾಸಿ ಕುಟುಂಬಗಳ ಮಕ್ಕಳು ಈ ಕೊವಿಡ್ ಕಾಲದಲ್ಲಿ ಅತಿ ಹೆಚ್ಚು ಬಾಧಿತರಾಗಿದ್ದಾರೆ. ಕೇವಲ 5% ಮಕ್ಕಳಿಗೆ ಆನ್‌ಲೈನ್ ಸೌಕರ್ಯ ಲಭ್ಯವಾಗಿದೆ ಎಂದು ಈ ವರದಿ ಹೇಳುತ್ತದೆ.

ಶಾಲೆಗಳು ಮುಚ್ಚಿದ್ದರಿಂದ ಶಿಕ್ಷಣದ ಮೇಲಷ್ಟೇ ಅಲ್ಲ, ಪೌಷ್ಟಿಕತೆಯ ಮೇಲೂ ದುಷ್ಪರಿಣಾಮ ಉಂಟಾಗಿರುವುದು ಕೂಡ ಕಂಡು ಬಂದಿದೆ. ಏಕೆಂದರೆ ಈ ಸರ್ವೆ ನಡೆಸಿದ ಎಲ್ಲ ರಾಜ್ಯಗಳಲ್ಲೂ ಶಾಲೆ ಮುಚ್ಚುವುದರೊಂದಿಗೆ ಮಧ್ಯಾಹ್ನದ ಊಟವೂ ನಿಂತು ಹೋಗಿದೆ.

ಭಾರತದಲ್ಲಿ ಶಾಲೆಗಳ ಲಾಕ್‌ಡೌನ್ ಅವಧಿ ಇಡೀ ಜಗತ್ತಿನಲ್ಲೇ ಅತಿ ದೀರ್ಘಕಾಲದ್ದಾಗಿದ್ದು, ಇದು ಅಪಾರ ವಿಪತ್ತನ್ನು ತಂದಿದೆ ಎನ್ನುವ ಈ ವರದಿ ಕೂಡ ಈ ಹಾನಿಯನ್ನು ತುಂಬಲು ಹಲವು ವರ್ಷಗಳ ಶ್ರಮದ ಅಗತ್ಯವಿದೆ ಎಂದಿದೆ. ಪುನರಾರಂಭ ಮೊದಲ ಹೆಜ್ಜೆಯಷ್ಟೇ. ಈ ಬಗ್ಗೆಯೂ ಇನ್ನೂ ಚರ್ಚೆ ನಡೆಯುತ್ತಿದೆ. ಹೆಚ್ಚಿನ ರಾಜ್ಯಗಳಲ್ಲಿ ಈ ಮೊದಲನೇ ಹೆಜ್ಜೆಗೂ ಸರಿಯಾದ ಸಿದ್ಧತೆಗಳು, ಅಂದರೆ, ಶಾಲಾ ಕಟ್ಟಡಗಳ ರಿಪೇರಿ, ಸುರಕ್ಷಾ ಮಾರ್ಗನಿರ್ದೇಶನಗಳು, ಶಿಕ್ಷಕರ ತರಬೇತಿ, ಶಾಲೆಗೆ ಸೇರಿಸುವ ಅಭಿಯಾನ ಇತ್ಯಾದಿಗಳು ಕಾಣಿಸುತ್ತಲೂ ಇಲ್ಲ ಎಂದು ಈ ಅಧ್ಯಯನ ಹೇಳುತ್ತದೆ.



"ಟೀಚರ್ ಹೇಳುತ್ತಾರೆ ಶಿಕ್ಷಣ ಮಾತ್ರವೇ ಬಡತನವನ್ನು ಕೊನೆಗೊಳಿಸುತ್ತದೆ ಅಂತ"

"ಬಡತನದಲ್ಲಿ ಆನ್‌ಲೈನ್ ಶಿಕ್ಷಣ ಹೇಗೆ ಪಡೆಯುವುದು ಎಂದು ಅವರನ್ನು ಕೇಳುತ್ತೀಯಾ?"

ವ್ಯಂಗ್ಯಚಿತ್ರ: ಅಲೋಕ್ ನಿರಂತರ್, ಫೇಸ್‌ಬುಕ್

ಇದು ಸಾರ್ವಜನಿಕ ಆಸ್ತಿಗಳ ಮಾರಾಟ ಪರ್ವ!



ವಿಮಾನ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು, ಬಂದರುಗಳು, ಕ್ರೀಡಾಂಗಣಗಳು ಮತ್ತು ರಸ್ತೆಗಳಷ್ಟೇ ಅಲ್ಲ, ಜೀವ ಉಳಿಸುವ ಲಸಿಕೆಯೂ ಇನ್ನೊಂದು ಸರಕು; ಐತಿಹಾಸಿಕ ಜಲಿಯನ್‌ವಾಲಾ ಬಾಗ್ ಮತ್ತು ವಾರಣಾಸಿಯ ವಿಶ್ವನಾಥ ದೇವಾಲಯ ಕೂಡ ಪ್ರವಾಸಿಗರನ್ನು ಆಕರ್ಷಿಸುವ ಸರಕು. ಬಹಿಷ್ಕಾರವನ್ನು ಒಳಗೊಂಡಿರುವ ಇಂತಹ ಸರಕೀಕರಣದ ಪ್ರತಿಯೊಂದು ಕ್ರಿಯೆಯೂ ಪೌರತ್ವದ ವ್ಯಾಪ್ತಿಯನ್ನು ಕುಗ್ಗಿಸುತ್ತದೆ. ಹೀಗೆ ಪ್ರಸ್ತುತ ಸರ್ಕಾರವು ನಾಗರಿಕರ ಸಮಾನ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಬದಲಾಗಿ ಆರ್ಥಿಕ ವರ್ಗಭೇದವನ್ನು ಹೇರುವ ಸರಕೀಕರಣದ ಭರಾಟೆಯನ್ನು ಪ್ರಾರಂಭಿಸಿದೆ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ವಿಶ್ವದ ಎಲ್ಲೆಡೆ ಒಂದು ಪೈಸೆಯನ್ನೂ ಕೊಡದೆ ಜನರು ಕೊರೊನಾ ವಿರುದ್ಧ ಲಸಿಕೆ ಪಡೆದರು; ಆದರೆ ಭಾರತದಲ್ಲಲ್ಲ. ವಿಶ್ವದ ಎಲ್ಲೆಡೆ, ರಾಷ್ಟ್ರ ಎಂಬುದನ್ನು ನಿರೂಪಿಸುವ, ಒಂದು ರಾಷ್ಟ್ರದ ಪ್ರಜ್ಞೆಯಲ್ಲಿ ಹಾಸು-ಹೊಕ್ಕಾಗಿರುವ ಚಾರಿತ್ರಿಕ ಹೆಗ್ಗುರುತುಗಳನ್ನು, ಪವಿತ್ರವೆಂದು ಭಾವಿಸಿ ಅವುಗಳನ್ನು ಅವುಗಳ ಮೂಲ ರೂಪದಲ್ಲಿಯೇ ಹಾಗೆಯೇ ಉಳಿಸಿಕೊಳ್ಳಲಾಗಿದೆ; ಆದರೆ ಭಾರತದಲ್ಲಿ ಹಾಗಿಲ್ಲ. ವಿಶ್ವದ ಎಲ್ಲೆಡೆ, ಮೂಲಭೂತ ಸೇವೆಗಳನ್ನು ಒದಗಿಸುವ ಸಾರ್ವಜನಿಕ ಸ್ವತ್ತುಗಳು ಜನರ ಬಳಕೆಗೆ ಸಿಗುತ್ತವೆ ಮತ್ತು ಸಾಂಸ್ಕೃತಿಕ-ಶೈಕ್ಷಣಿಕ ಸೇವೆಗಳು ಮುಕ್ತವಾಗಿ ದೊರೆಯುತ್ತವೆ; ಆದರೆ ಭಾರತದಲ್ಲಿ ಇನ್ನು ಮುಂದೆ ದೊರೆಯವು. ಭಾರತದ ಈ ವಿಲಕ್ಷಣ ಅಪವಾದಾತ್ಮಕತೆಯಲ್ಲಿ ಎಲ್ಲವನ್ನೂ ವ್ಯಾಪಾರದ ಸರಕನ್ನಾಗಿ ಕಾಣುವ ಮೋದಿ ಸರ್ಕಾರದ ವಿಚಿತ್ರ ಕಾರ್ಯಸೂಚಿಯಿದೆ. ಇಲ್ಲಿ ಯಾವುದೂ ಪವಿತ್ರವಲ್ಲ, ಯಾರೂ ಮಹಾತ್ಮರಲ್ಲ, ಯಾರೂ ಸಂತರಲ್ಲ ಮತ್ತು ಮಾರುಕಟ್ಟೆಗಿಂತಲೂ ಶ್ರೇಷ್ಠವಾದದ್ದು ಏನೂ ಇಲ್ಲ. ಎಲ್ಲವೂ ಮಾರಾಟದ ವಸ್ತುಗಳೇ. ಎಲ್ಲ ಸಾರ್ವಜನಿಕ ಆಸ್ತಿಗಳನ್ನೂ ಮಾರಾಟಕ್ಕಿಡಲಾಗಿದೆ. ಇದು ಮಾರಾಟ ಪರ್ವ.

ಮೇಲೆ ಹೇಳಿದ ಮೂರೂ ಉದಾಹರಣೆಗಳನ್ನು ಒಂದೊಂದಾಗಿ ಕಿರು-ವಿವರಗಳೊಂದಿಗೆ ನೋಡೋಣ. ಈ ಹಿಂದೆ ಖಾಸಗಿ ಆಸ್ಪತ್ರೆಗಳು ಜನರಿಗೆ ಲಸಿಕೆ ಹಾಕಿದಾಗ, ಸೇವಾ ಶುಲ್ಕವಾಗಿ 250 ರೂ.ಗಳನ್ನು ಪಡೆಯುತ್ತಿದ್ದರು. ಲಸಿಕೆ ಪಡೆಯಲು ಜನರು ಹಣ ಕೊಡುವ ಪರಿಸ್ಥಿತಿಯೇ ಉಂಟಾಗದಂತೆ ಸರ್ಕಾರ ನೋಡಿಕೊಳ್ಳಬಹುದಿತ್ತಾದರೂ, ಜನರು ಕೊಡಲಾರದಷ್ಟು ದೊಡ್ಡ ಮೊತ್ತವೂ ಆಗಿರಲಿಲ್ಲ ಅದು. ಆದರೆ, ಈಗ ಲಸಿಕೆ ಹಾಕಿಸಿಕೊಳ್ಳಲು ಖಾಸಗಿ ಆಸ್ಪತ್ರೆಗಳಿಗೆ ಭಾರಿ ಮೊತ್ತವನ್ನೇ ಕೊಡಬೇಕಾಗಿದೆ. ಕೋವಿಶೀಲ್ಡ್-780ರೂ, ಕೊವಾಕ್ಸಿನ್-1,410 ರೂ, ಮತ್ತು ಸ್ಪುಟ್ನಿಕ್ ವಿ-1,145 ರೂ. ಶುಲ್ಕ ವಿಧಿಸಲು ಅನುಮತಿ ನೀಡಲಾಗಿದೆ. ಏಕೆಂದರೆ, ಅವರಿಗೆ ಇನ್ನು ಮುಂದೆ ಈ ಲಸಿಕೆಗಳು ಸರಕಾರದಿಂದ ಉಚಿತವಾಗಿ ಲಭ್ಯವಾಗುವುದಿಲ್ಲ. ಲಸಿಕೆಗಳನ್ನು ಖಾಸಗಿ ಆಸ್ಪತ್ರೆಗಳಿಗೆ ಉಚಿತವಾಗಿ ಒದಗಿಸದ ಸರ್ಕಾರವು ತೊಂಭತ್ತರಲ್ಲಿ ತೊಗರಿಬೇಳೆಯೂ ಒಂದು ಎನ್ನುವ ಹಾಗೆ ಜೀವ ಉಳಿಸುವ ಲಸಿಕೆಗಳನ್ನೂ ಸಹ ಇನ್ನೊಂದು ಸರಕು ಎಂಬಂತೆ ವ್ಯವಹರಿಸುತ್ತಿದೆ.

ಅದೇ ರೀತಿಯ ಸರಕೀಕರಣದ ಮನೋಭಾವವನ್ನು ಜಲಿಯನ್‌ವಾಲಾ ಬಾಗ್‌ಅನ್ನು ಸುಂದರಗೊಳಿಸುವ ಯೋಜನೆಯಲ್ಲೂ ಕಾಣಬಹುದು. ಒಂದು ಭೀಕರ ಹತ್ಯಾಕಾಂಡ ನಡೆದ ಜಲಿಯನ್ ವಾಲಾಬಾಗ್ ಸ್ಥಳವನ್ನು ಸುಂದರವಾಗಿ ಕಾಣುವ ಒಂದು ತಾಣವಾಗಿ ಪರಿವರ್ತಿಸಲಾಗಿದೆ. ಭಾರತದ ವಸಾಹತುಶಾಹಿ ವಿರೋಧಿ ಹೋರಾಟವು ಒಂದು ನಿರ್ಣಾಯಕ ತಿರುವು ಪಡೆಯಲು ಕಾರಣವಾದ ಆ ದುರಂತಮಯ ಘಟನೆಯು ನವ ಭಾರತವು ಅಸ್ತಿತ್ವಕ್ಕೆ ಬರುವಲ್ಲಿ ಮಹತ್ವದ ಪಾತ್ರ ವಹಿಸಿತು. ಜಲಿಯನ್‌ವಾಲಾ ಬಾಗ್‌ನಲ್ಲಿ ಸೇರಿದ್ದ ಸಾವಿರಾರು ಶಾಂತಿಯುತ ಪ್ರದರ್ಶನಕಾರರ ಮೇಲೆ ತಮ್ಮ ಬಂದೂಕಿನಲ್ಲಿದ್ದ ಗುಂಡುಗಳು ಖಾಲಿಯಾಗುವವರೆಗೂ ಗುಂಡು ಹಾರಿಸಿ ಪ್ರದರ್ಶನಕಾರರನ್ನು ಹೊಡೆದುರುಳಿಸುವಂತೆ ಜನರಲ್ ಡಯರ್ ತನ್ನ ಪಡೆಗಳಿಗೆ ಆದೇಶಿಸಿದ್ದ. ಸಾವಿರಾರು ಮಂದಿ ಹುತಾತ್ಮರಾದ ಆ ನೆಲವು ಪ್ರತಿ ಭಾರತೀಯರಿಗೂ ಈಗಲೂ ಧನ್ಯತೆಯ ನೆಲವೇ. ಅದನ್ನು ಮುಟ್ಟದೆ ಇದ್ದ ಹಾಗೆಯೇ ಇರಲು ಬಿಡಬೇಕಾಗಿತ್ತು. ಈ ಸಂದರ್ಭದಲ್ಲಿ, ಸೆನೆಗಲ್‌ನ ಡಕಾರ್ ಕರಾವಳಿಯ ಗೋರೆ ದ್ವೀಪದ ಒಂದು ಉದಾಹರಣೆಯನ್ನು ನೋಡಬಹುದು. ಹದಿನೈದು ಮತ್ತು ಹತ್ತೊಂಭತ್ತನೆಯ ಶತಮಾನಗಳ ನಡುವಿನ ಅವಧಿಯಲ್ಲಿ ಈ ದ್ವೀಪವು ಗುಲಾಮರ ವ್ಯಾಪಾರ ಕೇಂದ್ರವಾಗಿತ್ತು. ಇಲ್ಲಿಂದಲೇ ಲಕ್ಷಾಂತರ ಗುಲಾಮರನ್ನು ಅಮೆರಿಕಕ್ಕೆ ಸಾಗಿಸಲಾಗಿತ್ತು. ಈ ದ್ವೀಪವನ್ನು ವಿಶ್ವ ಪಾರಂಪರಿಕ (ಹೆರಿಟೇಜ್) ಕೇಂದ್ರವೆಂದು ಘೋಷಿಸಲಾಗಿದೆ. ವರ್ಣಭೇದದ ವಿರುದ್ಧ ಹೋರಾಡಿದ ಧೀಮಂತ ನಾಯಕ ಮತ್ತು ದಕ್ಷಿಣ ಆಫ್ರಿಕಾದ ಅಧ್ಯಕ್ಷರೂ ಆಗಿದ್ದ ನೆಲ್ಸನ್ ಮಂಡೇಲಾ ಅಲ್ಲಿಗೆ ಭೇಟಿ ನೀಡಿದಾಗ, ಅಲ್ಲಿನ ಕಟ್ಟಡಗಳನ್ನು, ಸೈನಿಕರ ವಾಸದ ಬ್ಯಾರಕ್‌ಗಳನ್ನು ಮತ್ತು ಕರಿಯರನ್ನು ಕೂಡಿ ಹಾಕುತ್ತಿದ್ದ ನೆಲ ಮಾಳಿಗೆಯ ಬಂದೀಖಾನೆ'ಗಳನ್ನು(ಡಂಜನ್‌ಗಳನ್ನು) ಕಂಡಾಗ ಅವರ ಕಣ್ಣಲ್ಲಿ ನೀರು ತುಂಬಿತ್ತು. ಇವೆಲ್ಲವನ್ನೂ ಆ ಹೃದಯವಿದ್ರಾವಕ ಗುಲಾಮ ಸಾಗಣೆಗಳು ಸಂಭವಿಸಿದಾಗ ಹೇಗಿದ್ದವೊ ಹಾಗೆಯೇ ಉಳಿಸಿಕೊಳ್ಳಲಾಗಿದೆ. ಆದರೆ, ಭಾರತದಲ್ಲಿ, ಇದ್ದಕ್ಕಿದ್ದಂತೆ ಅಧಿಕಾರಕ್ಕೇರಿದ ಸರ್ಕಾರವು ಐತಿಹಾಸಿಕ ಜಲಿಯನ್‌ವಾಲಾ ಬಾಗ್‌ಅನ್ನು "ಸುಂದರಗೊಳಿಸಿದೆ", ಹೆಚ್ಚು ವಿದೇಶಿ ಪ್ರವಾಸಿಗರನ್ನು ಆಕರ್ಷಿಸಬಹುದು ಎಂಬ ಕಲ್ಪನೆಯೊಂದಿಗೆ. ಇದೊಂದು ಸಂಪೂರ್ಣವಾಗಿಯೂ ತಪ್ಪು ಕಲ್ಪನೆ ಎಂಬುದರಲ್ಲಿ ಸಂದೇಹವಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಜಲಿಯನ್‌ವಾಲಾ ಬಾಗ್‌ಅನ್ನು ಒಂದು ಸರಕನ್ನಾಗಿ ಮಾಡಲಾಗಿದೆ ಮತ್ತು ಅದರ ಸರಕು ಆಯಾಮವು ಅದು ರಾಷ್ಟ್ರದಲ್ಲಿ ಪವಿತ್ರ ಸ್ಥಾನ ಹೊಂದಿದೆ ಎಂಬುದಕ್ಕಿಂತಲೂ ಹೆಚ್ಚಿನ ಆದ್ಯತೆ ಪಡೆದಿದೆ.

ಅದೇ ರೀತಿಯ ಸರಕೀಕರಣದ ಮನೋಭಾವವನ್ನು ವಾರಣಾಸಿಯ ವಿಶ್ವನಾಥ ದೇವಾಲಯಕ್ಕೆ ಹೋಗುವ ಇಕ್ಕಟ್ಟಿನ ಮೂಲ ರಸ್ತೆಯನ್ನು ಸುಂದರಗೊಳಿಸುವ ವಿಧಾನದಲ್ಲೂ ಕಾಣಬಹುದು. ಈ ಐತಿಹಾಸಿಕ ರಸ್ತೆಯನ್ನು ತುಸು ಅಗಲಗೊಳಿಸಲು ಭಾರತದ ಪ್ರಾಚೀನ ನಗರದಲ್ಲಿದ್ದ ಹಳೆಯ ಕಾಲದ ಮನೆಗಳು ಮತ್ತು ಅನೇಕ ಸಣ್ಣ ಸಣ್ಣ ದೇವಾಲಯಗಳನ್ನು ಕೆಡವಲಾಯಿತು. ಈ ಧ್ವಂಸದ ಹಿಂದಿದ್ದ ಆಲೋಚನೆ ಎಂದರೆ, ವಿಶ್ವನಾಥ ದೇವಾಲಯವನ್ನು ಮತ್ತು ಅದರ ಅಕ್ಕಪಕ್ಕದ ಪ್ರದೇಶವನ್ನು ಪ್ರವಾಸಿಗಳು, ಅದರಲ್ಲೂ ವಿಶೇಷವಾಗಿ ವಿದೇಶಿ ಪ್ರವಾಸಿಗಳು ಸುಲಭವಾಗಿ ತಲುಪುವಂತೆ ಮಾಡುವುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ದೇವಾಲಯವನ್ನೂ ಒಂದು ಸರಕನ್ನಾಗಿ ಪರಿವರ್ತಿಸುವುದೇ ಈ ಧ್ವಂಸದ ಉದ್ದೇಶವಾಗಿತ್ತು.

ಈಗ, ವಿಮಾನ ನಿಲ್ದಾಣಗಳಿಂದ ಹಿಡಿದು ರೈಲ್ವೆ ನಿಲ್ದಾಣಗಳು, ಬಂದರುಗಳು, ಕ್ರೀಡಾಂಗಣಗಳು ಮತ್ತು ರಸ್ತೆಗಳವರೆಗೆ ಎಲ್ಲ ರೀತಿಯ ಸಾರ್ವಜನಿಕ ಸ್ವತ್ತುಗಳನ್ನೂ "ನಗದೀಕರಿಸು"ವ ಪ್ರಯತ್ನಗಳು ನಡೆಯುತ್ತಿವೆ. ಅಂದರೆ, ಈ ಸಾರ್ವಜನಿಕ ಸ್ವತ್ತುಗಳನ್ನು ಸರಕುಗಳೆಂದು ಬಗೆದು ಅವುಗಳನ್ನು ಕೈಗಾರಿಕಾ ಸಂಸ್ಥೆಗಳನ್ನು ನಿರ್ವಹಿಸುತ್ತಿರುವ ಖಾಸಗಿ ವ್ಯಕ್ತಿ/ಸಂಸ್ಥೆಗಳ ಕೈಯಲ್ಲಿ ಇಡಲಾಗುವುದು. "ನಗದೀಕರಣ"ವು ಖಾಸಗೀಕರಣದಿಂದ ಭಿನ್ನವಾಗಿದೆ ಎಂದು ಹಣಕಾಸು ಸಚಿವರು ಭಾವೋದ್ವೇಗದಿಂದ ಕೂಡಿದ ವಾದವನ್ನು ಮಂಡಿಸುತ್ತಾರೆ. ಈ ವಾದವು ಒಂದು ಶುದ್ಧ ಕುತರ್ಕವೇ ಸರಿ. "ನಗದೀಕರಣ" ಎಂದರೆ ಸಾರ್ವಜನಿಕ ಆಸ್ತಿಯನ್ನು ಒಂದು ನಿರ್ದಿಷ್ಟ ಅವಧಿಗೆ ಖಾಸಗಿ ವ್ಯಕ್ತಿ/ಸಂಸ್ಥೆಗಳ (ಆಪರೇಟರ್) ಕೈಯಲ್ಲಿ ಇಡುವುದು ಎಂದೇ ಅರ್ಥ. ನಿರ್ಧರಿತ ಅವಧಿಯ ಕೊನೆಯಲ್ಲಿ ಈ ಸಾರ್ವಜನಿಕ ಆಸ್ತಿಯು ಸರ್ಕಾರದ ವಶಕ್ಕೆ ಮರಳಿ ಬಂದರೂ ಸಹ (ಈ ಅವಧಿಯಲ್ಲಿ ಆಸ್ತಿಯ ಮೇಲೆ ಒಬ್ಬ ಭೋಗ್ಯದಾರನು ಮಾಡಿದ ಹೂಡಿಕೆಗಳ ಮೌಲ್ಯಕ್ಕೆ ಸಂಬಂಧಿಸಿದಂತೆ ಉದ್ಭವಿಸುವ ಹಲವಾರು ಸಮಸ್ಯೆಗಳನ್ನು ಇತ್ಯರ್ಥಪಡಿಸಬೇಕಾಗುತ್ತದೆ), ಅದನ್ನು ಬಹುಶಃ ಅದೇ ಭೋಗ್ಯದಾರನಿಗೆ ಅಥವಾ ಬೇರೊಬ್ಬನಿಗೆ ಒಂದು ನಿಗದಿತ ಬೆಲೆಯ ಮೇಲೆ ಹಿಂತಿರುಗಿಸಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ "ನಗದೀಕರಣ"ವು ಒಂದೇ ಬಾರಿಗೆ ಮಾಡುವ ಮಾರಾಟದ ಬದಲು, ಮಾಡುವ ಅಲ್ಪಾವಧಿಯ ಮಾರಾಟದ ಸಾಲು ಎನ್ನಬಹುದಾದಕ್ಕಿಂತ ಭಿನ್ನವಾಗಿರುವುದಿಲ್ಲ. ಹಾಗಿದ್ದರೂ ಸಹ, ಪರಿಣಾಮದ ದೃಷ್ಟಿಯಲ್ಲಿ ನೋಡಿದಾಗ ಅದು ಮಾರಾಟವೇ ಸರಿ.

ಸ್ಥೂಲ-ಅರ್ಥಶಾಸ್ತ್ರೀಯ ಪರಿಭಾಷೆಯಲ್ಲಿ ಹೇಳುವುದಾದರೆ, ಸಾರ್ವಜನಿಕ ಸ್ವತ್ತುಗಳ "ನಗದೀಕರಣ"ವು, ಒಂದು ವಿತ್ತೀಯ ಕೊರತೆಯ ಮೂಲಕ ಸರ್ಕಾರದ ಹೆಚ್ಚಿನ ವೆಚ್ಚಗಳಿಗೆ ಹಣ ಹೊಂದಿಸಿಕೊಳ್ಳುವುದಕ್ಕಿಂತ ಭಿನ್ನವೇನೂ ಅಲ್ಲ. ವಿತ್ತೀಯ ಕೊರತೆಗೆ ಒಳಗಾದ ಸಂದರ್ಭದಲ್ಲಿ ಸರ್ಕಾರವು ಆಸ್ತಿಗಳನ್ನು (ಅಂದರೆ, ಕಾಗದ-ಪ್ರತಗಳ ಮೂಲಕ ತನ್ನ ಮೇಲಿನ ಕೇಳಿಕೆಗಳ ಹಕ್ಕನ್ನು) ಖಾಸಗಿಯವರ ಕೈಯಲ್ಲಿ ಇಡುತ್ತದೆ. ಹಾಗೆ ಮಾಡಿದ್ದರ ಬದಲಾಗಿ ಪಡೆದ ಹಣವನ್ನು ಅದು ಖರ್ಚು ಮಾಡುತ್ತದೆ. "ನಗದೀಕರಣ"ದ ಸಂದರ್ಭದಲ್ಲಿ ಅದು ಸ್ವತ್ತುಗಳನ್ನು (ಅಂದರೆ, ರಸ್ತೆಗಳು, ರೈಲ್ವೆ ಪ್ಲಾಟ್‌ಫಾರ್ಮ್‌ಗಳು ಇತ್ಯಾದಿ ಆಸ್ತಿಗಳನ್ನು) ಖಾಸಗಿಯವರ ಕೈಯಲ್ಲಿ ಇಡುತ್ತದೆ. ಹಾಗೆ ಮಾಡಿದ್ದರ ಬದಲಾಗಿ ಪಡೆದ ಹಣವನ್ನು ಖರ್ಚು ಮಾಡುತ್ತದೆ. ಒಟ್ಟು ಅರ್ಥವ್ಯವಸ್ಥೆಯಲ್ಲಿ, ಈ ಎರಡು ವಿಧಾನಗಳ ನಡುವಿನ ವ್ಯತ್ಯಾಸವು, ಖಾಸಗಿಯವರ ಕೈಗೆ ನೀಡುವ ಸ್ವತ್ತುಗಳ ಸ್ವರೂಪಕ್ಕೆ ಮಾತ್ರ ಸಂಬಂಧಿಸಿರುವಂತದ್ದು. ಉಳಿದ ವಿಷಯಗಳಿಗೆ ಸಂಬಂಧಿಸಿದಂತೆ, ಸರ್ಕಾರಕ್ಕೆ ಹಣ ಒದಗಿಸುವ ಈ ಎರಡೂ ವಿಧಾನಗಳ (ವಿತ್ತೀಯ ಕೊರತೆಯ ಅಥವಾ 'ನಗದೀಕರಣ'ದ ವಿಧಾನದ) ಪರಿಣಾಮಗಳೂ ಒಂದೇ ರೀತಿಯಲ್ಲಿರುತ್ತವೆ.

ತನ್ನ ವೆಚ್ಚಗಳಿಗೆ ಸರ್ಕಾರವು ಹಣ ಹೊಂದಿಸಿಕೊಳ್ಳುವ ಮಟ್ಟಿಗೆ ವಿತ್ತೀಯ ಕೊರತೆ ಅಥವಾ ಸಾರ್ವಜನಿಕ ಸ್ವತ್ತುಗಳ "ನಗದೀಕರಣ" ಈ ಎರಡೂ ವಿಧಾನಗಳ ಪರಿಣಾಮಗಳು ತಕ್ಷಣದಲ್ಲಿ ಒಂದೇ ರೀತಿಯಲ್ಲಿದ್ದರೂ ಸಹ, ನಂತರದ ದಿನಗಳಲ್ಲಿ ಜರುಗುವ ವಿದ್ಯಮಾನಗಳು ಒಂದೇ ರೀತಿಯಲ್ಲಿರುವುದಿಲ್ಲ. ಸಾರ್ವಜನಿಕ ಆಸ್ತಿಯನ್ನು ಭೋಗ್ಯಕ್ಕೆ ಪಡೆದ ಖಾಸಗಿಯವರು ಅನುಸರಿಸುವ ರೀತಿ-ನೀತಿಗಳು ಮತ್ತು ಕಾರ್ಯವೈಖರಿಯಿಂದಾಗಿ ಅರ್ಥವ್ಯವಸ್ಥೆಯ ಮೇಲೆ ಬೀಳುವ ಪರಿಣಾಮಗಳು, ವಿತ್ತೀಯ ಕೊರತೆಯ ಪರಿಣಾಮಗಳಿಗೆ ಹೋಲಿಸಿದರೆ, ತುಂಬಾ ಕೆಟ್ಟದಾಗಿರುತ್ತವೆ. ಏಕೆಂದರೆ, ಸಾರ್ವಜನಿಕ ಆಸ್ತಿಯನ್ನು ಭೋಗ್ಯಕ್ಕೆ ಪಡೆದ ಖಾಸಗಿಯವರು ಅದರಿಂದ ಲಾಭ ಗಳಿಸುವ ಏಕೈಕ ಉದ್ದೇಶದಿಂದ ಮಾತ್ರ ಆ ಅಸ್ತಿಯನ್ನು ಭೋಗ್ಯಕ್ಕೆ ಪಡೆದಿರುತ್ತಾರೆ. ಹೆಚ್ಚಿನ ಲಾಭ ಪಡೆಯಲು ಬಳಕೆ ಶುಲ್ಕಗಳನ್ನು ಹೆಚ್ಚಿಸುತ್ತಾರೆ ಮತ್ತು ಆಸ್ತಿಯನ್ನು ನಿರ್ವಹಿಸುವ ಕಾರ್ಮಿಕರ ಸಂಬಳಗಳನ್ನು ಇಳಿಸುತ್ತಾರೆ. ಈ ಕ್ರಮಗಳು ಅರ್ಥವ್ಯವಸ್ಥೆಯಲ್ಲಿ ಸರಾಸರಿ ಲಾಭದ ಪ್ರಮಾಣವನ್ನು ಏರಿಸುತ್ತವೆ. ಅಂದರೆ, ವೇತನಗಳ ಪಾಲು ಲಾಭದತ್ತ ಹೊರಳುತ್ತವೆ. ಸಂಬಳಗಳನ್ನೇ ಹೆಚ್ಚಾಗಿ ಅವಲಂಬಿಸಿರುವವರ ಬಳಕೆ-ಆದಾಯದ ಅನುಪಾತವು ಲಾಭ ಗಳಿಕೆಯೇ ಮುಖ್ಯವಾಗಿರುವವರಿಗಿಂತ ಹೆಚ್ಚಿಗೆ ಇರುತ್ತದೆ. ಅಂದರೆ ಸಂಬಳಗಳ ಪ್ರಮಾಣ ಕಡಿಮೆಯಾದರೆ ಒಟ್ಟು ಅರ್ಥವ್ಯವಸ್ಥೆಯಲ್ಲಿ ಬಳಕೆಯ ಮಟ್ಟವೂ ಇಳಿಯುತ್ತದೆ. ಇದರಿಂದಾಗಿ ಒಟ್ಟಾರೆ ಹೂಡಿಕೆಯ ಮಟ್ಟವು ಎಷ್ಟೇ ಉನ್ನತ ಮಟ್ಟದಲ್ಲಿರಲಿ, ಬಳಕೆಯ ಮಟ್ಟದಲ್ಲಿ ಇಳಿಕೆಯಾದರೆ, ಈ ಇಳಿಕೆಯ ಪರಿಣಾಮವಾಗಿ ಒಟ್ಟು ಅರ್ಥವ್ಯವಸ್ಥೆಯಲ್ಲಿನ ಬೇಡಿಕೆಯೂ ತಗ್ಗುತ್ತದೆ. ಹಾಗಾಗಿ, ತನ್ನ ವೆಚ್ಚಗಳಿಗಾಗಿ ಸರ್ಕಾರವು "ನಗದೀಕರಣ" ವಿಧಾನದ ಮೂಲಕ ಹಣ ಹೊಂದಿಸಿಕೊಳ್ಳುವ ಕ್ರಮವು, ಉಳಿದ ವಿಧಾನಗಳಿಗೆ, ಅಂದರೆ, ವಿತ್ತೀಯ ಕೊರತೆ ಅಥವಾ ಲಾಭದ ಮೇಲಿನ ತೆರಿಗೆ ಅಥವಾ ಸಂಪತ್ತು ತೆರಿಗೆಯ ಮೂಲಕ ಹೊಂದಿಸಿಕೊಳ್ಳುವ ವಿಧಾನಗಳಿಗೆ

ಪುಟ 14 ನೋಡಿ



ನಾನು ಮಾರಿಲ್ಲ, ಪ್ರಿಯೇ, ನಗದೀಕರಿಸಿದೆ ಅಷ್ಟೇ!
ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ



Vacate this place... the government has leased the footpath to this gentleman!

ಈ ಜಾಗ ಖಾಲಿ ಮಾಡಿ--ಸರಕಾರ ಈ ಫುಟ್‌ಪಾತನ್ನು ಈ ಮಹಾನುಭಾವನಿಗೆ ಭೋಗ್ಯಕ್ಕೆ ಕೊಟ್ಟಿದೆ!
ವ್ಯಂಗ್ಯಚಿತ್ರಕೃಪೆ; ಸುಭಾನಿ, ಡೆಕ್ಕನ್ ಕ್ರಾನಿಕಲ್

ಹಿಂಸಾಚಾರದ ತಂತ್ರಗಳಿಂದ ಪ್ರತಿಭಟನೆಗಳನ್ನು ಬಗ್ಗುಬಡೆಯಲು ಸಾಧ್ಯವಿಲ್ಲ



ಪುಟ 2 ರಿಂದ

ಕಚೇರಿಗಳ ಮೇಲೂ ಹಲ್ಲೆಗಳು ನಡೆದಿವೆ. ಹಲವು ಅಡ್ವೊಕೇಟ್‌ಗಳ ಮೇಲೂ ಗೂಂಡಾದಾಳಿಗಳು ನಡೆದಿವೆ. "ಇಂತಹ ಘಟನೆಗಳಲ್ಲೆಲ್ಲ ಹಲ್ಲೆಕೋರರು ಜೈಶ್ರೀರಾಮ್ ಘೋಷಣೆ ಕೂಗುತ್ತಾರೆ" ಎಂದು ಯೆಚುರಿ ಪತ್ರಕರ್ತರಿಗೆ ಹೇಳಿದರು. "ಇದೊಂದು ರಾಜಕೀಯ ಕೃತ್ಯ, ನಾವು ಇದನ್ನು ಎದುರಿಸುತ್ತೇವೆ. ಜನಗಳನ್ನು ಇಂತಹ ತಂತ್ರಗಳಿಂದ ಬಗ್ಗುಬಡಿಯಲು ಸಾಧ್ಯವಿಲ್ಲ" ಎಂದು ಅವರು ಹೇಳಿದರು.

ಈ ಹಿಂಸಾಚಾರಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಪ್ರಧಾನ ಮಂತ್ರಿಗಳ ಕಚೇರಿಗೆ ಕಳಿಸಿದ ಪತ್ರ ಕೈಸೇರಿದೆ ಎಂದು ಕೂಡ ಇದುವರೆಗೆ ತಿಳಿಸಿಲ್ಲ. ಮೂರು ದಿನಗಳ ಹಿಂದೆ ಕೇಂದ್ರದ ಮಧ್ಯಪ್ರವೇಶವನ್ನು ಆಗ್ರಹಿಸಿ ರಾಷ್ಟ್ರಪತಿಗಳಿಗೆ ಬರೆದಿರುವ ಪತ್ರಕ್ಕೂ ಯಾವುದೇ ಸ್ಪಂದನೆಯಿಲ್ಲ. ಪ್ರಧಾನ ಮಂತ್ರಿಗಳ ಕಚೇರಿಯ ಮೌನ ಇದು ರಾಜ್ಯದಲ್ಲಿ ಪ್ರತಿಪಕ್ಷಗಳನ್ನು ಬಗ್ಗುಬಡಿಯುವ ಆಳುವ ಪಕ್ಷದ ಕಾರ್ಯತಂತ್ರ ಎಂಬುದನ್ನು ಸೂಚಿಸುತ್ತದೆ. ಅವರಿಂದ ಸ್ಪಂದನೆ ಸಿಗದಿದ್ದರೆ, ನಾವು ಜನರ ಬಳಿಗೆ ಹೋಗುತ್ತೇವೆ, ಬಿಜೆಪಿಯ ಆಳ್ವಿಕೆ ಎಂದರೆ ಏನು ಎಂದು ಜನರಿಗೆ ತಿಳಿಸುತ್ತೇವೆ ಎಂದು ಯೆಚುರಿ ಹೇಳಿದರು.

ಜನಗಳಿಂದ ದೂರ ಮಾಡುವ ಹುನ್ನಾರ

ಆಳುವ ಪಕ್ಷದ ಮಂದಿ ಸಿಪಿಐ(ಎಂ) ಮುಖಂಡರು ಮತಪ್ರದರ್ಶನಗಳನ್ನು, ಸಾರ್ವಜನಿಕ ಸಭೆಗಳನ್ನು ನಡೆಸದಂತೆ ತಡೆಯುತ್ತಿದ್ದಾರೆ. ಕಳೆದ 42 ತಿಂಗಳಲ್ಲಿ ಕನಿಷ್ಟ 15 ಬಾರಿ ತನ್ನ ಚುನಾವಣಾ ಕ್ಷೇತ್ರಕ್ಕೆ ಹೋಗದಂತೆ ತಡೆದಿದ್ದಾರೆ ಎಂದು ಮಾಣಿಕ್ ಸರ್ಕಾರ್ ಪತ್ರಕರ್ತರಿಗೆ ತಿಳಿಸಿದರು. ಇತ್ತೀಚಿನ ಒಂದು ಘಟನೆಯಲ್ಲಿ ಪೋಲೀಸರೇ ಅವರನ್ನು ಸಿಪಾಹಿಜಾಲದ ಬಶ್ಪುಕುರ್‌ಗೆ ಪ್ರಯಾಣ ಮಾಡದಂತೆ ತಡೆಯಲು ಪ್ರಯತ್ನಿಸಿದರು. ಆದರೂ ತಮ್ಮ ಕಾರ್ಯಕರ್ತರು ನಡೆದೇ ತಲುಪಲು ನೆರವಾದರು ಎಂದು ಅವರು ಹೇಳಿದರು.

ಮೂವರು ಶಾಸಕರೂ ಸೇರಿದಂತೆ ಇತರ ಸಿಪಿಐ(ಎಂ) ಮುಖಂಡರನ್ನೂ ಇದೇ ರೀತಿಯಲ್ಲಿ ತಡೆಯಲಾಗುತ್ತಿದೆ. ಅಗರ್ತಲಾದ ಹೊರಗೆ ಎಲ್ಲಿಗೂ ಭೇಟಿ ನೀಡದಂತೆ ರಾಜ್ಯ ಸರಕಾರ ಪೋಲೀಸನ್ನು ಬಳಸುತ್ತಿದೆ. "ಅವರು ನಮ್ಮನ್ನು ತ್ರಿಪುರಾದ ಜನತೆಯಿಂದ, ನಮಗೆ ಮತ ನೀಡಿ ಹರಸಿದವರಿಂದ ಕೂಡ ದೂರ ಮಾಡಲು ಪ್ರಯತ್ನಿಸುತ್ತಿದ್ದಾರೆ. ಆದರೆ ಅದು ಕೆಲಸ ಮಾಡದು. ನಾವು ಅವರಿಗೆ ಮತನೀಡಿದ ತಪ್ಪು ಅರಿವಾಗಿರುವ ಜನಗಳ ಬಳಿ ಹೋಗಿಯೇ ಹೋಗುತ್ತೇವೆ" ಎಂದು ಮಾಣಿಕ್ ಸರ್ಕಾರ್ ಹೇಳಿದರು. ರಾಜ್ಯದ ಜನತೆಗೆ ಈಗ ಮಾನವ ಹಕ್ಕುಗಳ ರಕ್ಷಣೆ ಇಲ್ಲ. ಆಳುವ ಪಕ್ಷ ಸಿಪಿಐ(ಎಂ) ಮತ್ತು ಎಡಪಕ್ಷಗಳು ಜನಗಳನ್ನು ಅವರ ಜ್ವಲಂತ ಸಮಸ್ಯೆಗಳ ಮೇಲೆ ಅಣಿನೆರೆಸದಂತೆ ತಡೆಯಲು ಸರ್ವಪ್ರಯತ್ನ ನಡೆಸಿದ್ದಾರೆ.


"ಅವರ ಹಿಂಸಾಚಾರಕ್ಕೆ ಕಾರಣ, ಅವರು ಆಶ್ವಾಸನೆಗಳೇನೋ ಕೊಟ್ಟಿದ್ದಾರೆ, ಅದರೆ ಅವುಗಳ ಈಡೇರಿಕೆ ಸೊನ್ನೆಯೂ ಅಲ್ಲ, ಅದಕ್ಕೂ ಕೆಳಗೆ. ಅವರು ತ್ರಿಪುರಾದಲ್ಲಿ ಎಲ್ಲರನ್ನೂ, ನಗರದ ಬಡವರನ್ನು, ಹಳ್ಳಿಯ ಬಡವರನ್ನು, ನಿರುದ್ಯೋಗಿಗಳನ್ನು, ತಾಯಂದಿರನ್ನು, ಸೋದರಿಯರನ್ನು, ಶಿಕ್ಷಕರನ್ನು ಎಲ್ಲರನ್ನೂ ವಂಚಿಸಿದ್ದಾರೆ" ಎಂದ ಮಾಣಿಕ್ ಸರ್ಕಾರ್, ಜನಗಳನ್ನು ತಲುಪದಂತೆ ಸಿಪಿಐ(ಎಂ)ನ್ನು ತಡೆಯುವ ಅವರ ಹುನ್ನಾರ ಈಡೇರುವುದಿಲ್ಲ, ಏಕೆಂದರೆ ಸಿಪಿಐ(ಎಂ) ಆರಂಭದಿಂದಲೇ ಉದ್ಯೋಗ, ಭದ್ರತೆ ಮತ್ತು ಜೀವನೋಪಾಯಗಳ ಪ್ರಶ್ನೆಗಳನ್ನು ಎತ್ತುತ್ತ ಬಂದಿದೆ ಎಂದು ಅವರು ಹೇಳಿದರು.

ಅಂತರ್ರಾಷ್ಟ್ರೀಯ ಸೌಹಾರ್ದ

ಗ್ರೀಸ್, ಜರ್ಮನ್ ಮತ್ತು ಸ್ಪೇನಿನ ಕಮ್ಯುನಿಸ್ಟ್ ಪಕ್ಷಗಳು ಮತ್ತು ಅಮೆರಿಕದ ಡೆಮಾಕ್ರಾಟ್ ಸೋಶಲಿಸ್ಟರು ತ್ರಿಪುರಾದಲ್ಲಿನ ಹಿಂಸಾಚಾರವನ್ನು ಖಂಡಿಸುತ್ತ ಭಾರತದ, ಅದರಲ್ಲೂ ತ್ರಿಪುರಾದ ಕಮ್ಯುನಿಸ್ಟ್ ಮತ್ತು ಪ್ರಗತಿಪರ ಶಕ್ತಿಗಳೊಂದಿಗೆ ಸೌಹಾರ್ದ ವ್ಯಕ್ತಪಡಿಸಿದ್ದಾರೆ.

"ಮಹಿಳಾ ಮೀಸಲಾತಿ ಮಸೂದೆಗೆ 25 ವರ್ಷಗಳು ಈಗಲಾದರೂ ಪಾಸು ಮಾಡಲೇ ಬೇಕು"

ಪುಟ 2 ರಿಂದ



ಇದನ್ನು ಲೋಕಸಭೆಯಲ್ಲಿ ತಕ್ಷಣವೇ ಮಂಡಿಸಿ ಪಾಸು ಮಾಡಬೇಕು ಎಂದು ಮಹಿಳಾ ಸಂಘಟನೆಗಳು ಆಗ್ರಹಿಸಿವೆ.

2010ರಲ್ಲಿ ರಾಜ್ಯ ಸಭೆ ಇದನ್ನು ಅಂಗೀಕರಿಸಿತ್ತು. ಲೋಕಸಭೆಯಲ್ಲಿ ಇನ್ನೊಮ್ಮೆ ಮಂಡಿಸಲು 11 ವರ್ಷಗಳಿಂದ ಕಾಯುತ್ತಿದ್ದೇವೆ ಎಂದು ಈ ಸಂಘಟನೆಗಳು ಹೇಳಿವೆ.

ಪಂಚಾಯತುಗಳು ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿಗಳು ಮಹಿಳೆಯರು ಸಾರ್ವಜನಿಕ ರಂಗವನ್ನು ಪ್ರವೇಶಿಸಲು ಅವಕಾಶ ಕಲ್ಪಿಸಿ ಕೊಟ್ಟಿವೆ. ಇದರಿಂದಾಗಿ ಹಲವು ಮಹಿಳಾ ಪ್ರಶ್ನೆಗಳು ಪಂಚಾಯತುಗಳು ಮತ್ತು ಸ್ಥಳೀಯ ಸಂಸ್ಥೆಗಳ ಅಜೆಂಡಾಕ್ಕೆ ಬಂದಿವೆ. ಇವುಗಳ ಸಕಾರಾತ್ಮಕ ಅನುಭವಗಳನ್ನು ಬಲಪಡಿಸಬೇಕು.

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಸರಕಾರಗಳೆಲ್ಲ ಒಂದಿಲ್ಲೊಂದು ನೆಪವೊಡ್ಡಿ 25 ವರ್ಷಗಳ ಕಾಲ ವಿಳಂಬ ಮಾಡಿವೆ. ಮೋದಿ ಸರಕಾರ 33ಶೇ.ವಲ್ಲ 50ಶೇ. ಮೀಸಲಾತಿಯನ್ನೇ ಕೊಡುತ್ತೇವೆ ಎಂದು ಹೇಳಿತ್ತು. ಆದರೆ ಅದೂ ಇತರ ಹಲವು ವಿಷಯಗಳಂತೆ ಕೇವಲ ಬೊಗಳೆ ಎಂದು ಸಾಬೀತಾಗಿದೆ. ಏಕೆಂದರೆ ಒಬ್ಬ ಬಿಜೆಪಿ ಮುಖ್ಯಮಂತ್ರಿ, ಯೋಗಿ ಆದಿತ್ಯನಾಥ ಮನುಸ್ಮೃತಿಯನ್ನು ಉಲ್ಲೇಖಿಸುತ್ತ ಮಹಿಳೆ ಒಬ್ಬ ಪುರುಷನ ಹತೋಟಿಯಲ್ಲಿರಬೇಕು ಎಂದಿರುವುದು ದಾಖಲಾಗಿದೆ.

ಒಮ್ಮತದ ಅಭಾವವಿದೆ ಎನ್ನುವುದು ಈ ಸರಕಾರಗಳು ಒಡ್ಡುವ ನೆಪ. ಯಾವುದೇ ಒಮ್ಮತವಿಲ್ಲದೆ ವಿವಾದಾತ್ಮಕ ಕಾರ್ಮಿಕ ಸಂಹಿತೆಗಳನ್ನು, ಕೃಷಿ ಕಾಯ್ದೆಗಳನ್ನು ಪಾಸು ಮಾಡಿಸಿಕೊಂಡ ಸರಕಾರ ಮಹಿಳಾ ಮಸೂದೆಗೆ ಮಾತ್ರವೇ ಒಮ್ಮತ ಬೇಕೆಂದು ಕೇಳುವುದು ಏಕೆ ಎಂದು ಈ ಸಂಘಟನೆಗಳು ಮೋದಿ ಸರಕಾರವನ್ನು ಪ್ರಶ್ನಿಸುತ್ತಿವೆ.

"ಸಂಸತ್ತಿನಲ್ಲಿರುವ ಎಲ್ಲ ಪಕ್ಷಗಳು ಒಟ್ಟು ಸೇರಿ ಲೋಕಸಭೆಯಲ್ಲಿ ಈ 33% ಮಹಿಳಾ ಮೀಸಲಾತಿ ಮಸೂದೆಯನ್ನು ತಕ್ಷಣವೇ ಅಂಗೀಕರಿಸಬೇಕು. ಈ 33% ದೊಳಗೆ ಪರಿಶಿಷ್ಟ ಜಾತಿಗಳು/ಬುಡಕಟ್ಟುಗಳು, ಒಬಿಸಿ, ತೃತೀಯಲಿಂಗಿಗಳು ಇತ್ಯಾದಿ ಎಲ್ಲರನ್ನೂ ಒಳಗೊಳ್ಳುವುದಕ್ಕೆ ಬದ್ಧರಾಗಿದ್ದೇವೆ. ಈ ಮಸೂದೆಯನ್ನು ವಿರೋಧಿಸುವವರೆಲ್ಲರೂ ಈ ಬಗ್ಗೆ ಭಯ ಬಿಟ್ಟು ನಮ್ಮ ದೇಶದಲ್ಲಿ ಮಹಿಳಾ ಹಕ್ಕುಗಳು ಮತ್ತು ಸಮಾನತೆಯನ್ನು ಬೆಂಬಲಿಸಬೇಕು. ಸರಕಾರ ಲೋಕಸಭೆಯಲ್ಲಿ ಇದನ್ನು ಮಂಡಿಸಿ ಮತಕ್ಕೆ ಹಾಕಬೇಕು ಎಂದು ನಾವು ಆಗ್ರಹಿಸುತ್ತೇವೆ" ಎಂದು ಈ ಸಂಘಟನೆಗಳು ಹೇಳಿವೆ. ಎಐಡಿಡಬ್ಲ್ಯುಎ, ಎಐಪಿಡಬ್ಲ್ಯುಎ, ಎನ್‌ಎಫ್‌ಐಡಬ್ಲ್ಯು, ವೈಡಬ್ಲ್ಯುಸಿಎ ಸೇರಿದಂತೆ 9 ಸಂಘಟನೆಗಳ ಮುಖಂಡರು ಈ ಜಂಟಿ ಹೇಳಿಕೆಗೆ ಸಹಿಹಾಕಿದ್ದಾರೆ.

ಸಾರ್ವಜನಿಕ ಆಸ್ತಿಗಳ ಮಾರಾಟ ಪರ್ವ!

ಪುಟ 13 ರಿಂದ

ಹೋಲಿಸಿದರೆ, ಅರ್ಥವ್ಯವಸ್ಥೆಯ ವಿಸ್ತರಣೆಯ ಪ್ರಮಾಣವನ್ನು ಕುಗ್ಗಿಸುತ್ತದೆ. ಉತ್ಪಾದನಾ ಸಾಮರ್ಥ್ಯ ದೊಡ್ಡ ಪ್ರಮಾಣದಲ್ಲಿ ಬಳಕೆಯಾಗದೇ ಉಳಿದಿರುವ ಮತ್ತು ನಿರುದ್ಯೋಗದ ಭಾರಗಳಿಂದ ನಲುಗುತ್ತಿರುವ ಒಂದು ಅರ್ಥವ್ಯವಸ್ಥೆಯಲ್ಲಿ, ನಗದೀಕರಣದ ವಿಧಾನವು ಕಂಡಿತವಾಗಿಯೂ ತುಂಬಾ ಕೀಳು ಮಟ್ಟದ್ದಾಗಿ ಪರಿಣಮಿಸುತ್ತದೆ. ಅದೂ ಅಲ್ಲದೆ, ಈ ವಿಧಾನವು ಆದಾಯ ಹಂಚಿಕೆಯ ವಿಷಯದಲ್ಲಂತೂ ತಿರೋಗಾಮಿ ಯಾಗಿರುವುದು ಅದರಲ್ಲಿರುವ ಮುಖ್ಯ ದೋಷವೇ ಆಗಿದೆ.

ಈ ಎಲ್ಲಾ ದುಷ್ಪರಿಣಾಮಗಳನ್ನೂ ಉಂಟುಮಾಡುವುದರ ಜೊತೆಗೆ, ಈ "ನಗದೀಕರಣ" ವಿಧಾನವು ಹಣಕಾಸಿನ ಆಚೆಗೂ ವ್ಯಾಪ್ತಿಯುಳ್ಳ, ಪ್ರಧಾನವಾಗಿ ಪ್ರಜಾಪ್ರಭುತ್ವ-ವಿರೋಧಿ ನಿಲುವಿನ ಬದಲಾವಣೆಯನ್ನು ಕೂಡ ಸೂಚಿಸುತ್ತದೆ. ಒಂದು ಆಧುನಿಕ ಸಮಾಜದಲ್ಲಿ ಸರ್ಕಾರವು ನಾಗರಿಕರಿಗೆ ತಕ್ಕುನಾದ ಸರಕು ಮತ್ತು ಸೇವೆಗಳನ್ನು ಪುಕ್ಕಟೆಯಾಗಿ, ಅದು ಜನರ ಹಕ್ಕು ಎಂಬ ನೆಲೆಯಲ್ಲಿ ಒದಗಿಸುತ್ತದೆ. ಹಲವು ಹತ್ತು ಸಾರ್ವಜನಿಕ ಸ್ವತ್ತುಗಳು ಅಂತಹ ಸರಕುಗಳನ್ನು ಉತ್ಪಾದಿಸುತ್ತವೆ ಮತ್ತು ಸೇವೆಗಳನ್ನು ಒದಗಿಸುತ್ತವೆ. ಸಾಮಾನ್ಯವಾಗಿ ಅಂತಹ ಸಾರ್ವಜನಿಕ ಸ್ವತ್ತುಗಳಿಂದ ಉತ್ಪಾದಿಸಲಾದ ಸರಕುಗಳು ಮತ್ತು ಒದಗಿಸುವ ಸೇವೆಗಳು ಇರುವುದೇ ನಾಗರಿಕರ ಅನುಭೋಗಕ್ಕಾಗಿ.

ಈ ಸರಕು-ಸೇವೆಗಳು ಜನರಿಗೆ ಸಾಧ್ಯವಾದಷ್ಟು ಮಟ್ಟಿಗೆ ಉಚಿತವಾಗಿ ಲಭ್ಯವಾಗಬೇಕು ಎಂಬ ಅಭಿಪ್ರಾಯವನ್ನು ಬಹಳ ಮಂದಿ ಅರ್ಥಶಾಸ್ತ್ರಜ್ಞರು ಬಹಳ ಹಿಂದಿನಿಂದಲೂ ಗಟ್ಟಿಯಾಗಿ ವ್ಯಕ್ತಪಡಿಸುತ್ತಲೇ ಬಂದಿದ್ದಾರೆ. ಪ್ರತಿಯೊಬ್ಬರೂ ಯಾವುದೇ ಶುಲ್ಕ ಪಾವತಿಸದೆ ಬಳಸಬಹುದು ಎಂಬ ಭಾವನೆಯ ಮೇಲೆ ಸರ್ಕಾರವು ಉದ್ಯಾನದಲ್ಲಿ ಒಂದು ಬೆಂಚ್‌ಅನ್ನು ಒದಗಿಸುತ್ತದೆ. ಪ್ರತಿಯೊಬ್ಬರೂ ರೈಲ್ವೆ ಪ್ಲಾಟ್ ಫಾರ್ಮ್‌ಅನ್ನು ಬಳಸಬಹುದು, ಹೆಚ್ಚೆಂದರೆ, ಒಂದು ನಾಮಮಾತ್ರ ಶುಲ್ಕ ಪಾವತಿಯ ಮೇಲೆ(ಪ್ಲಾಟ್ ಫಾರ್ಮ್ ಟಿಕೆಟ್ ಖರೀದಿಯ ಮೂಲಕ); ಪ್ರತಿಯೊಬ್ಬರೂ ಉಚಿತವಾಗಿ ಅಥವಾ ನಾಮಮಾತ್ರ ಶುಲ್ಕ ಪಾವತಿಯೊಂದಿಗೆ ಒಂದು ಸಾರ್ವಜನಿಕ ಪ್ರಾಚ್ಯವಸ್ತುಸಂಗ್ರಹಾಲಕ್ಕೆ ಭೇಟಿ ನೀಡಬಹುದು. ನಿಜ, ಈ ಸರಕಾರ ಹೀಗೆ ಸಾರ್ವಜನಿಕ ಸೇವೆಗಳು ಜನರಿಗೆ ಉಚಿತವಾಗಿ ಲಭ್ಯವಾಗಬೇಕು ಎಂಬ ತತ್ವವನ್ನು ದುರ್ಬಲಗೊಳಿಸುತ್ತಿದೆ, ಹೆಚ್ಚಿನ ಸೇವೆಗಳಿಗೆ ಬಳಕೆ ಶುಲ್ಕಗಳನ್ನು ಏರಿಸುತ್ತಿದೆ. ಆದಾಗ್ಯೂ, ಅಂತಹ ಶುಲ್ಕಗಳು ನಾಮಮಾತ್ರ ಎಂಬ ತತ್ವವನ್ನು ಹೆಚ್ಚು ಕಡಿಮೆ ಒಪ್ಪಿಕೊಳ್ಳಲಾಗಿದೆ.

ಸಾರ್ವಜನಿಕ ಸ್ವತ್ತುಗಳು ಉತ್ಪಾದಿಸುವ ಸರಕು/ಸೇವೆಗಳು ಪುಕ್ಕಟೆಯಾಗಿ ದೊರಕುವ ಅಥವಾ ಹೆಚ್ಚೆಂದರೆ ನಾಮಮಾತ್ರ ಶುಲ್ಕ ಪಾವತಿಸುವ ಅಂಶವು, ಎಲ್ಲ ಬಳಕೆದಾರರೂ ಸಮಾನರು, ನಾಗರಿಕರಾಗಿ ಅವರೇ ಈ ಸಾರ್ವಜನಿಕ ಸ್ವತ್ತುಗಳ ಸಹ-ಮಾಲೀಕರು ಮತ್ತು ಅವರ ಪರವಾಗಿ ಸರ್ಕಾರವು ನಾಮಮಾತ್ರವಾಗಿ ಈ ಆಸ್ತಿಗಳ ಮಾಲಿಕತ್ವವನ್ನು ಹೊಂದಿದೆ ಎಂಬ ತತ್ವವನ್ನು ಒಪ್ಪಿಕೊಳ್ಳಲಾಗಿದೆ. ಹಾಗಾಗಿ, ಸಾರ್ವಜನಿಕ ಸ್ವತ್ತುಗಳು ಸಾರ್ವಜನಿಕರ ಅಭಿಪ್ರಾಯ ವ್ಯಾಪ್ತಿಗೆ ಒಳಪಡುತ್ತವೆ ಮತ್ತು ಸಾರ್ವಜನಿಕರ ಹಕ್ಕುಗಳ ವ್ಯಾಪ್ತಿಗೆ ಒಳಪಡುತ್ತವೆ. ಎಲ್ಲಾ ನಾಗರಿಕರೂ ಸಮಾನ ನೆಲೆಯಲ್ಲಿ ಅವುಗಳನ್ನು ಅನುಭೋಗಿಸಬಹುದಾಗಿದೆ.

ಸಾರ್ವಜನಿಕ ಸ್ವತ್ತುಗಳ ಒಡೆತನ ಮತ್ತು ಅವುಗಳ ಅನುಭೋಗದ ಸಂಬಂಧವಾಗಿ ಎಲ್ಲಾ ನಾಗರಿಕರೂ ಸಮಾನರು ಎಂಬ ಈ ಸನ್ನಿವೇಶಕ್ಕೆ ತದ್ವಿರುದ್ಧವಾಗಿ, ಮಾರುಕಟ್ಟೆಯು ಮೂಲತಃ ಅಸಮಾನತೆಯಿಂದ ಕೂಡಿದೆ. ಅಲ್ಲಿ ಒಬ್ಬ ವ್ಯಕ್ತಿಯ ಮಹತ್ವವು ಅವನ ಖರೀದಿ ಶಕ್ತಿಯ ಪ್ರಮಾಣವನ್ನು ಅವಲಂಬಿಸಿರುತ್ತದೆ. ಹಾಗಾಗಿ, ಸರ್ಕಾರವು ಒಂದು ಸಾರ್ವಜನಿಕ ಆಸ್ತಿಯನ್ನು ಖಾಸಗಿಯವರಿಗೆ ಹಸ್ತಾಂತರಿಸಿದಾಗ, ಆ ಆಸ್ತಿಯಿಂದ ಉತ್ಪಾದಿಸಲಾದ ಸರಕು, ಅದನ್ನು ಸಮಾನವಾಗಿ ಅನುಭೋಗಿಸಬಹುದಾದ ಸಾರ್ವಜನಿಕ ವ್ಯಾಪ್ತಿಯಲ್ಲಿ ಪ್ರತೀ ನಾಗರಿಕರಿಗೂ ಲಭ್ಯವಾಗುವುದರ ಬದಲು, ಹೆಚ್ಚಿನ ಖರೀದಿ ಶಕ್ತಿಯುಳ್ಳ ಕೆಲವರಿಗೆ ಮಾತ್ರ ಲಭಿಸುವ ಸರಕಾಗಿ ಬಿಡುತ್ತದೆ. ಇದು, ಸಾಮಾನು-ಸರಂಜಾಮುಗಳ ಸಾರ್ವಜನಿಕ ವ್ಯಾಪ್ತಿಯಿಂದ ಬರಿಯ ಸರಕುಗಳ ವ್ಯಾಪ್ತಿಗೆ ಒಳಪಡುವ ಬದಲಾವಣೆಯಾಗುತ್ತದೆ. ಅಥವಾ, ಹಕ್ಕುಗಳ ವ್ಯಾಪ್ತಿಯಿಂದ ಖರೀದಿ ಶಕ್ತಿಯ ವ್ಯಾಪ್ತಿಗೆ ಬದಲಾಗುತ್ತದೆ.

ಇದು ಪ್ರಜಾಪ್ರಭುತ್ವವನ್ನು ಮೊಟಕುಗೊಳಿಸುವ ಕ್ರಮ, ಸಾರ್ವಜನಿಕ ಸ್ವತ್ತುಗಳ ನಗದೀಕರಣದಿಂದಾಗಿ ಸಾರ್ವಜನಿಕ ಸರಕು/ಸೇವೆಗಳನ್ನು ಒಂದು ಹಕ್ಕಾಗಿ ಅನುಭೋಗಿಸುತ್ತಿದ್ದ ಬಹುಪಾಲು ವ್ಯಕ್ತಿಗಳನ್ನು ಅವುಗಳ ಬಳಕೆಯಿಂದ ಹೊರಗಿಡುವ ಕ್ರಮವಾಗಿ ಬಿಡುತ್ತದೆ. ಈ ರೀತಿಯ "ನಗದೀಕರಣ"ವು ಆದಾಯ ಹಂಚಿಕೆಯಲ್ಲಿ ತಿರೋಗಾಮಿಯಾಗಿದೆ ಎಂಬುದು ಎಲ್ಲರಿಗೂ ತಿಳಿದಿದೆ ಮತ್ತು ಅದನ್ನು ಇಲ್ಲಿ ಉಲ್ಲೇಖಿಸಲಾಗಿದೆ ಕೂಡ. ಇಂತಹ ತಿರೋಗಾಮಿ ಆದಾಯ ಹಂಚಿಕೆಯ ಜೊತೆಗೆ, ಇಲ್ಲಿಯವರೆಗೆ ಅನಿರ್ಬಂಧಿತ ರೀತಿಯಲ್ಲಿ ಅನುಭೋಗಿಸುತ್ತಿದ್ದ ರಸ್ತೆಯನ್ನು ಬಳಕೆ ಶುಲ್ಕದ ಕಾರಣದಿಂದಾಗಿ ಬಳಸಲಾಗದ ಅಶಕ್ತತೆ, ರೈಲ್ವೆ ಪ್ಲಾಟ್ ಫಾರ್ಮ್‌ಅನ್ನು ಪ್ರವೇಶಿಸುವ ಅಶಕ್ತತೆ, ಇವುಗಳು ಒಬ್ಬ ನಾಗರಿಕನ ಹಕ್ಕುಗಳನ್ನು ಮೊಟಕುಗೊಳಿಸುತ್ತವೆ. ಬಹಿಷ್ಕಾರವನ್ನು ಒಳಗೊಂಡಿರುವ ಸರಕೀಕರಣದ ಪ್ರತಿಯೊಂದು ಕ್ರಿಯೆಯೂ ಪೌರತ್ವದ ವ್ಯಾಪ್ತಿಯನ್ನು ಕುಗ್ಗಿಸುತ್ತದೆ. ಹೀಗೆ ಪ್ರಸ್ತುತ ಸರ್ಕಾರವು ನಾಗರಿಕರ ಸಮಾನ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಬದಲಾಗಿ ಆರ್ಥಿಕ ವರ್ಗಭೇದವನ್ನು ಹೇರುವ ಸರಕೀಕರಣದ ಭರಾಟೆಯನ್ನು ಪ್ರಾರಂಭಿಸಿದೆ.

ನಾರ್ವೆ ಎಡಕೂಟ ವಿಜಯ, ಉತ್ತರ ಯುರೋಪಿನ ಎಡವಾಲುವಿಕೆ

ಜಗದ ಸುತ್ತ

ವಸಂತರಾಜ ಎನ್.ಕೆ.

ನಾರ್ವೆಯ ಪಾರ್ಲಿಮೆಂಟರಿ ಚುನಾವಣೆಯಲ್ಲಿ ನಡು-ಎಡ ಕೂಟ ವಿಜಯ ಸಾಧಿಸಿದೆ. ಇದರೊಂದಿಗೆ ಉತ್ತರ ಯುರೋಪಿನ (ನಾರ್ಡಿಕ್ ದೇಶಗಳು ಎಂದು ಕರೆಯಲಾಗುವ) ಎಲ್ಲ ಐದು ದೇಶಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಮೊದಲ ಬಾರಿಗೆ ನಡು-ಎಡಕೂಟದ ಸರಕಾರಗಳು ಆಳುವಂತಾಗಿರುವುದು ಮಹತ್ವದ ಬೆಳವಣಿಗೆ.



ಕಳೆದ ವಾರ ನಡೆದ ಚುನಾವಣೆಗಳಲ್ಲಿ ಲೇಬರ್ ಪಕ್ಷ, ಸೋಶಲಿಸ್ಟ್ ಎಡ ಪಕ್ಷ ಮತ್ತು ನಡುಪಂಥೀಯ ಪಕ್ಷಗಳಿಗೆ 169 ಸೀಟುಗಳಲ್ಲಿ 100 ಸೀಟುಗಳು ಬಂದಿದ್ದು, ಅವು ಸ್ಪಷ್ಟ ಬಹುಮತ ಪಡೆದು ಸರಕಾರ ರಚಿಸುವ ಜನಾದೇಶ ಪಡೆದಿವೆ. ಕಳೆದ ಪಾರ್ಲಿಮೆಂಟಿನಲ್ಲಿ ನಡು-ಬಲಪಂಥೀಯ ಕೂಟ 88 ಸೀಟು ಪಡೆದಿದ್ದು ನಡು-ಎಡಕೂಟ 81 ಸೀಟು ಗಳಿಸಿತ್ತು. ಕಳೆದ ಸರಕಾರದ ನಾಯಕತ್ವ ವಹಿಸಿದ್ದ ಎರ್ನಾ ಸೊಲ್ಬರ್ಗ್ ಕಳೆದ ಎರಡು ಅವಧಿಗಳಿಗೆ ಪ್ರಧಾನಿಯಾಗಿದ್ದರು.

ಆಳುವ ಕೂಟವಾಗಲಿರುವ ಪಕ್ಷಗಳಲ್ಲಿ ಲೇಬರ್ ಪಕ್ಷ 48 ಸೀಟು (ಶೇ.26.3 ಮತ), ನಡುಪಂಥೀಯ ಪಕ್ಷ 28 ಸೀಟು (ಶೇ.13.5) ಮತ್ತು ಸೋಶಲಿಸ್ಟ್ ಎಡ ಪಕ್ಷ 13 ಸೀಟು(ಶೇ. 7.6) ಗಳನ್ನು ಪಡೆದಿವೆ. ಕಳೆದ ಬಾರಿ ಆಳುವ ಕೂಟವಾಗಿದ್ದ ಕನ್ಸರ್ವೇಟಿವ್ ಪಕ್ಷ 36 (ಶೇ.20.4) ಸೀಟುಗಳನ್ನು ಗಳಿಸಿದೆ. ಕಳೆದ ಬಾರಿಗೆ ಹೋಲಿಸಿದರೆ 9 ಸೀಟುಗಳನ್ನು ಮತ್ತು ಶೇ. 4.7 ಮತಗಳನ್ನು ಕಳೆದುಕೊಂಡಿದೆ. ಕಳೆದ ಬಾರಿಯ ಆಳುವ ಕೂಟದ ಭಾಗವಾಗಿದ್ದ ಪ್ರೋಗ್ರೆಸ್ ಪಕ್ಷ 21 ಸೀಟು (ಶೇ. 3.5 ಮತ), ಲಿಬರಲ್ ಪಕ್ಷ 8 ಸೀಟು (ಶೇ. 4.6 ಮತ), ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಪಕ್ಷ 3 ಸೀಟು (ಶೇ. 3.8ಮತ) ಗಳಿಸಿವೆ. ಲಿಬರಲ್ ಪಾರ್ಟಿ ಬಿಟ್ಟರೆ, ಕಳೆದ ಬಾರಿಯ ಆಳುವ ಕೂಟದ ಇತರ ಎಲ್ಲ ಪಕ್ಷಗಳು ಸೀಟು ಮತ್ತು ಶೇಕಡಾವಾರು ಮತಗಳನ್ನು ಕಳೆದುಕೊಂಡಿವೆ.


ಲೇಬರ್ ಪಕ್ಷ ಎಂದಿನಂತೆ ದೇಶದ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದ್ದರೂ, ಸೋಶಲಿಸ್ಟ್ ಎಡ ಪಕ್ಷ ಮತ್ತು ನಡುಪಂಥೀಯ ಪಕ್ಷಗಳ ಜತೆ ಮಾತುಕತೆ ನಡೆಸಿ ಸರಕಾರ ರಚಿಸಬೇಕಾಗಿದೆ. ಲೇಬರ್ ಪಕ್ಷದ ನಾಯಕ 61 ಪಕ್ಷದ ಮಾಜಿ ಉದ್ಯಮಿ ಹಾಗೂ ಸರಕಾರಿ ಅಧಿಕಾರಿ ಗಾಹರ್ ಸ್ಟೋರ್ ಪ್ರಧಾನಿಯಾಗಲಿದ್ದಾರೆ.

ಕೆಂಪು ಪಕ್ಷ ಎಂಬ ಹೆಸರಿನ ಕಮ್ಯುನಿಸ್ಟ್ ಪಕ್ಷ 8 ಸೀಟು (ಶೇ. 4.7 ಮತ) ಗಳಿಸಿದೆ. ಅದು ಕಳೆದ ಚುನಾವಣೆಗಿಂತ 7 ಸೀಟುಗಳನ್ನು ಹೆಚ್ಚು ಪಡೆದಿರುವುದು ಮಾತ್ರವಲ್ಲದೆ ಶೇ. 2.3 ಹೆಚ್ಚು ಮತ ಗಳಿಸಿ ಮತಗಳಿಕೆಯನ್ನು ಇಮ್ಮಡಿ ಮಾಡಿಕೊಂಡಿದೆ ಎಂಬುದು ಗಮನಾರ್ಹ. ಪರಿಸರವಾದಿ ಗ್ರೀನ್ ಪಕ್ಷ 3 ಸೀಟು (ಶೇ.3.9 ಮತ) ಗಳಿಸಿದೆ. ಅದು ಸಹ ಕಳೆದ ಚುನಾವಣೆಗಿಂತ 2 ಸೀಟುಗಳನ್ನು ಹೆಚ್ಚು ಪಡೆದಿರುವುದು ಮಾತ್ರವಲ್ಲದೆ ಶೇ. 0.7 ಹೆಚ್ಚು ಮತ ಗಳಿಸಿದೆ. ಆದರೆ ಕೆಂಪು ಮತ್ತು ಗ್ರೀನ್ ಪಕ್ಷಗಳು ಲೇಬರ್ ನಾಯಕತ್ವದ ಆಳುವ ಕೂಟವನ್ನು ಸೇರುವುದಿಲ್ಲ ಎಂದು ತಿಳಿದು ಬಂದಿದೆ. ಇವಿಲ್ಲದೆಯೇ 3 ಪಕ್ಷಗಳ ಕೂಟಕ್ಕೆ ಸ್ಪಷ್ಟ ಬಹುಮತವಿದೆ. ಒಟ್ಟಾರೆಯಾಗಿ ಹೇಳಬೇಕೆಂದರೆ ನಾರ್ವೆ ರಾಜಕೀಯವಾಗಿ ಎಡದತ್ತ ವಾಲಿದೆ ಎಂಬುದು ಸ್ಪಷ್ಟ.

ಈ ಎಡದತ್ತ ವಾಲಿಕೆ ಇತರ ನಾಲ್ಕು ನಾರ್ಡಿಕ್ ದೇಶಗಳಲ್ಲೂ (ಸ್ವೀಡನ್, ಡೆನ್ಮಾರ್ಕ್, ಐಸ್ ಲ್ಯಾಂಡ್, ಫಿನ್ ಲ್ಯಾಂಡ್) ಇತ್ತೀಚಿನ ಚುನಾವಣೆಗಳಲ್ಲಿ ಕಂಡು ಬಂದಿದೆ ಎಂಬುದು ಇನ್ನೂ ಗಮನಾರ್ಹ. ನೆರೆಯ ಡೆನ್ಮಾರ್ಕ್ ನಲ್ಲಿ 2019ರಲ್ಲಿ ನಡೆದ ಪಾರ್ಲಿಮೆಂಟ್ ಚುನಾವಣೆಯಲ್ಲಿ ಸಹ ಅಲ್ಲಿನ ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷದ ನಾಯಕತ್ವದ ಇತರ ಐದು ಎಡ ಪಕ್ಷಗಳ ಕೂಟ 179ರಲ್ಲಿ 93 ಸೀಟು ಪಡೆದು ಹಿಂದೆ ಅಧಿಕಾರದಲ್ಲಿದ್ದ ಡೇನಿಶ್ ಪೀಪಲ್ಸ್ ಪಾರ್ಟಿಯ ನಡು-ಬಲಪಂಥೀಯ ಕೂಟವನ್ನು ಸೋಲಿಸಿ ಅಧಿಕಾರ ವಹಿಸಿಕೊಂಡಿದೆ.

ಸ್ವೀಡನ್ ನಲ್ಲಿ 2018ರಲ್ಲಿ ನಡೆದ ಚುನಾವಣೆಯಲ್ಲಿ 100 ಸೀಟು ಪಡೆದ ಸೋಶಿಯಲ್ ಡೆಮೊಕ್ರಾಟ್ ಪಕ್ಷದ ನಾಯಕತ್ವದ ಎಡ ಪಕ್ಷ, ಲಿಬರಲ್, ಮತ್ತು ಗ್ರೀನ್ ಪಕ್ಷಗಳಿರುವ ಎಡ ಕೂಟ ಅಲ್ಪಸಂಖ್ಯಾತ ಸರಕಾರ ಅಧಿಕಾರ ವಹಿಸಿಕೊಂಡಿದೆ. ವಲಸೆಗಾರ-ವಿರೋಧಿ 62 ಸೀಟು ಗಳಿಸಿದ ಉಗ್ರ ಬಲಪಂಥೀಯ ಸ್ವಿಡನ್ ಡೆಮೊಕ್ರಾಟರೊಂದಿಗೆ ಸರಕಾರದಲ್ಲಿ ಭಾಗವಹಿಸಲು ಲಿಬರಲ್ ಮತ್ತು ನಡುಪಂಥೀಯ ಪಕ್ಷಗಳು ತಯಾರಿಲ್ಲವಾದ್ದರಿಂದ, 70 ಸೀಟು ಪಡೆದ ಎರಡನೆ ಅತಿದೊಡ್ಡ ಪಕ್ಷವಾದ ನಡುಪಂಥೀಯ ಮೋಡರೇಟ್ ಪಕ್ಷಕ್ಕೆ ಸರಕಾರ ರಚಿಸಲು ಸಾಧ್ಯವಾಗಲಿಲ್ಲ. ಇಲ್ಲಿ ಹಿಂದೆನೂ ಸೋಶಿಯಲ್ ಡೆಮೊಕ್ರಾಟ್ ಪಕ್ಷದ ಸರಕಾರವೇ ಇತ್ತು.

ಫಿನ್‌ಲ್ಯಾಂಡಿನಲ್ಲಿ 2019ರ ಪಾರ್ಲಿಮೆಂಟಿನ ಚುನಾವಣೆಗಳಲ್ಲಿ ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷದ ನಾಯಕತ್ವದ ಎಡ-ನಡುಪಂಥೀಯ ಕೂಟ, ಹಿಂದಿನ ನಡು-ಬಲಪಂಥೀಯ ಕೂಟವನ್ನು ಸೋಲಿಸಿ ಅಧಿಕಾರ ವಹಿಸಿಕೊಂಡಿದೆ. ಹಿಂದಿನ ಬಾರಿ ಸರಕಾರದ ನಾಯಕತ್ವ ವಹಿಸಿದ್ದ ನಡುಪಂಥೀಯ ಪಕ್ಷ ಪರಾಭವಗೊಂಡು ಮೊದಲ ಸ್ಥಾನದಿಂದ ನಾಲ್ಕನೆಯ ಸ್ಥಾನಕ್ಕೆ ಕುಸಿಯಿತು. 1917ರ ನಂತರದ ಅವಧಿಯ ಅತ್ಯಂತ ಕಡಿಮೆ ಸೀಟು/ಮತ ಗಳಿಸಿದೆ. ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷ 1999ರ ನಂತರ ಮೊದಲ ಬಾರಿಗೆ ಮೊದಲನೆಯ ಸ್ಥಾನವನ್ನು ಮತ್ತೆ ಪಡೆದಿದೆ. ಅದು ಗ್ರೀನ್ ಲೀಗ್, ನಡುಪಂಥೀಯ ಪಕ್ಷ, ಎಡ ಕೂಟ, ಪೀಪಲ್ಸ್ ಪಾರ್ಟಿ ಜತೆ 200 ಸೀಟುಗಳ ಸದನದಲ್ಲಿ 116 ಸೀಟುಗಳ ಬೆಂಬಲ ಪಡೆದ ಸರಕಾರ ರಚಿಸಿತು. ಇಲ್ಲೂ ನಡು-ಬಲಪಂಥೀಯ ಕೂಟದ ಪಕ್ಷಗಳು ಗಮನಾರ್ಹ ಪ್ರಮಾಣದಲ್ಲಿ ಸೀಟು/ಮತಗಳನ್ನು ಕಳೆದುಕೊಂಡವು.


ನಾರ್ವೆ ಪ್ರಧಾನಮಂತ್ರಿ

ಐಸ್ ಲ್ಯಾಂಡಿನಲ್ಲಿ 2017ರಲ್ಲಿ ಸ್ವತಂತ್ರ ಪಕ್ಷದ ನಾಯಕತ್ವದ ಮೈತ್ರಿಕೂಟ ಸರಕಾರ ಪ್ರಧಾನಿಯ ಒಂದು ಹಗರಣದಿಂದಾಗಿ ಬಹುಮತ ಕಳೆದುಕೊಂಡು ಮಧ್ಯಂತರ ಚುನಾವಣೆ ನಡೆಯಿತು. ಆ ಚುನಾವಣೆಯ ನಂತರ ಎಡ-ಗ್ರೀನ್ ಕೂಟದ ನಾಯಕತ್ವದ ನಡು-ಎಡ ಕೂಟದ ಸರಕಾರ ಅಧಿಕಾರವಹಿಸಿಕೊಂಡಿದೆ.

ಎಲ್ಲ ಐದು ನಾರ್ಡಿಕ್ ದೇಶಗಳಲ್ಲಿ ಎಡ ಪ್ರಮುಖ ಪಾತ್ರ ವಹಿಸುವ ಸರಕಾರಗಳು ಏಕಕಾಲದಲ್ಲಿ ಅಸ್ತಿತ್ವಕ್ಕೆ ಬಂದಿವೆ. ಮತ್ತು ಎಲ್ಲ ದೇಶಗಳಲ್ಲಿ ಸೋಶಿಯಲ್ ಡೆಮೊಕ್ರಾಟ್ (ಸ್ವೀಡನ್ ಬಿಟ್ಟರೆ) ಮತ್ತು ಎಡ ಪಕ್ಷಗಳು ಸೀಟು/ಮತ ಗಳಿಕೆಯನ್ನು ಹೆಚ್ಚಿಸಿಕೊಂಡಿವೆ ಎಂಬುದು ಗಮನಾರ್ಹ ಬೆಳವಣಿಗೆ. 1980ರ ದಶಕದ ವರೆಗೆ ಈ ಎಲ್ಲ ದೇಶಗಳಲ್ಲಿ ಸೋಶಿಯಲ್ ಡೆಮೊಕ್ರಾಟ್ ಪಕ್ಷಗಳು ಅತಿ ದೊಡ್ಡ ಪಕ್ಷಗಳಾಗಿದ್ದು ಬಹುಮತ ಪಡೆದು ಸರಕಾರ ನಡೆಸುತ್ತಿದ್ದವು. ಆದರೆ 1990ರ ದಶಕದಲ್ಲಿ ನಡು-ಬಲಪಂಥೀಯ ಪಕ್ಷಗಳು ಬೆಳೆದು ಸರಕಾರ ರಚಿಸಲು ಆರಂಭಿಸಿದ್ದವು. ■

ಟ್ರಂಪ್ ವಾದಕ್ಕೆ ಕ್ಯಾಲಿಫೋರ್ನಿಯದಲ್ಲಿ ಭಾರೀ ಹಿನ್ನಡೆ, ಮುಖಭಂಗ



ಟ್ರಂಪ್ ಅಧ್ಯಕ್ಷೀಯ ಚುನಾವಣೆ ಸೋತರೂ ಟ್ರಂಪ್ ವಾದ ಸೋತಿಲ್ಲ. ಅಮೆರಿಕದ ಪಾರ್ಲಿಮೆಂಟಿನ ಮೇಲೆ ಭೌತಿಕ ದಾಳಿಯೊಂದಿಗೆ ಆರಂಭಿಸಿ, ಟ್ರಂಪ್ ವಾದದ ಮುಂದುವರಿಕೆಯಾಗಿ ಅಲ್ಲಿನ ಪ್ರಮುಖ ವಿರೋಧ ಪಕ್ಷವಾದ ರಿಪಬ್ಲಿಕನ್ ಪಕ್ಷ ಈಗಾಗಲೇ ದುರ್ಬಲವಾದ ಪ್ರಜಾಪ್ರಭುತ್ವದ ಮೇಲೆ ಹೊಸ ದಾಳಿಗಳನ್ನು ನಡೆಸುತ್ತಿದೆ. ಪಾರ್ಲಿಮೆಂಟಿನ ಮೇಲೆ ದಾಳಿ ಮಾಡಿದವರನ್ನು ಖುಲ್ಲಂ ಖುಲ್ಲಾ ಸಮರ್ಥಿಸುವುದು ಅಲ್ಲದೆ, ಅವರನ್ನು 'ರಾಜಕೀಯ ಕೈದಿ'ಗಳಾಗಿ ಪರಿಗಣಿಸಬೇಕು ಎಂದು ವಾದಿಸಲಾಗುತ್ತದೆ. ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಗಳು ಚುನಾವಣೆ ಸೋತಾಗಲೆಲ್ಲ ಚುನಾವಣೆಯಲ್ಲಿ ಅಕ್ರಮಗಳ ಆಪಾದನೆ ಮಾಡಿ, ಫಲಿತಾಂಶವನ್ನು ನಿರಾಕರಿಸಲಾಗುತ್ತದೆ. ಚುನಾವಣೆಯಲ್ಲಿ ಕರಿಯರು, ಲ್ಯಾಟಿನೊ ಮುಂತಾದ ಅಲ್ಪಸಂಖ್ಯಾತರನ್ನು ಅನರ್ಹಗೊಳಿಸುವ ಹೊರಗಟ್ಟುವ 'ಬದಲಾವಣೆ'ಗಳನ್ನು ರಿಪಬ್ಲಿಕನ್ ಆಳ್ವಿಕೆಯ ರಾಜ್ಯಗಳಲ್ಲಿ ತರಲಾಗುತ್ತಿದೆ. ತಮಗೆ ವಿರುದ್ಧವಾದ ಚುನಾವಣಾ ಫಲಿತಾಂಶಗಳನ್ನು ಎಲ್ಲ ಸಾಧ್ಯವಿರುವ ಕಾನೂನುಬದ್ಧ ಕಾನೂನು-ಬಾಹಿರ ಕ್ರಮಗಳಿಂದ ಬದಲಾಯಿಸಲು ಪ್ರಯತ್ನಿಸಲಾಗುತ್ತದೆ. ಕ್ಯಾಲಿಫೋರ್ನಿಯದಲ್ಲಿ ಇಂತಹ ರಿಪಬ್ಲಿಕನ್ ಪ್ರಯತ್ನಕ್ಕೆ ಭಾರೀ ಸೋಲಾಗಿದ್ದು ಅದಕ್ಕೆ ಮುಖಭಂಗವಾಗಿದೆ.

ಕ್ಯಾಲಿಫೋರ್ನಿಯ ರಾಜ್ಯದಲ್ಲಿ ಡೆಮೊಕ್ರಾಟಿಕ್ ಪಕ್ಷ ಬಲವಾಗಿದ್ದು ಅಲ್ಲಿ 2018ರ ಗವರ್ನರ್ ಚುನಾವಣೆಯಲ್ಲಿ ಡೆಮೊಕ್ರಾಟಿಕ್ ಪಕ್ಷದ ಗವಿನ್ ನ್ಯೂಸೊಮ್ ಭಾರೀ ಬಹುಮತದಿಂದ ಗೆದ್ದಿದ್ದರು. ಅವರ ಅವಧಿ ಮುಗಿಯಲು ಇನ್ನೂ 14 ತಿಂಗಳು ಇರುವಾಗಲೇ ಅವರನ್ನು 'ಹಿಂದಕ್ಕೆ ಕರೆಯುವ' ರಿಪಬ್ಲಿಕನ್ ಹತಾಶ ಪ್ರಯತ್ನಕ್ಕೆ ಭಾರೀ ಹಿನ್ನಡೆಯಾಗಿ ಅದಕ್ಕೆ ಮುಖಭಂಗವಾಗಿದೆ. ಕ್ಯಾಲಿಫೋರ್ನಿಯ ರಾಜ್ಯದಲ್ಲಿ (ಅಮೆರಿಕದಲ್ಲಿ ರಾಜ್ಯವಾರು ಹಲವು ಚುನಾವಣಾ ನಿಯಮಗಳು ಭಿನ್ನವಾಗಿರುತ್ತವೆ) ಇರುವ ಒಂದು 'ಪ್ರಗತಿಪರ' (ಆದರೆ ದುರ್ಬಲವಾದ) ಚುನಾವಣಾ ನಿಯಮದ ಪ್ರಕಾರ ಚುನಾಯಿತ ಪದವಿಗಳಿಗೆ ಆಯ್ಕೆಯಾದವರನ್ನು 'ಹಿಂದಕ್ಕೆ ಕರೆಯುವ' ಅವಕಾಶವಿದೆ. ಇದರ ದುರ್ಬಳಕೆ ಮಾಡಿ ರಿಪಬ್ಲಿಕ್ ಗವರ್ನರ್ ನ್ನು ಸ್ಥಾಪಿಸುವ ಪ್ರಯತ್ನವನ್ನು ಮಾಡಲಾಯಿತು.

ಕ್ಯಾಲಿಫೋರ್ನಿಯ ಇತ್ತೀಚೆಗೆ ಕೋವಿದ್ ಮತ್ತು ಪ್ರಾಕೃತಿಕ ವಿಕೋಪಗಳಿಂದಾಗಿ ಅಲ್ಲಿನ ಡೆಮೊಕ್ರಾಟಿಕ್ ಸರಕಾರ ಅದರ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಪ್ರಯತ್ನಿಸಿದರೂ, ಸಾಕಷ್ಟು ನ್ಯೂನತೆಗಳು ಉಳಿದು ಹೋಗಿ ಜನರಲ್ಲಿ ಅತೃಪ್ತಿ ಇತ್ತು. ಇದರ ದುರ್ಬಳಕೆ ಮಾಡಿ 'ಹಿಂದಕ್ಕೆ ಕರೆಯುವ' ಅವಕಾಶ ಬಳಸಿ ಗವರ್ನರ್ ಗವಿನ್ ನ್ಯೂಸೊಮ್ ಅವರನ್ನು ಇಳಿಸಿ, ರಿಪಬ್ಲಿಕನ್ ಗವರ್ನರ್ ಸ್ಥಾಪಿಸಲು ಹವಣಿಸಿತ್ತು. ಆದರೆ ನ್ಯೂಸೊಮ್ 2018ರಲ್ಲಿ ಬಂದ ಮತಗಳಿಗಿಂತ ಹೆಚ್ಚು (ಶೇ. 64) ಮತ ಗಳಿಸಿ ರಿಪಬ್ಲಿಕನ್ ಸಂಚು ಮಣ್ಣುಪಾಲಾಯಿತು. ಮತದಾನದ ಪ್ರಮಾಣ ಸಹ ಶೇ.60 ಇತ್ತು. ಸಾಮಾನ್ಯವಾಗಿ ಇಂತಹ 'ಹಿಂದಕ್ಕೆ ಕರೆಯುವ' ಚುನಾವಣೆಗಳಲ್ಲಿ ಮತದಾನ ಬಹಳ ಕಡಿಮೆಯಿರುತ್ತದೆ. ಆದರೆ ರಿಪಬ್ಲಿಕನ್ ಸಂಚನ್ನು ಸೋಲಿಸಲು ಜನ ಜಿದ್ದಿನಿಂದ ಬಂದು ಮತದಾನ ಮಾಡಿದ್ದಾರೆ ಎಂದು ಹೇಳಲಾಗಿದೆ.

ರಿಪಬ್ಲಿಕನ್ ಪಕ್ಷ ಆಳುವ ರಾಜ್ಯಗಳಲ್ಲಿ ಒಂದು ಕಡೆ ರಾಜ್ಯ ಸರಕಾರ ಅತ್ಯಂತ ಕೆಟ್ಟ ಕೊವಿದ್ ನಿರ್ವಹಣೆ ಮಾಡಿದ್ದು, ಇನ್ನೊಂದು ಕಡೆ ಸಾಮಾಜಿಕವಾಗಿ ಇಡೀ ದೇಶದಲ್ಲಿ ವ್ಯಾಕ್ಸೀನ್ ಮತ್ತು ಇತರ ಕೊವಿದ್-ನಿಯಂತ್ರಕ ಕ್ರಮಗಳ ವಿರುದ್ಧ ಧಾರ್ಮಿಕ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಸೋಗಿನಲ್ಲಿ ಅಪಪ್ರಚಾರ ಪ್ರತಿರೋಧ ಒಡ್ಡಿ ಪರಿಸ್ಥಿತಿಯನ್ನು ಹದಗೆಡಿಸಿತ್ತು. ಅದರಲ್ಲೂ ಡೆಮೊಕ್ರಾಟಿಕ್ ಆಳ್ವಿಕೆಯ ರಾಜ್ಯಗಳಲ್ಲಿ ಇಂತಹ ಅಪಪ್ರಚಾರ, ಪ್ರತಿರೋಧವನ್ನು ತಾರಕಕ್ಕೇರಿಸಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನ ಮಾಡಿತ್ತು. ಇವೆಲ್ಲವನ್ನೂ ದೇಶದ 8 ರಲ್ಲಿ ಒಬ್ಬ ಮತದಾರ ಇರುವ ರಾಜ್ಯವಾದ ಕ್ಯಾಲಿಫೋರ್ನಿಯ ನಿರ್ಣಾಯಕವಾಗಿ ಸೋಲಿಸಿ ರಾಜಕೀಯ ಪ್ರಬುದ್ಧತೆ ಪ್ರದರ್ಶಿಸಿದೆ.

ಕ್ಯಾಲಿಫೋರ್ನಿಯದಲ್ಲಿ ದುರ್ಬಲವಾಗಿರುವ ರಿಪಬ್ಲಿಕನ್ ಪಕ್ಷ ರಾಜ್ಯ ಮಟ್ಟದ, ವಿವಿಧ ನಗರ, ಕೌಂಟಿಗಳ 60 ವಿವಿಧ ಚುನಾಯಿತ ಪ್ರತಿನಿಧಿಗಳನ್ನು ಇಳಿಸಲು ಇಂತಹ 'ಹಿಂದಕ್ಕೆ ಕರೆಯುವ' ಪ್ರಕ್ರಿಯೆ ಆರಂಭಿಸಿದೆ. ಈ ಗವರ್ನರನ್ನು 'ಹಿಂದಕ್ಕೆ ಕರೆಯುವ' ಚುನಾವಣೆಗೆ 27 ಕೋಟಿ ಡಾಲರು ಖರ್ಚಾಗಿದೆ. ಇದು ಸಾರ್ವಜನಿಕ ಹಣದ ಪೋಲು. ಇಂತಹ 80ಕ್ಕೂ ಹೆಚ್ಚು ಪ್ರಯತ್ನಗಳು ನಡೆದಿದ್ದು ಒಂದು ಬಾರಿ ಮಾತ್ರ ಗವರ್ನರನ್ನು ಹಿಂದಕ್ಕೆ ಕರೆಯಲಾಗಿದೆ. ಹಾಗಾಗಿ 'ಹಿಂದಕ್ಕೆ ಕರೆಯುವ' ಅವಕಾಶದ ಪ್ರಗತಿಪರ ಚುನಾವಣಾ ನಿಯಮವನ್ನು ರಿಪಬ್ಲಿಕನ್ ಪಕ್ಷ 'ಪ್ರಜಾಪ್ರಭುತ್ವ-ವಿರೋಧಿ' ಹುನ್ನಾರಗಳಿಗೆ ಬಳಸುವುದನ್ನು ತಡೆಯಲು ಈ ನಿಯಮದಲ್ಲಿ ಸುಧಾರಣೆಗಳನ್ನು ತರಬೇಕೆಂಬ ಒತ್ತಾಯ ಬಂದಿದೆ. ಈಗ ಹಿಂದಿನ ಒಟ್ಟು ಮತದಾನದ ಶೇ.12ರಷ್ಟು ಮತದಾರರು ಸಹಿ ಮಾಡಿದಾಗ ಈ ಪ್ರಕ್ರಿಯೆ ಆರಂಭವಾಗುತ್ತದೆ. ಯಾವುದೇ ವೈಫಲ್ಯ ಅಥವಾ ಕಾರಣ ಬೇಕಾಗಿಲ್ಲ. ಇದಕ್ಕೆ 6 ತಿಂಗಳ ಸಮಯಾವಕಾಶವಿದೆ. ಇಂತಹ ಕ್ಷುಲ್ಲಕ ಪ್ರಕರಣಗಳನ್ನು ತಡೆಯಲು, ಕಾನೂನು-ಬಾಹಿರ, ಅನೈತಿಕ ಕ್ರಮಗಳ ಅಥವಾ ಪ್ರಮುಖ ವೈಫಲ್ಯಗಳ ನಿರ್ದಿಷ್ಟ ಕಾರಣ ಕೊಡಬೇಕು ಹಾಗೂ ಶೇ. 25ರಷ್ಟು ಮತದಾರರು 1 ತಿಂಗಳೊಳಗೆ ಸಹಿ ಹಾಕಬೇಕು ಎಂದು ಬದಲಾಯಿಸಬೇಕು. ಈಗ 'ಹಿಂದಕ್ಕೆ ಕರೆಯುವ' ಮತದಾನದೊಂದಿಗೆ ಅದರಲ್ಲಿ ಶೇ. 50ಕ್ಕಿಂತ ಹೆಚ್ಚು ಜನ ಹಿಂದಕ್ಕೆ ಕರೆಯಲು ಸಮ್ಮತಿಸಿದರೆ, ಮುಂದಿನ ಪ್ರತಿನಿಧಿ ಯಾರಾಗಬೇಕೆಂಬುದಕ್ಕೂ ಮತದಾನ ನಡೆಯುತ್ತದೆ. ಇದರಲ್ಲಿ ಹಿಂದಿನ ಪ್ರತಿನಿಧಿ ಅಭ್ಯರ್ಥಿಯಾಗುವಂತಿಲ್ಲ ಮತ್ತು ಅಲ್ಲಿರುವ ಅಭ್ಯರ್ಥಿಗಳಲ್ಲಿ ಹೆಚ್ಚಿನ ಮತ ಪಡೆಯುವ ವ್ಯಕ್ತಿ ಚುನಾಯಿತನಾಗುತ್ತಾನೆ. ಅಂದರೆ ಅಲ್ಪಸಂಖ್ಯಾತ ಮತ ಪಡೆಯುವ ಅಭ್ಯರ್ಥಿ ಸಹ ಚುನಾಯಿತನಾಗಬಹುದು. ಈಗಿನ ಪ್ರತಿನಿಧಿ ಅಭ್ಯರ್ಥಿ ಪಟ್ಟಿಯಲ್ಲಿರಬೇಕು ಎಂಬ ಬದಲಾವಣೆ ತರಬೇಕು ಎಂದು ಸೂಚಿಸಲಾಗಿದೆ. ■

JANASHAKTHI KANNADA VARA PATRIKE September 20-26, 2021 Price: Rs. 10/- Date of Publication: 17 September 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ನರೇಗಾದಲ್ಲಿ ಕೆಲಸ ಮಾಡಿದ ಕೃಷಿ ಕೂಲಿಕಾರರ ಬಾಕಿ ಹಣ ಪಾವತಿಗಾಗಿ ರಾಜ್ಯದಾದ್ಯಂತ ಪ್ರತಿಭಟನೆ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕೆಲಸಗಾರರಿಗೆ ಬಾಕಿ ಕೂಲಿ ಹಣ ನೀಡಬೇಕು, ಕಾಯಕ ಬಂಧುಗಳಿಗೆ ಪ್ರೋತ್ಸಾಹ ಧನ ಹಾಗೂ ಗುರುತಿನ ಚೀಟಿ ನೀಡಬೇಕು. 200 ದಿನಗಳ ಕೆಲಸಕ್ಕಾಗಿ ಒತ್ತಾಯಿಸಿ 15 ಸೆಪ್ಟೆಂಬರ್ 2021 ರಂದು ನಡೆದ ಹೋರಾಟ ಯಶಸ್ವಿಯಾಗಿದೆ.

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಗ್ರಾಮೀಣ ಉದ್ಯೋಗ ಖಾತರಿ ಕೆಲಸದಲ್ಲಿ ತೊಡಗಿರುವ ಕೂಲಿಕಾರರಿಗೆ ಕಳೆದ ಕೆಲವೂ ತಿಂಗಳುಗಳಿಂದ ವೇತನ ಪಾವತಿ ಮಾಡದೇ ಸತಾಯಿಸಲಾಗುತ್ತಿದೆ. ಕೋವಿಡ್ ಸಾಂಕ್ರಾಮಿಕದ ಕಾರಣದಿಂದ ಈ ಗ್ರಾಮೀಣ ಕೂಲಿಕಾರರಿಗೆ ಯಾವುದೇ ಕೆಲಸ ಸಿಗದಂತಾಗಿ ಅವರು ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಅವರು ಹೆಚ್ಚಾಗಿ ಮಹಿಳೆಯರು, ಹೊಟ್ಟೆ ಪಾಡಿಗಾಗಿ ಇದೇ ಗ್ರಾಮೀಣ ಉದ್ಯೋಗ ಖಾತ್ರಿ ಕೆಲಸವನ್ನು ಅವಲಂಬಿಸಿದ್ದಾರೆ. ಹಬ್ಬಗಳ ದಿನಗಳಲ್ಲಿ ಅವರ ಕೈಯಲ್ಲಿ ಕಾಸಿಲ್ಲದೆ ಅವರು ತೀವ್ರ ನೋವನ್ನು ಅನುಭವಿಸಿದ್ದಾರೆ. ಆದ್ದರಿಂದ ಕೂಲಿ ಪಾವತಿ ಮಾಡುವಂತೆ, ಕಾಯಕ ಬಂಧುಗಳಿಗೆ ಸಕಾಲಕ್ಕೆ ಪ್ರೋತ್ಸಾಹ ಧನ ಮತ್ತು ಗುರುತಿನ ಚೀಟಿ ನೀಡಬೇಕು. ವರ್ಷದಲ್ಲಿ 200 ದಿನಗಳ ಕೆಲಸಕ್ಕಾಗಿ ಒತ್ತಾಯಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ರಾಜ್ಯ ಸಮಿತಿ ನೇತೃತ್ವದಲ್ಲಿ ಸೆಪ್ಟೆಂಬರ್ 15, 2021 ರಂದು ಕರೆ ನೀಡಿದ ಪ್ರತಿಭಟನೆಗೆ ವಿವಿಧ ಜಿಲ್ಲೆಯ ಸಿಇಓ ಕಛೇರಿ, ತಾಲ್ಲೂಕು ಪಂಚಾಯತಿ ಮುಂದೆ ಯಶಸ್ವಿಯಾಗಿ ಪ್ರತಿಭಟನೆ ನಡೆಸಲಾಗಿದೆ.

ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಎಲ್.ಕೆ. ಅತೀಕ್ ಮತ್ತು ಆಯುಕ್ತರಾದ ಶ್ರೀಯುತ ಅನಿರುದ್ಧ ಶ್ರವಣ ರವರಿಗೆ ರಾಜ್ಯ ಸಮಿತಿ ವತಿಯಿಂದ ಚಂದ್ರಪ್ಪ ಹೊಸ್ಕೇರಾ, ಕೆ. ಹನುಮೇಗೌಡ ಮನವಿಯನ್ನು ಸಲ್ಲಿಸಿದ್ದಾರೆ.















ತ್ರಿಪುರ ರಾಜ್ಯದೆಲ್ಲೆಡೆ ಸಿಪಿಐ(ಎಂ) ಕಚೇರಿಗಳ ಮೇಲಿನ ಧಾಳಿ ಖಂಡಿಸಿ ರಾಜ್ಯದಾದ್ಯಂತ ಪ್ರತಿಭಟನೆ











JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**